
ಕಲ್ಯಾಣ ಕಿರಣ

ಜೂನ್ - 2001 ಶ್ರೀ ಬೆಲೆ : ರೂ. 5-00





ದಿ.26-4-2001ರಂದು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಬಸವ ಜಯಂತಿ ಮೆರವಣಿಗೆ ಮತ್ತು ಪಥ ಸಂಚಲನ



ಧಾರವಾಡದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ

ಓಂ ಶ್ರೀ ಗುರು ಬಸವಲಿಂಗಾಯ ನಮಃ

86666

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ

ಸಂಚಿಕೆ -6 | ಜೂನ್ 2001 | ವಾರ್ಷಿಕ ಚಂದಾ 50/- ರೂ

ಮಹಾಜಗದ್ಗುರು ಲಿಂಗಾನಂದ ಜ್ಯೋತಿ

ಜ್ಯೋತಿಯ ನೋಡಿದಿರಾ ! ಆ ದಿವ್ಯ ಜ್ಯೋತಿಯ ನೋಡಿದಿರಾ
ಗುರು ಲಿಂಗಾನಂದರೆಂಬ ; ಶುಭ ನಾಮದೊಳು ಮೆರೆದು
ಜಗದ ಕತ್ತಲೆ ಕಳೆದು ; ಜನ ಮನ ಬೆಳಗಿದ ಜ್ಯೋತಿ ॥

ಮಣಿಗವಳ್ಳಿಯೊಳು ಉದಿಸಿ, ಮಂಗಳ ಬೆಳಕಾಗಿ
ಬಸವ ಧರ್ಮದ ಕಿರಣ, ವಿಶ್ವಕ್ಕೆ ಬಿತ್ತರಿಸಿದ
ಶತಕೋಟಿ ಸೂರ್ಯ ಪ್ರಕಾಶದ ಜ್ಯೋತಿ ॥

ಜಾತಿ ಭೂತವು ಹಿಡಿದ ಜಗದ ಭ್ರಾಂತಿಯ ಬಿಡಿಸಿ
ಸತ್ಯ ಧರ್ಮಾಮೃತವ, ತುತ್ತು ಮಾಡಿ ಉಣಿಸಿದ
ಬತ್ತಿದ್ದ ಧರ್ಮದ ಸೆಲೆ, ಮತ್ತೆ ಹರಿಸಿದ ಜ್ಯೋತಿ ॥

ಪಶುವಿನಂದದಿ ವಿಷಯ ಕೆಸರೊಳು ಮುಳುಗಿದ್ದ ಜನರ
ವಿಷಯದ ನಿಶೆ ಇಳಿಸಿ, ಭಸಿತವನು ಪೂಸುತ
ಪರಮಾನಂದದ ಸುಧೆಯ ಕರೆಕರೆದು ನೀಡಿದ ಜ್ಯೋತಿ ॥

ಬರಿಯ ಭ್ರಮೆಯನು ಬಿಡಿಸಿ, ಬಸವ ಮಂತ್ರವ ಕಲಿಸಿ
ಪ್ರವಚನ ಮಾಡುತ್ತ ಚರಿಪ ಜಂಗಮವಾಗಿ
ಪ್ರವಚನ ಪಿತಾಮಹರೆಂಬ ಖ್ಯಾತಿಗಳಿಸಿದ ಜ್ಯೋತಿ ॥

ಲಿಂಗ ನಿಷ್ಠೆಯ ಕಲಿಸಿ, ಜಂಗಮತತ್ವವ ತಿಳಿಸಿ
ಲಿಂಗಾಂಗ ಸಮರಸದ ಗುಂಗು ಹಿಡಿಸುತಲಿ
ದರುಶನ ಮಾತ್ರದಲಿ ಹರುಷ ನೀಡುವ ಜ್ಯೋತಿ ॥

ಜಗದ ಕಲ್ಯಾಣಕಾಗಿ, ತನು ಮನವ ಸವೆಸುತಲಿ
ಕಾರಣಕೆ ಅವತರಿಸಿ, ಕಾರ್ಯವನು ಪೂರೈಸಿ
ಬಯಲೊಳು ಬಯಲಾದ ಬ್ರಹ್ಮತೇಜದ ಜ್ಯೋತಿ ॥

ಆದಿ ಅಂತ್ಯವ ಕಳೆದು, ಜ್ಞಾನ ಬ್ರಹ್ಮವ ಉಲಿದು
ಅಂಗ ಲಿಂಗದಿ ಬೆರೆದು, ಘನಲಿಂಗವೇ ತಾನಾಗಿ
ಸಂಗಮ ಕ್ಷೇತ್ರದೊಳು, ಮಂಗಲಗೊಂಡಿಹ ಜ್ಯೋತಿ ॥

-ಮಹಾದೇವ ಗುಡೇರ್, ಗೋಕಾಕ್

('ಗುರು ವಂದನಾ' ಎಂಬ ಧ್ವನಿ ಸುರುಳಿಯಲ್ಲಿ ಈ ಗೀತೆಯನ್ನು ಧ್ವನಿ ಮುದ್ರಿಸಲಾಗಿದೆ.)

Web site : www.Lingayathism.com
Web site : www.Basavamission.com

ಅಕ್ಷರ ಜೋಡಣೆ : ರಮೇಶ್ ಲಿಂಗಾಯತ

★ ಕಲ್ಯಾಣ ಕಿರಣ ★

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ

ಸಂಚಿಕೆ -6 | ಜೂನ್ 2001 | ವಾರ್ಷಿಕ ಚಂದಾ 50 ರೂ

ಕಿರಣಗನ್ನಡಿ



ಪರಮಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳ 7ನೆಯ ಲಿಂಗೈಕ್ಯ ಸಂಸ್ಮರಣೆಯು ದಿ. 30-6-2001ರಂದು ಬಂದಿದ್ದು, ಕಲ್ಯಾಣ ಕಿರಣದ ಸಿಬ್ಬಂದಿ ವರ್ಗವು ಭಕ್ತಿಪೂರ್ವಕ ಶ್ರದ್ಧಾಂಜಲಿ ಅರ್ಪಿಸುತ್ತದೆ.

E-mail : vishwakalyana@lingayathism.com

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ :
ದೂರವಾಣಿ : 3325335 / 3322790

ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ



ಗುರು ಚರಣಕೆ ನುಡಿ ನೈವೇದ್ಯ

ಶ್ರೀಗುರುವೆ ನಾ ನಿಮ್ಮ ಅನುದಿನವು ನೆನೆಯುವೆನು
ಸದ್ಗುರು ಲಿಂಗಾನಂದ ಬಸವ ಕರುಣೆಯ ಕಂದ ॥ ಪ ॥

ಬಸವ ತತ್ತ್ವದ ಬೀಜ ಬಿತ್ತಿ ಬೆಳೆದಿಹ ತ್ಯಾಗಿ
ದಿವ್ಯ ಜಂಗಮವಾಗಿ ಚರಿಸಿದ ಸುವಿರಾಗಿ ॥ ಅ.ಪ ॥

ಅನುಭವ ಮಂಟಪದಿ ಹುಟ್ಟಿ ಬೆಳೆದಿಹ ಧರ್ಮ
ವನವಾಸಕ್ಕೈದಿರಲು ಮತಾಂಧಕರ ದ್ವೇಷದಿಂ
ಹಳಕಟ್ಟಿ ಶರಣರು ಬೆಳಕಿಗಿಟ್ಟಹ ವಚನ
ವಾಙ್ಮಯವ ಮನೆ-ಮನಕೆ ಪಸರಿಸಿಹ ಗುರುಮರುತ ॥ 1 ॥

ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು
ಧಾರವಾಡದ ದಿವ್ಯ ಬಸವಗಿರಿ ಶೃಂಗದಲಿ
ಕಾಷಾಯ ಅಂಬರವ ಧರಿಸಿದ ಸುಜಂಗಮವೆ ॥ 2 ॥

ಲಿಂಗಾಯತ ಧರ್ಮವು ಜಾತಿ ಪಂಥ ಮತವಲ್ಲ
ಧರ್ಮಗುರು ಬಸವಣ್ಣ ಇದಕೆ ಮೂಲವು ಎಲ್ಲ
ಇಷ್ಟಲಿಂಗವು ಯಾವ ದೇವತೆಯ ಕುರುಹಲ್ಲ
ಬ್ರಹ್ಮಾಂಡ ತುಂಬಿಪ್ಪ ಚೇತನದ ಕುರುಹೆಂದ ॥ 3 ॥

ಬಸವ ಧರ್ಮಕೆ ಜಾತಿವಾದಿಗಳು ಹೊದಿಸಿದ್ದ
ಮಿಥ್ಯೆಗಳ ಮುಸುಕನು ಕಿತ್ತೆಸೆದು ಬೆಳಗಿಸಿದೆ
ಬಸವ ಗುರು ಬೋಧಿಸಿದ ಪ್ರಗತಿಪರ ಚಿಂತನೆ
ಸಮತೆ-ಮಾನವತೆಯ ಮಹತಿಯಂ ಬೋಧಿಸಿದ

ಶರಣರ ಜೀವನದ ಘನತೆಯನು ಮರಣದಲಿ
ಅರಿತು ನೋಡಲಿ ಬೇಕು ಎಂಬ ಶಿವವಾಣಿಯ
ದಿಟ ಮಾಡುವಂತೆ ನಗು ನಗುತ ಇಳೆ ತೊರೆದು
ಲಿಂಗದೇವನ ಒಡಲೋಳ್ ಒಂದಾದ ಚೇತನವೆ ॥ 6 ॥

ಹರಿವ ನದಿಯ ತೆರದಿ ಜ್ಞಾನಧಾರೆಯ ನೀಡಿ
ಉರಿವ ಜ್ಯೋತಿಯೆ ಆಗಿ ಹಲವು ದೀವಿಗೆ ಹಚ್ಚಿ
ಬಸವಾತ್ಮಜೆಯ ಭಕ್ತಿ ಬಸವ ಮಾರ್ಗದಿ ನಿಲಿಸಿ
ಸಚ್ಚಿದಾನಂದನ ಬೆರೆದ ಲಿಂಗಾನಂದ ಗುರುವರ ॥ 7 ॥

-ಮಾತಾಜಿ

(ದಿನಾಂಕ 30-06-2001 ರಂದು ಆಚರಿಸಲ್ಪಡುವ ಪೂಜ್ಯ ಅಪ್ಪಾಜಿಯವರ ಏಳನೆಯ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ.)

ಸಂಪಾದಕೀಯ- 1

ಮಠಾಧಿಪತಿಗಳಿಗಿದು ಉಚಿತ ನಡೆಯೆ ?

ಚಿತ್ರದುರ್ಗದ ಮುರುಘರಾಜೇಂದ್ರ ಶಿವಮೂರ್ತಿ ಸ್ವಾಮಿಗಳು, ದಿ. 10-4-2001ರಿಂದ ದಿ.29-4-2001ರವರೆಗೆ ಮಾಡಿದ ಕೆಲಸ, ನಡೆದುಕೊಂಡ ರೀತಿ ನೋಡಿದರೆ ಇದು ಕಾವಿತೊಟ್ಟ ಸ್ವಾಮಿಗಳಿಗೆ, ಮಠಾಧೀಶರಿಗೆ ಶೋಭಿಸುವ ಕೆಲಸವೆ ? ಎಂದು ನಾವಷ್ಟೇ ಅಲ್ಲ ಧಾರವಾಡ-ಹುಬ್ಬಳ್ಳಿಯ ಜನ ಸಾಮಾನ್ಯರು ಸಹ ಹುಬ್ಬೇರಿಸುವ ಪರಿಸ್ಥಿತಿಯುಂಟಾಯಿತು. ಅವರೇನೋ ಎಲ್ಲಾ ವ್ಯವಹಾರಗಳಿಗೆ ಲೈಸನ್ಸ್ ಸಿಗುತ್ತದೆ ಎಂದು ಜಗದ್ಗುರು, ಸ್ವಾಮಿ ಎಂಬ ಪದಗಳನ್ನು ವರ್ಜಿಸಿರಬಹುದು. ಆದರೆ ಶರಣರು ಎಂಬ ಪದವನ್ನು ಸೇರಿಸಿಕೊಂಡಿರುವ ಕಾರಣ ಆ ಪರಮ ಪವಿತ್ರ ಪದ ಇವರ ವ್ಯವಹಾರಗಳಿಂದ ಕುಲಗೆಡುತ್ತದಲ್ಲ ಎಂಬ ಸಂಕಟವಾಗಿ ಶರಣರು ಎನ್ನಿಸಿಕೊಳ್ಳುವವರು ಹೀಗೆಲ್ಲ ನಡೆದುಕೊಳ್ಳಬಹುದೆ ? ಎಂದೂ ಖೇದವಾಗುತ್ತದೆ. ಧಾರವಾಡ ಹುಬ್ಬಳ್ಳಿಗಳಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳು, (ನಾನು ಈ ಪದವನ್ನೇ ಬಳಸುತ್ತೇನೆ. ಏಕೆಂದರೆ ಮೊದಲನೆಯದಾಗಿ ಕಾವಿ ತೊಟ್ಟವರನ್ನು ಸ್ವಾಮಿ ಎಂದು ಕರೆಯುವ ರೂಢಿ ಇರುವುದರಿಂದ ಅವರಿನ್ನೂ ಕಾವಿ ತೊಡುತ್ತಿರುವುದರಿಂದ ಅವರನ್ನು ಕುರಿತು ಸ್ವಾಮಿ ಪದವನ್ನು ಬಳಸೋಣ. ಎರಡನೆಯದಾಗಿ ಭಾರತ ದೇಶದಾದ್ಯಂತ ಸ್ವಾಮಿ ಪದ ಪರಿಚಯವಾಗಿರುವುದು ಮಾತ್ರವಲ್ಲ ಕೆಲವು ಕಡೆ ಸ್ವಾಮಿಗಳು, ಮಠಾಧೀಶರು ಮಾಡುವ ವ್ಯವಹಾರ ನೋಡಿ ಜನರು ದಿಗ್ಭ್ರಾಂತರಾಗಿರುವುದರಿಂದ ಅದೇ ಪದವೇ ಸೂಕ್ತ. ಶರಣ ಪದ ಇನ್ನೂ ತುಸು ಪಾವಿತ್ರ್ಯತೆಯನ್ನು ಕಾಯ್ದುಕೊಂಡಿರುವುದರಿಂದ ಅದನ್ನು ಶ್ರೀ ಶಿವಮೂರ್ತಿ ಸ್ವಾಮಿಗಳಿಗೆ ಅನ್ವಯಿಸಿ ನಾನು ಬಳಸಲು ಇಚ್ಛಿಸುವುದಿಲ್ಲ.) ಮತ್ತು ರಾಜಕಾರಣ, ಶಾಸಕ ಚಂದ್ರಕಾಂತ ಬೆಲ್ಲದ- ಉಭಯತರ ಜೋಡಿ ಮಾಡಿದ ವರ್ತನೆ ನಿಜಕ್ಕೂ ಅಸಹ್ಯ ಹುಟ್ಟಿಸುವಂತಹುದು. ಇವರ ಜೊತೆಗೆ ಕೈಗೂಡಿಸಿದವರಲ್ಲಿ ಶ್ರೀ ಭೀಮಣ್ಣ ಖಂಡ್ರೆ, ಬಸವರಾಜ ಹೊರಟ್ಟಿ, ನಡಕಟ್ಟಿ ಬಂಧುಗಳು, ಚಂದ್ರಕಾಂತ ಬೆಲ್ಲದ ಅವರ ಸೋದರ ಶಿವಣ್ಣ ಬೆಲ್ಲದ ಮತ್ತು ಅವರ ಸೋದರಿ ಶ್ರೀಮತಿ ಪಾರ್ವತಿ ಹಾಲಭಾವಿ. ಅಲ್ಲದೆ ಅತ್ಯಂತ ಸಂಭಾವಿತರಾದ ಶ್ರೀ ಜಿ.ಜಿ.ದೊಡ್ಡವಾಡ ಮತ್ತು ಶ್ರೀ ಬಸವರಾಜ ಬಿಕ್ಕಣ್ಣನವರು ಸೇರಿದ್ದರೂ ಇವರೆಲ್ಲ ಕೇವಲ ಹಿಂಬಾಲಕ ಪಾತ್ರಧಾರಿಗಳು. ಸೂತ್ರಧಾರಿಗಳೆಂದರೆ ಶ್ರೀ ಶಿವಮೂರ್ತಿ ಸ್ವಾಮಿಗಳು ಮತ್ತು ಶಾಸಕ ಚಂದ್ರಕಾಂತ ಬೆಲ್ಲದ.

ಹಿಂದಿನ ಕಾಲದ ಕೆಲವು ಕ್ರೂರ ಪಾಳೆಯಗಾರರಂತೆ ಈ 'ಜೋಡಿಯ ವರ್ತನೆ. ಶ್ರೀ ಜಿ.ಜಿ.ದೊಡ್ಡವಾಡರು ಮುಪ್ಪಿನ ವಯಸ್ಸಿನವರು. ಎಂದೂ ಯಾರ ಬಗ್ಗೆಯೂ ಕೆಟ್ಟುದನ್ನು ಆಡುವವರಲ್ಲ, ಮಾಡುವವರಂತೂ ಮೊದಲೇ ಅಲ್ಲ. ಆದರೆ ಅಂಥ ಸಂಭಾವಿತರನ್ನು ತಾವು ಇಕ್ಕುಳವಾಗಿ ಸಿಕ್ಕಿ ಹಾಕಿಸಿಕೊಂಡು ಚಂದ್ರಕಾಂತ ಬೆಲ್ಲದರು ಕೆಟ್ಟ ಕೆಲಸಗಳಿಗೆ ಮೂಕ ಸಾಕ್ಷಿಯನ್ನಾಗಿ ಕುಳ್ಳಿರಿಸಿಕೊಂಡು, ಮೊಸರನ್ನ ತಿಂದ ಕೋತಿಯು ಮೇಕೆ ಬಾಯಿಗೆ ಒರೆಸಿದಂತೆ, ದೊಡ್ಡವಾಡ ಅಜ್ಜ ಮತ್ತು ಬಸವರಾಜ ಬಿಕ್ಕಣ್ಣನವರನ್ನು ಬಳಸಿಕೊಂಡರು, ಈ ದೃಷ್ಟಾಂತ ಎಲ್ಲರಿಗೂ ಗೊತ್ತಿದೆ. ಆದ್ದರಿಂದ ಕೈಬಿಡಬೇಕೆಂದು ಮಾಡಿದ್ದೆ. ಆದರೆ ಅಕಸ್ಮಾತ್ ಯಾರಿಗಾದರೂ ಗೊತ್ತಿಲ್ಲದಿದ್ದರೆ ಅವರೂ ತಿಳಿಯಲಿ ಎಂದು ಕೊಡುತ್ತಿದ್ದೇನೆ.

ಓರ್ವ ಪ್ರಯಾಣಿಕ ಬುತ್ತಿಯ ಗಂಟನೊಡನೆ ಪ್ರಯಾಣಿಸುತ್ತಿದ್ದ. ಒಂದು ಗಿಡ ನೋಡಿ ಅದರ ನೆರಳಲ್ಲಿ ಕುಳಿತು ಊಟವನ್ನು ಮಾಡಲು ಬಯಸಿದರು. ಹತ್ತಿರದಲ್ಲೇ ಒಂದು ಹಳ್ಳವಿತ್ತು. ಕೈಕಾಲು ಮುಖ ತೊಳೆದುಕೊಂಡು ಬರಲು ನಿಶ್ಚಯಿಸಿ, ಆ ಬುತ್ತಿಯ ಗಂಟನ್ನು ಗಿಡದ ಕೆಳಗೆ ಇಟ್ಟು ಹಳ್ಳದತ್ತ ಹೋದ. ಗಿಡದ ಮೇಲಿದ್ದ ಒಂದು ಮಂಗ ಇಳಿದು ಬಂದು ಮೊಸರನ್ನದ ಗಂಟು ಬಿಚ್ಚಿ ತಿಂದು, ಗಿಡದ

ನೆರಳಿನಲ್ಲಿ ವಿಶ್ರಮಿಸಿಕೊಳ್ಳುತ್ತಿದ್ದ ತನ್ನ ಮಿತ್ರ ಮೇಕೆಗೆ ಒಂದು ತುತ್ತಿಟ್ಟು, ಮೇಕೆ ಬಾಯಿಗೆ ತನ್ನ ಕೈ ಒರೆಸಿ ಉಳಿದ ಬುತ್ತಿಯೊಡನೆ ಗಿಡವನ್ನೇರಿತು. ಪ್ರಯಾಣಿಕ ವಾಪಸ್ಸು ಬಂದಾಗ ನೋಡಿದ ಮೊಸರನ್ನದ ಗಂಟು ಕಾಣೆಯಾಗಿತ್ತು. ಸುತ್ತ ನೋಡಿದ ; ಗಿಡದ ನೆರಳಲ್ಲಿ ಮೆಲುಕಾಡಿಸುತ್ತ ಕುಳಿತಿದ್ದ ಮೇಕೆಯ ಬಾಯಿಗೆ ಮೊಸರು ಮೆತ್ತಿತ್ತು. ಕೋಪದಿಂದ ಅದಕ್ಕೆ ಚೆನ್ನಾಗಿ ಬಾರಿಸಿದ. ಈ ಕಥೆಯಲ್ಲಿ ಎರಡು ನೀತಿಗಳು ಹುದುಗಿವೆ. **1. ಕೆಲವು ಧೂರ್ತರು ತಾವು ಕೆಟ್ಟ ಕೆಲಸ ಮಾಡಿ, ಸಂಭಾವಿತರನ್ನು ತಪ್ಪಿನಲ್ಲಿ ಸಿಕ್ಕಿ ಹಾಕಿಸುತ್ತಾರೆ. 2. ಧೂರ್ತರ ಸಾಂಗತ್ಯ ಮಾಡಿದ ಸಜ್ಜನರು ತೊಂದರೆಗೆ ಒಳಗಾಗಬೇಕಾಗುತ್ತದೆ.**

ಶಾಸಕ ಚಂದ್ರಕಾಂತ ಬೆಲ್ಲದರ ಕೈಗೊಂಬೆಯಂತೆ ವಯೋವೃದ್ಧರಾದ ಶ್ರೀ ಜಿ.ಜಿ.ದೊಡ್ಡವಾಡರು ಅವರ ಅವಿವೇಕದ ಮಾತುಗಳಿಗೆ ಮೂಕ ಸಾಕ್ಷಿಯಾಗಿ ನಿಂತಾಗ ದೊಡ್ಡವಾಡರ ಮೇಲೆ ಈವರೆಗೆ ಅಭಿಮಾನ-ಗೌರವ ಇಟ್ಟುಕೊಂಡಿದ್ದ ರಾಷ್ಟ್ರೀಯ ಬಸವ ದಳದ ಕೆಲವು ಶರಣ-ಶರಣೆಯರು, ಇಷ್ಟು ವಯಸ್ಸಾಗಿ ಸತ್ಯವನ್ನರಿಯುವ ಸಾಮರ್ಥ್ಯ ಬೇಡವೇ ? ಎಂದು ಆಡಿಕೊಂಡರು. "ಹಾಗೆಲ್ಲ ಅನ್ನಬಾರದು ಸತ್ಯವನ್ನರಿತರೂ ಬಹಿರಂಗವಾಗಿ ಆಡದಷ್ಟು ಕೆಲವು ಶ್ರೀಮಂತರು ನಿಸ್ಸಹಾಯಕರಾಗಿರುತ್ತಾರೆ. ತಮ್ಮ ವ್ಯಾಪಾರ-ವ್ಯವಹಾರಗಳ ಜಾಲದಲ್ಲಿ ಅವರು ರಾಜಕಾರಣಿಗಳ ಅಷ್ಟಪದಿ ಹಿಡಿತದಲ್ಲಿರುತ್ತಾರೆ. ಆದ್ದರಿಂದ ಈ ದುಷ್ಟ ಕೆಲಸಗಳ ಹಿಂದೆ ಅವರು ಇರುತ್ತಾರೆ ಎಂದು ಭಾವಿಸದೆ ಅವರ ನಿಸ್ಸಹಾಯಕತೆಯ ಬಗ್ಗೆ ಮರುಕ ತಾಳಬೇಕು ಅಷ್ಟೇ " ಎಂದು ನಾನು ಸಮಾಧಾನ ಮಾಡಿದೆ.

ಶ್ರೀ ಬಸವರಾಜ ಬಿಕ್ಕಣ್ಣನವರು ಎಂಬ ಇನ್ನೋರ್ವ ಸಂಭಾವಿತರು ಇವರನ್ನು ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷರನ್ನಾಗಿ ಆರಿಸಿಕೊಂಡಿದ್ದರು. ನಾನಿನ್ನೂ ಧಾರವಾಡಕ್ಕೆ ಹೋಗುವ ಮೊದಲು ಶರಣ ಶಿವಣ್ಣ ಶಿರೂರ ದೂರವಾಣಿಯಲ್ಲಿ ಮಾತನಾಡಿ, "ನಮ್ಮ ಕಾರ್ಯಕ್ರಮಕ್ಕೆ ಆಹ್ವಾನಿಸಲು ಹೋಗಿದ್ದೆ. ಸಂತೋಷದಿಂದ ಅತಿಥಿಗಳಾಗಿ ಬರಲು ಒಪ್ಪಿದರು. ಆದರೆ ಅವರು ಅಂದರು ಬಸವ ಜಯಂತಿಯನ್ನು ನಾವು (ಉಳವಿ ಚನ್ನಬಸವೇಶ್ವರ ಗುಡಿ, ವೀರಶೈವ ಮಹಾಸಭಾ ಇತ್ಯಾದಿ) ಮತ್ತು ನೀವು (ರಾಷ್ಟ್ರೀಯ ಬಸವ ದಳ) ಕೂಡಿ ಮಾಡೋಣ. ನಿಮ್ಮ ಜನ (ಮತ್ತು ನಮ್ಮ ದನ) ಕೂಡಿದರೆ ಮೆರವಣಿಗೆಗೆ ಶೋಭೆ ಬರುತ್ತದೆ. ನೀವು ಆಚೆ ವರ್ಷದಿಂದ ನಮ್ಮೊಡನೆ ಸೇರುತ್ತಿಲ್ಲ ಎಂದರು." ಎಂದು ನುಡಿದರು.

ಆಗ ನಾನು ಹೇಳಿದೆ "ನೋಡ್ರಿ ಶಿವಣ್ಣ, ನಮಗೆ ಅವರ ಜೊತೆ ಸೇರಬಾರದು ಎಂದೇನೂ ಇಲ್ಲ. ಆದರೆ ನೀವು ಸೇರಬೇಕಾದರೆ ಕೆಲವು ಕರಾರು ಹಾಕಬೇಕು. ಏಕೋರಾಮ ಎಂಬ ಮೂರ್ತಿಯನ್ನು ಅಡ್ಡಪಲ್ಲಕ್ಕಿಯಲ್ಲಿ ತಂದು ಬಸವ ಜಯಂತಿ ಮೆರವಣಿಗೆಗೆ ಸೇರಿಸುವರಂತೆ. ಜೊತೆಗೆ ಗುಲಾಲ್ ಮುಂತಾದ ಬಣ್ಣ ಹಚ್ಚುವರಂತೆ. ಇವೆಲ್ಲ ಮಾಡಬಾರದು. ಎತ್ತುಗಳನ್ನು ತರಲಿ, ಪಾಪ ಅವಕ್ಕೂ ವರ್ಷಕ್ಕೆ ಒಂದು ದಿನ ಉಪಚಾರ ಸಲ್ಲಲಿ. ಆದರೆ ಮೆರವಣಿಗೆಯಲ್ಲಿ ಭಾಗವಹಿಸುವವರು ತಂಬಾಕು, ಜರ್ದಾ, ತಾಂಬೂಲ ಮುಂತಾಗಿ ತಿನ್ನದೆ ಸಾತ್ತ್ವಿಕವಾಗಿ ಘೋಷಣೆ ಕೂಗುತ್ತ ಸಾಗಬೇಕು. ರಾಷ್ಟ್ರೀಯ ಬಸವ ದಳದವರು ಮುಂದೆ ಇರಬೇಕು ಪಟಾಕಿ ಮುಂತಾಗಿ ಸಿಡಿಸಬಾರದು. ಇದಕ್ಕೆಲ್ಲ ಒಪ್ಪಿದರೆ ಸಂತೋಷ. ಇಲ್ಲದಿದ್ದರೆ ಅವರ ಪಾಡಿಗೆ ಅವರು ಮಾಡಿಕೊಳ್ಳಲಿ. ಶಿಸ್ತಿನಿಂದ ನಿಮ್ಮ ಪಾಡಿಗೆ ನೀವು ಮಾಡಿಕೊಳ್ಳಿರಿ." ಎಂದು ತಿಳಿಸಿದೆ. ಪರಸ್ಪರ ಮಾತನಾಡಿಕೊಂಡರೋ ಬಿಟ್ಟರೋ ; ಬಸವರಾಜ ಬಿಕ್ಕಣ್ಣನವರು ಪತ್ರಿಕೆಯಲ್ಲಿ ಅವರು ಒಪ್ಪದಿದ್ದರೂ ನಾವಾಗಿ ಹೆಸರನ್ನು ನಮ್ಮ ಕಾರ್ಯಕ್ರಮದಲ್ಲಿ ಹಾಕಿಕೊಂಡಿದ್ದೇವೆ ಎಂದು ಹೇಳಿಕೆ ಕೊಟ್ಟರು. ನಮಗೆ ಅರ್ಥವಾಯಿತು. 'ಸೂತ್ರಧಾರಿ ಚಂದ್ರಕಾಂತ ಬೆಲ್ಲದರ ಕೈವಾಡ ಈ ಹೇಳಿಕೆ ಹಿಂದೆ ಇದೆ.' ಎಂದು. ನಮ್ಮ ಕಾರ್ಯಕ್ರಮಗಳೆಲ್ಲ ಸಾಂಗವಾಗಿ ನಡೆದವು.

ದಿ. 26-4-2001ರಂದು ಬಸವ ಜಯಂತಿ. ರಾಷ್ಟ್ರೀಯ ಬಸವ ದಳದ ವತಿಯಿಂದ ನಡೆಯುವ ಪಥ ಸಂಚಲನ, ಬಸವ ಜಯಂತಿ ಮೆರವಣಿಗೆ ನಡೆಯಗೊಡಬಾರದೆಂದು ಬೃಹನ್ಮಠದ ಸ್ವಾಮಿಗಳು ಮತ್ತು ಚಂದ್ರಕಾಂತ ಬೆಲ್ಲದರು ರಾಜಕೀಯ ಪ್ರಭಾವ ಬೀರಲು ಸರ್ವ ಸಾಹಸ ಮಾಡಿದರಂತೆ ಪೋಲೀಸ್ ಇಲಾಖೆಯವರು ಹೇಗ ಬೇಡವೆನ್ನಲು ಸಾಧ್ಯ ? ''ಮೆರವಣಿಗೆಯಲ್ಲಿ ಗಲಾಟೆಯಾಗುವುದಂತೆ. ಆಗ ಪೋಲೀಸರು ರಾಷ್ಟ್ರೀಯ ಬಸವ ದಳದವರನ್ನು ಬಂಧಿಸುವರಂತೆ. ವಿನಾ ಕಾರಣ ಜಗಳ ತೆಗೆಯಲು ಬಸವ ಕೇಂದ್ರ ಮತ್ತು ವೀರಶೈವ ಮಹಾಸಭೆಯವರು ಸಿದ್ಧತೆ ನಡೆಸಿದ್ದಾರಂತೆ. ಅವರು ದಾಳಿ ಮಾಡಿದರೆ ಬಸವ ದಳದವರು ಪ್ರತಿಕ್ರಿಯೆ ತೋರಿಸಲೇಬೇಕಾಗುತ್ತೆ. ಆಗ ಬಸವರಾಜ ಹೊರಟ್ಟಿ ಪ್ರಭಾವ ಬೀರಿ ಮೆರವಣಿಗೆಯಲ್ಲಿರುವವರನ್ನು ಬಂಧಿಸಿ, ಜೈಲಿಗೆ ಕಳಿಸುವುದಾಗಿ ಆಶ್ವಾಸನೆ ಕೊಟ್ಟಿದ್ದಾರಂತೆ !''
ಮೆರವಣಿಗೆಗೆ ಹೆಚ್ಚು ಜನ ಸೇರಬಾರದು ಎಂದು ಇಂಥ ಅಂತೆ ಕಂತೆಗಳನ್ನು ಬಸವ ಕೇಂದ್ರದವರು, ವೀರಶೈವ ಮಹಾಸಭೆಯವರು ಊರು ತುಂಬಾ ಸುಳಿದಾಡಲು ಬಿಟ್ಟರು. ಧಾರವಾಡ-ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದ ಶರಣರು ಯಾವ ಸುದ್ದಿಗೂ ಅಂಜದೆ ಅಳುಕದೆ ಸಹಸ್ರಾರು ಸಂಖ್ಯೆಯಲ್ಲಿ ಸೇರಿದರು. ಮೆರವಣಿಗೆ ಯಶಸ್ವಿಯಾಯಿತು. ಅವರೂ ಮೆರವಣಿಗೆ ಮಾಡಿದರು. ಅವರ ಮೆರವಣಿಗೆಗೆ ಹಳ್ಳಿಗಳಿಂದ ಬಂದ ಎತ್ತಿನ ಜೋಡಿ ಸ್ವಲ್ಪ ಕಳೆ ತುಂಬಿದವು. ಪ್ರವಚನ ಕೆಡಿಸಲು, ನನ್ನ ಪ್ರತಿಕೃತಿ ಸುಡಲು ಸಿದ್ಧರಾಗಿ ಬರುವ ಬೆಲ್ಲದ್ ಪರಿವಾರ, ನಡಕಟ್ಟಿ ಬಂಧುಗಳು ಬಸವ ಜಯಂತಿ ಮೆರವಣಿಗೆಯಲ್ಲಿ ಏಕೆ ಭಾಗವಹಿಸುವುದಿಲ್ಲ ಎಂಬುದು ನನಗಿನ್ನೂ ನಿಗೂಢವಾಗೇ ಇದೆ. ಧರ್ಮಪಿತರ ಉತ್ಸವದಲ್ಲಿ ಭಾಗವಹಿಸುವುದಕ್ಕಿಂತ ನನ್ನನ್ನು ನಿಂದಿಸಲು ಮತ್ತು ಗಂಗಾ ಮಾತಾಜಿ ಪ್ರವಚನಕ್ಕೆ ವಿಘ್ನ ಮಾಡಲು ರಸ್ತೆ ತುಳಿದರೆ ಬಹುಶಃ ಹೆಚ್ಚಿನ ಪುಣ್ಯ ಬರುವುದು ಎಂಬ ನಂಬಿಕೆ ಅವರಿಗೆ ಇದ್ದಂತೆ ತೋರುತ್ತದೆ. ಅಂತೂ ಅಂದಿನ ನಮ್ಮ ರಾಷ್ಟ್ರೀಯ ಬಸವ ದಳದವರ ಮೆರವಣಿಗೆ, ಪಥ ಸಂಚಲನ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ನೇತೃತ್ವದಲ್ಲಿ ಅಪೂರ್ವವಾಗಿ ನಡೆದವು.

ನವ ನಗರ ಪ್ರವಚನ

61 ದಿವಸಗಳ ಕಾಲ ಧಾರವಾಡ ನಗರದ ಕಡಪಾ ಮೈದಾನದಲ್ಲಿ ನಡೆದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನವು ದಿ. 10-4-2001ರಂದು ಮುಕ್ತಾಯಗೊಂಡಿತು. ಮುಂದೆ ದಿ. 15-4-2001ರಿಂದ ಹುಬ್ಬಳ್ಳಿಯ ನವನಗರದಲ್ಲಿ ಪ್ರವಚನವನ್ನು ಏರ್ಪಡಿಸಲಾಯಿತು. ನವನಗರವು ಹೊಸ ಬಡಾವಣೆ. ಅಲ್ಲಿ ಪ್ರವಚನ ಆಗಬೇಕೆಂಬ ಹಂಬಲ ಅಲ್ಲಿಯ ನಿವಾಸಿಗಳಾದ ಶರಣ. ಬಿ.ಜಿ.ಹೊಸಗೌಡರು, ಶರಣ.ಸೂರ್ಯಕಾಂತ ಶೀಲವಂತರು, ಶರಣ. ಶಂಕರ್ ಕರಡಿಗುಡ್ಡ, ಶರಣ. ಎಸ್.ಬಿ.ಶೆಟ್ಟರು ಮುಂತಾದವರದ್ದು. ನವನಗರದ ಮಧ್ಯೆ ಇರುವ ಸರಕಾರಿ ಪ್ರಾಥಮಿಕ ಶಾಲೆಯ ಮೈದಾನದಲ್ಲಿ ಮಾಡಿಸಲು ಮೊದಲೇ ಜಾಗದ ಪರವಾನಗಿ ಪಡೆದುಕೊಂಡರು. ಇದನ್ನು ಖಚಿತ ಪಡಿಸಿಕೊಂಡು ಸಾವಿರಾರು ಕರಪತ್ರ, ಪೋಸ್ಟರು ಮುದ್ರಿಸಿ ಹಂಚಿ, ಹಚ್ಚಿ ಪ್ರಚಾರ ಮಾಡಲಾಯಿತು. ಭಿತ್ತಿ ಪತ್ರ ನೋಡುವುದೇ ತಡ. ಚಿತ್ರದುರ್ಗ ಬೃಹನ್ಮಠದ ಪರಿವಾರಕ್ಕೆ ಕಣ್ಣು ಕೆಂಪಗಾದವು. ಧಾರವಾಡದಲ್ಲಿ ನಡೆಯುತ್ತಿದ್ದ ಪ್ರವಚನಕ್ಕೆ ವಿಘ್ನ ಉಂಟುಮಾಡಲು ಚಿತ್ರದುರ್ಗ ಬೃಹನ್ಮಠದವರು ಮಾರ್ಚ್ 4 ರಂದು ಮೊದಲ ಪ್ರಯತ್ನ ಮಾಡಿದರು, ಸಫಲವಾಗಲಿಲ್ಲ. ಏಪ್ರಿಲ್ 1 ರಂದು ಹೆಚ್ಚಿನ ಪ್ರಯತ್ನ ಮಾಡಲು ಒಂದು ಗುಂಪನ್ನೇ ಮೇದಾರ ಕೇತೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಕಳಿಸಿಕೊಟ್ಟರು. ಎರಡುಮೂರು ಕಾವಿ ತೊಟ್ಟ ಮರಿಗಳು ಬೀದಿ ಬೀದಿ ತಿರುಗಿ ಜನರನ್ನು ಆಹ್ವಾನಿಸಿದರು. ಲಿಂಗಾಯತ ಟೌನ್ ಹಾಲ್‌ದಲ್ಲಿ ಒಂದು ಸಭೆ ಕರೆದರು. ಮಠಾಧೀಶರು, ರಾಜಕಾರಣಿಗಳು, ಸಾಹಿತಿಗಳು,

ವ್ಯಾಪಾರಸ್ಥರು, ಗಣ್ಯರು ಸೇರಿ ನಮ್ಮನ್ನು ಬೈದರು ಬೈದರು. ಲಂಚ ಪ್ರಕರಣದಲ್ಲಿ ಸಿಕ್ಕಿ ಶಿಕ್ಷೆಗೊಳಗಾಗಿರುವ ಶ್ರೀಮತಿ ಕಮಲಾ ಹೆಮ್ಮಿಗೆ ಅಂಥವರೂ ಬಂದು ಭಾಗವಹಿಸಿದ್ದರು. ಇವನ್ನೆಲ್ಲ ಬರೆದರೆ ಒಂದು ತಿಂಗಳ ಕಲ್ಯಾಣ ಕಿರಣದ ಪುಟ ಸಾಕಾಗವು. ಕೆಟ್ಟ ಗ್ರಾಮೋಫೋನ್ ಪ್ಲೇಟಿನಲ್ಲಿ ಅಲ್ಲೇ ಮುಳ್ಳು ನಿಂತು, ಅದೇ ಅದೇ ಹಾಡುವಂತೆ ಬೈದರು. ಮಾದರಿಗಾಗಿ ಒಂದು, ಬಸವರಾಜ ಹೊರಟ್ಟಿ ಎಂಬ ರಾಜಕಾರಣಿಯ ಮಾತನ್ನು ಉದಾಹರಿಸುವೆ. ''ಮಾತೆ ಮಹಾದೇವಿಯವರು ಅದೇನೋ ಲಿಂಗದೇವಾ ಅಂತ ಮಾಡಿದ್ದಾರಂತೆ. ನನಗೆ ಅದರ ಬಗ್ಗೆ ಏನೂ ತಿಳಿದಿಲ್ಲ. ಆದರೆ ನೀವೆಲ್ಲ ತಪ್ಪು ಅಂತ ಹೇಳ್ತಿರೋದ್ರಿಂದ ನಾನೂ ತಪ್ಪು ಅಂತ ಖಂಡಿಸ್ತೀನಿ. ಅವರ ಮೇಲೆ ಸರ್ಕಾರ ಕ್ರಮ ತಗೋಬೇಕು.'' ಬಸವರಾಜ ಹೊರಟ್ಟಿ ಬಾಯಲ್ಲಿ ಒಂದು ಸತ್ಯ ಜಾರಿ ಬಂದಿತು, ''ದಿನ ನಿತ್ಯ ಇಷ್ಟೆಲ್ಲ ಟೀಕೆ ನಾವು ಮಾಡುತ್ತಿದ್ದರೂ ಕಡಪಾ ಮೈದಾನದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಅವರ ಪ್ರವಚನಕ್ಕೆ ಸೇರುತ್ತಿರುವುದು ನನಗೆ ಆಶ್ಚರ್ಯ ಉಂಟು ಮಾಡಿದೆ.'' ಹುಬ್ಬಳ್ಳಿ ಹೊಸ ಮಠದ ಸ್ವಾಮಿಗಳು, ''ಎಲ್ಲಾ ಸ್ವಾಮಿಗಳು ಈ ಮಹಿಳೆಗೆ ಹೆದರುವಂತಾಗಿದೆ. ಆದ್ದರಿಂದ ಸರ್ಕಾರಕ್ಕೆ ಕ್ರಮ ತಗೊಳ್ಳಲು ಒತ್ತಾಯಿಸಬೇಕು.'' ಎಂದು ನುಡಿದರು.

ಅಂತೂ ಅಂದಿನ ಸಭೆಯಲ್ಲಿ ದಿ. 8-4-2001ರಂದು ನಮ್ಮ ಕಾರ್ಯಕ್ರಮಕ್ಕೆ ತೀವ್ರ ವಿರೋಧ ಒಡ್ಡಲು ಸರ್ವಾನುಮತದ ನಿರ್ಣಯ ತೆಗೆದುಕೊಂಡರು. ಆದರೆ ಸಾಂಗವಾಗಿ ಪ್ರವಚನ ಮುಕ್ತಾಯವಾಗಿ ಪುನಃ ನವನಗರದಲ್ಲಿ ಶುರುವಾದದ್ದು ಚಿತ್ರದುರ್ಗದಿಂದ ರಿಮೋಟ್ ಕಂಟ್ರೋಲ್ ಮಾಡುತ್ತಿದ್ದ ಬೃಹನ್ಮಠದ ಶ್ರೀಗಳಿಗೆ ಸಂಕಟ ಉಂಟು ಮಾಡಿತು. ದಿ. 15-4-2001 ಸಂಜೆ ಪ್ರವಚನ ಎಂದು ವಿಪರೀತ ಪ್ರಚಾರ ಮಾಡಲಾಗಿತ್ತು. ಬೆಳಿಗ್ಗೆ 9 ಗಂಟೆಗೆ ಸ್ಟೇಜ್ ಇತ್ಯಾದಿ ಸಿದ್ಧಪಡಿಸಲು ಹೋದರೆ ಶಾಲೆಯ ಮುಖ್ಯೋಪಾಧ್ಯಾಯರು ತಮಗೆ ರಾಜಕೀಯ ಒತ್ತಡ ಬಂದಿರುವುದಾಗಿಯೂ ಶಾಲೆ ಕೊಡಲು ಸಾಧ್ಯವಿಲ್ಲ ಎಂಬುದಾಗಿಯೂ ತಿಳಿಸಿದರು. ಬಸವ ತತ್ತ್ವ ಪ್ರಚಾರ ಕೆಡಿಸಬೇಕೆನ್ನುವ ಬೃಹನ್ಮಠದ ಶ್ರೀಗಳು ಮತ್ತು ಶಾಸಕ ಚಂದ್ರಕಾಂತ ಬೆಲ್ಲದ್ ಎಂಥಾ ಅಪೂರ್ವ ಬಸವ ಭಕ್ತರಲ್ಲವೆ ?

ಶರಣ. ಬಿ.ಜಿ. ಹೊಸಗೌಡರಿಗೆ ನಾನು ಹೇಳಿದೆ, ''ನೋಡ್ರಿ ಬಸವ ತತ್ತ್ವ ಪ್ರಚಾರ ನಮ್ಮ ಜೀವನದ ಉಸಿರು ; ಇಂದು ಪ್ರವಚನವು ಶುರುವಾಗಲೇ ಬೇಕು. ನೀವು ಬೇರೆ ಜಾಗದ ವ್ಯವಸ್ಥೆ ಮಾಡಿರಿ ನಿಮಗೆ ಆಗದಿದ್ದರೆ ಮೆಟಾಡೋರ್ ವ್ಯಾನ ಕ್ಯಾರಿಯರ್ ಮೇಲೆ ಕುಳಿತು ಇಂದು ಗಂಗಾ ಮಾತಾಜಿ ಪ್ರವಚನ ಆರಂಭಿಸುವರು'' ಎಂದು ಹೇಳಿದೆ. ಹೊಸಗೌಡರು ತಕ್ಷಣವೇ ಒಂದು ನಿರ್ಧಾರಕ್ಕೆ ಬಂದರು.
''ನನ್ನದು ಒಂದು ನಿವೇಶನವಿದೆ. ಅಲ್ಲೇ ಇಂದು ಸಾಯಂಕಾಲ ಪ್ರವಚನ ಶುರು ಮಾಡಿಸುವೆ.'' ಎಂದವರೇ ಹತ್ತಿರದ ಹಳ್ಳಿಯಿಂದ ಕೆಲಸಗಾರರನ್ನು ಕರೆಸಿ ನಿವೇಶನವನ್ನು ಸ್ವಚ್ಛ ಮಾಡಿಸಿದರು. ಸ್ಟೇಜ್ ಸಿದ್ಧಪಡಿಸಲು ವೇಳೆಯ ಅಭಾವವಿತ್ತು. ಟ್ರ್ಯಾಕ್ಟರ್‌ದ ಒಂದು ಟ್ರಾಲಿ ತರಿಸಿ ಅದರ ಬದಿಗಳನ್ನು ಕೆಳಗಿಳಿಸಿ, ಅದಕ್ಕೆ ಟ್ಯೂಬ್ ಲೈಟ್‌ಗಳನ್ನು ಕಟ್ಟಿ ಪ್ರವಚನ ಶುರು ಮಾಡಿದಾಗ ಜನರು ದಂಗಾದರು. ಬೃಹನ್ಮಠದ ಶ್ರೀಗಳ ಚೇಲಾಗಳು ಬಹಳ ಹೆಮ್ಮೆಯಿಂದ ಪ್ರವಚನಕ್ಕೆ ಜಾಗ ಸಿಗಲಾರದಂತೆ ಮಾಡಿದುದಾಗಿ ಪತ್ರಿಕಾ ಹೇಳಿಕೆ ಕೊಟ್ಟಾಗ ಪತ್ರಿಕೆಯವರು ಅದಕ್ಕೆ ಸೇರಿಸಿ ಬರೆದರು- ಇಷ್ಟಾದರೂ ಮಾತೆ ಗಂಗಾದೇವಿಯವರು ಪ್ರವಚನವನ್ನು ಆರಂಭಿಸುವುದರಲ್ಲಿ ಯಶಸ್ವಿಯಾದರೆಂದು. ಚಿತ್ರದುರ್ಗದ ರಿಮೋಟ್ ಕಂಟ್ರೋಲ್ ಮೂಲಕ ಕೆಲಸವಾಗದು ಎಂದು ಸಕಲ ಶಸ್ತ್ರ ಸನ್ನದ್ಧರಾಗಿ ಆಗಮಿಸಿ ಬೃಹನ್ಮಠದ ಶ್ರೀಗಳು ದಿ. 19-4-2001ರಿಂದ 22-4-2001ರವರೆಗೆ ಸಹಜ ಶಿವಯೋಗ ಶಿಬಿರ ಇಟ್ಟರು. ಬೆಳಗಿನಿಂದ ಶಿಬಿರ ಸಂಜೆ ವೇಳೆ ಉಪನ್ಯಾಸಗಳು. ಅವರಿಗೆ ಲಿಂಗದೇವನನ್ನು, ನನ್ನನ್ನೂ ಬೈಯುವುದರಲ್ಲೇ ಖುಷಿ. ಅದೇ ಅವರ ಸಹಜ ಶಿವಯೋಗ. ಇತ್ತ ನವನಗರದಲ್ಲಿ ಪ್ರವಚನವು

ನಿರಾತಂಕವಾಗಿ ಸಾಗಿತು. ಶ್ರೀಗಳಿಗೆ ಊಟ ರುಚಿಸದಾಯಿತು. ನಿದ್ರೆ ಬರದಾಯಿತು. ಪ್ರವಚನಕ್ಕೆ ತೊಂದರೆ ಕೊಡಲು ದಿ.22-4-2001ರಂದು ಹೋಗಲು ನಿರ್ಣಯ ತೆಗೆದುಕೊಂಡರು. ದಿ.21-4-2001 ಅತ್ಯಂತ ಅಸಭ್ಯವಾಗಿ ಪ್ರತಿಭಟನಾ ಪ್ರದರ್ಶನ ಮಾಡಿ ಪ್ರತಿಕೃತಿ ಸುಟ್ಟು ಜಿಲ್ಲಾಧಿಕಾರಿಗಳಿಗೆ ಸ್ವತಃ ಸ್ವಾಮಿಗಳೇ ಹೋಗಿ ಮನವಿ ಅರ್ಪಿಸಿದರು. ದಾರಿಯಲ್ಲಿ ಅವರ ಹಿಂಬಾಲಕರು ಆಡಿದ ಮಾತು, ಬೈದ ಬೈಗುಳ, ಪ್ರದರ್ಶಿಸಿದ ವರ್ತನೆ ಬಗ್ಗೆ ಬರೆದರೆ ನಮ್ಮ ಲೇಖನಿಗೆ ಕಲಂಕ ಹತ್ತೀತು. ಸಿಲ್ವರ್ ಜುಬಿಲಿ ಸರ್ಕಲ್‌ದಲ್ಲಿ ಭೀಮಣ್ಣ ಖಂಡ್ರೆ, ಚಂದ್ರಕಾಂತ ಬೆಲ್ಲದ್ ಮುಂತಾದವರು ಮರುದಿನ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಬೃಹನ್ಮಠದ ಶ್ರೀಗಳು ಮುಂತಾದವರು ಆಡಿದ ಮಾತುಗಳಂತೂ ಅತೀವ ಭಯಂಕರ.

ದಿ. 22-4-2001ರಂದು ಪ್ರತಿಭಟನೆಗೆ ಹೋಗಲು ಸಿದ್ಧತೆ ನಡೆಸಿ ಹಿಂದಿನ ದಿನವೇ ಕರೆಕೊಟ್ಟಿದ್ದರು. ಆದರೆ ಅಂದು ರಾತ್ರಿ ರದ್ದು ಮಾಡಿದ್ದನ್ನು ಪ್ರಕಟಸಿದರು. ಕೊಟ್ಟ ಕಾರಣ, ಸಚಿವ ಶ್ರೀ ಹೆಚ್.ಕೆ.ಪಾಟೀಲರು ಮುಂತಾದವರು ಕಾರ್ಯಕ್ರಮಕ್ಕೆ ಬರುತ್ತಿದ್ದುದರಿಂದ ಜನರು ಕಮ್ಮಿಯಾಗಬಾರದೆಂದು ರದ್ದು ಮಾಡಲಾಯಿತಂತೆ. ಪ್ರಮುಖ ದಿನಪತ್ರಿಕೆಯವರಂತೂ ಅದ್ದೂರಿಯಾದ ಪ್ರಚಾರ ಕೊಟ್ಟು ದಿ.23-4-2001ರಂದು ಪ್ರತಿಭಟನೆ ನಡೆಯಬಹುದೆಂದು ವರದಿ ಮಾಡಿದ್ದರು. ಧಾರವಾಡ-ಹುಬ್ಬಳ್ಳಿಯ ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು ಈ ಅಬ್ಬರದ ಸುದ್ದಿಯಿಂದ ವಿಚಲಿತರಾಗಲಿಲ್ಲ. ಪೂಜ್ಯ ಗಂಗಾ ಮಾತಾಜಿಯವರಿಗೆ ನಿಮ್ಮ ಪಾಡಿಗೆ ನೀವು ಪ್ರವಚನ ಹೇಳಿ ಎಂದು ತಿಳಿಸಿ ಪ್ರವಚನ ಮೈದಾನದ ತುಸುದೂರದಲ್ಲಿಯೇ ಪ್ರತಿಭಟನಕಾರರನ್ನು ಭೇಟಿಯಾದರು. "ನಿಮಗೆ ಇಷ್ಟವಿದ್ದರೆ ಪ್ರವಚನ ಕೇಳಿರಿ. ಇಲ್ಲದಿದ್ದರೆ ಬಿಡಿರಿ. ಪ್ರವಚನ ಬೇಡ ಎನ್ನಲು ನೀವ್ಯಾರು ? ನಮಗೆ ಬೇಕು. ನಾವು ಏರ್ಪಡಿಸಿದ್ದೇವೆ, ನಾವು ಕೇಳುತ್ತೇವೆ. ಇದು ನಮ್ಮ ಖಾಸಗಿ ಜಾಗ. ಗುರುಗಳನ್ನು ಆಹ್ವಾನಿಸಿದ್ದೇವೆ. ನಿಮ್ಮನ್ನು ಊಟಕ್ಕೆ ಕರೆಯುತ್ತೇವೆ. ಬೇಕಾದರೆ ಉಣ್ಣಿರಿ, ಬೇಡವಾದರೆ ಬಿಡಿರಿ." ಎಂದು ಬಿ.ಜಿ.ಹೊಸಗೌಡರು ಸ್ಪಷ್ಟವಾಗಿ ಹೇಳಿದರು. ಬಸವ ದಳದ ಕಾರ್ಯಕರ್ತರು, ಪ್ರವಚನ ಕೇಳುವವರನ್ನು ಬಿಟ್ಟೇ, ಸುಮಾರು ಎರಡು ನೂರು ಜನರು. ಬಂದವರು ಐವತ್ತಕ್ಕೂ ಹೆಚ್ಚಿಲ್ಲ. ಪೋಲೀಸರು ಬಂದು ವಿನಂತಿ ಮಾಡಿಕೊಂಡು ಆ ಜನರನ್ನು ವಾಪಸ್ಸು ಕಳಿಸಿದ್ದರು. ಅಂದಿನ ಅವರ ಪ್ರತಿಭಟನೆ ಯಶಸ್ವಿಯಾಗಲಿಲ್ಲವಾದ ಕಾರಣ ದಿ.29-4-2001ರಂದು ಹೆಚ್ಚಿನ ಜನರನ್ನು ಕರೆದುಕೊಂಡು ಬರುವ ಹಠ ತೊಟ್ಟು ಹೋದರು. ಪುನಃ ಅಬ್ಬರದ ಪ್ರಚಾರ ಶುರುವಾಯಿತು. ಪ್ರಚಾರದ ವಿಷಯದಲ್ಲಿ ಬೃಹನ್ಮಠದ ಶ್ರೀಗಳು ಅದೃಷ್ಟವಂತರು. ನಾವು ಸದಾ ವಿಧಾಯಕ, ರಚನಾತ್ಮಕ ಕ್ರಿಯೆಗಳನ್ನು ಮಾಡುತ್ತಲೇ ಇದ್ದರೂ ನಮಗೆ ಪ್ರಚಾರ ಸಿಗದು. ಆದರೆ ಅವರು ಮಾಡುವ ಕೆಟ್ಟ ಕೆಲಸಗಳಿಗೂ ಅದ್ದೂರಿಯಾದ ಪ್ರಚಾರ ಗಿಟ್ಟಿಸಿಕೊಳ್ಳುವ ಕಲೆ ಅವರಿಗೆ ಕರಗತವಾಗಿದೆ. ದಿ.29ರಂದು ನಡೆಯುವ ಪ್ರತಿಭಟನಾ ಪ್ರದರ್ಶನ ಬಹಳ ಬೃಹತ್ತಾದುದು ಎಂಬ ಸುದ್ದಿ ವಾರ್ತಾಪತ್ರಿಕೆಗಳಲ್ಲಿ ಓದಿ ನಮ್ಮ ರಾಷ್ಟ್ರೀಯ ಬಸವ ದಳದವರು ತಾವು ತಾವೇ ಸುತ್ತಣ ಊರುಗಳಿಂದ ಬಂದು ಬಿಟ್ಟರು. ಜನರ ಅಭಿಮಾನ ಕಂಡು ಪೂಜ್ಯ ಗಂಗಾ ಮಾತಾಜಿಯರ ಹೃದಯ ತುಂಬಿ ಬಂದಿತಂತೆ. ಈ ಅಭಿಮಾನಕ್ಕೆ ಬೆಲೆ ಕಟ್ಟಲಾದೀತೆ ಎಂದು ಆನಂದ ಬಾಷ್ಪ ಹರಿಯಿತಂತೆ. "ನಿಮ್ಮೆಲ್ಲರ ಭಕ್ತಿ-ಅಭಿಮಾನಗಳಿಗೆ ಏನು ಬೆಲೆ ಕಟ್ಟಲಾದೀತು ? ನಮ್ಮ ಪೂಜ್ಯ ಗುರುಗಳು ನಿಮ್ಮಂತಹ ಜಂಗಮ ಆಸ್ತಿಯನ್ನು ನಮಗೆ ಕೊಟ್ಟಿದ್ದಾರೆ. ಎಂದು ನಂತರ ಉದ್ಗರಿಸ್ಸಿದರಂತೆ.

ಪ್ರದರ್ಶನಕಾರರ ಸಂಖ್ಯೆ ಹಿಂದಿನ ಸಲಕ್ಕಿಂತಲೂ ಕಮ್ಮಿ 30ರಿಂದ 40.. ಇಲ್ಲಿ ಸಭೆಯಲ್ಲಿ ಸುಮಾರು ಒಂದು ಸಾವಿರ ಜನ. ಪೋಲೀಸ್ ಇಲಾಖೆಯವರು ಬಹಳ ದೂರದಲ್ಲಿ ಹೋಗಿ ನಿಂತು

ಪ್ರದರ್ಶನಕಾರರನ್ನು ತಡೆದು, "ಪ್ರವಚನ ಕೇಳಲು ವಿಪರೀತ ಜನ ಸೇರಿದ್ದಾರೆ. ನೀವು ಹೋದರೆ ಗಂಭೀರ ಪರಿಸ್ಥಿತಿ ಎದುರಿಸಬೇಕಾಗುತ್ತದೆ.." ಎಂದು ಹಿಂದಕ್ಕೆ ಕಳಿಸಿದರಂತೆ. ಪತ್ರಿಕೆಯವರ ಕೃಪೆಯಿಂದ ಪ್ರತಿಭಟನೆಗೆ ಬಂದವರು ನೂರು ಜನ, ಬಂಧನಕ್ಕೆ ಒಳಗಾದವರು 50 ಮಂದಿ ಎಂದು ಬರೆಯಲ್ಪಟ್ಟು ಅನೇಕ ಘಟಾನುಘಟಿಗಳಾದ ಮಹನೀಯರ ಮರ್ಯಾದೆ ಉಳಿಯಿತು. ತುಂಬಾ ಆಶ್ಚರ್ಯದ ಸಂಗತಿ ಎಂದರೆ ಬೃಹನ್ಮಠದ ಶ್ರೀಗಳು, ಜನ (ಅ)ಪ್ರಿಯ ಮುಂದಾಳು ಶಾಸಕ ಚಂದ್ರಕಾಂತ ಬೆಲ್ಲದ ಸೇರಿ 50 ಜನರನ್ನು ಕರೆತರಲು ಸಾಧ್ಯವಾಗಲಿಲ್ಲ. ಇದರಿಂದ ತಿಳಿಯುವುದೇನೆಂದರೆ ಇಂದು ಜನರು ಹೆಚ್ಚು ತಿಳುವಳಿಕೆಯುಳ್ಳವರಾಗಿದ್ದಾರೆ. ಸಮಾಜವು ವಿವೇಕ ಪ್ರಜ್ಞೆಯನ್ನು ಪೂರ್ಣ ಕಳೆದುಕೊಂಡಿಲ್ಲ ಎಂಬ ಸತ್ಯ. ಇಷ್ಟೇ ಅಲ್ಲ ಓರ್ವ ಮಹನೀಯರು 25000 (ಇಪ್ಪತ್ತೈದು ಸಾವಿರ) ನಗದು ಹಣದೊಡನೆ ಹತ್ತಿರದ ಹಳ್ಳಿಗೆ ಹೋಗಿ ಜನರನ್ನು ಕರೆತರಲು ಹಂಚಲು ಯತ್ನಿಸಿದರಂತೆ. "ಇಪ್ಪತ್ತೈದು ಸಾವಿರವಲ್ಲ, ಇಪ್ಪತ್ತೈದು ಲಕ್ಷ ಕೊಟ್ಟರೂ ಪ್ರವಚನ ನಿಲ್ಲಿಸುವ ಕೆಲಸಕ್ಕೆ ನಾವು ಬರುವುದಿಲ್ಲ." ಎಂದು ಆ ಗ್ರಾಮದವರು ಹೇಳಿದರಂತೆ.

ಇದು ಸೂಕ್ತ ನಡೆಯೆ ?

ನಾವು, ನಮ್ಮವರು ಮಾಡುವ ಧರ್ಮಪ್ರಚಾರ, ಪ್ರವಚನಕ್ಕೆ ಅಡ್ಡಿ ಮಾಡುವುದಾಗಿಯೂ ಆ ಕೆಲಸವನ್ನು ಧಾರವಾಡದಿಂದಲೇ ಪ್ರಾರಂಭಿಸಬೇಕಾಗಿಯೂ ಬೃಹನ್ಮಠದ ಸ್ವಾಮಿಗಳು ಕರೆ (ಆದೇಶ) ಕೊಟ್ಟುದಕ್ಕೆ ಅನುಗುಣವಾಗಿ ವೀರಶೈವ ಮಹಾಸಭೆ ಮತ್ತು ಅಕ್ಕನ ಬಳಗ ಧಾರವಾಡ ಘಟಕದವರು ಪ್ರವಚನಕ್ಕೆ ವಿಘ್ನ ಮಾಡಲು ಸಾಕಷ್ಟು ಪ್ರಯತ್ನಿಸಿದರು. ಇದು ಸೂಕ್ತ ನಡೆಯೆ ? ಯಾರೇ ವಿವೇಕ ಪ್ರಜ್ಞೆ ಇರುವವರು ಸಮರ್ಥಿಸಿಕೊಳ್ಳಬಲ್ಲರೆ ?

ಲಿಂಗದೇವ ಅವರಿಗೆ ಬೇಡವಾಗಿರಬಹುದು. ಆದರೆ ಇಂದು ಈ ಮಹತ್ವದ ಪರಿಕಲ್ಪನೆ ಅರಿತು ಆನಂದಿಸುವ ಶರಣರ ಸಂಖ್ಯೆ ಜಾಸ್ತಿಯಾಗಿದೆ. ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಿರುವ ಸಂವಿಧಾನ ಇರುವ ಈ ದೇಶದಲ್ಲಿ ತನಗೆ ಬೇಡವಾದ ಮಾತ್ರಕ್ಕೆ ಇನ್ನೊಬ್ಬರ ನಂಬಿಕೆ ಆಚರಣೆಗೆ ಅಡ್ಡಿ ಮಾಡಲು ಯಾರಿಗೂ ಸ್ವಾತಂತ್ರ್ಯವಿಲ್ಲ, ಅದಕ್ಕೆ ಕಾನೂನಿನ ಬೆಂಬಲವಿಲ್ಲ. ಧರ್ಮ ಪ್ರಚಾರ ಪ್ರತಿ ಜಂಗಮನು, ಮಠಾಧಿಕಾರಿಯೂ ಮಾಡಬೇಕಾದ ಆದ್ಯ ಕರ್ತವ್ಯ. ಸಹಸ್ರಾರು ಸಂಖ್ಯೆಯಲ್ಲಿ ಲಿಂಗಾಯತ ಮಠಗಳಿದ್ದರೂ ಈ ಜನಕ್ಕೆ ತಮ್ಮ ಧರ್ಮದ ಬಗ್ಗೆ ತಿಳುವಳಿಕೆ ಇರಲಿಲ್ಲ.

ಈ ಬಹುದೊಡ್ಡ ಕೊರತೆಯನ್ನು ಅರಿತು ಸ್ವಯಂ ಪ್ರೇರಣೆಯಿಂದ ಧರ್ಮಪ್ರಚಾರ ಕೈಗೊಂಡು ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು ಪ್ರವಚನದ ಮೂಲಕ ಬಸವ ಸಾಮ್ರಾಜ್ಯವನ್ನು ಕಟ್ಟಿದರು. ಈಗೇನೋ ಲಿಂಗದೇವನ ನೆಪ. ಪೂಜ್ಯ ಜಗದ್ಗುರು ಲಿಂಗಾನಂದ ಶ್ರೀಗಳು 1956ರಲ್ಲಿ ಈ ಧರ್ಮಪ್ರಚಾರ ಕಾಯಕವನ್ನು ಆರಂಭಿಸಿದರು. ನಾನು 1965ರ ಫೆಬ್ರವರಿಯಲ್ಲಿ ಪೂಜ್ಯ ಗುರುಗಳ ಮೊದಲ ಭಾಷಣ ಕೇಳಿ, ಮುಂದೆ ಆಗಸ್ಟ್‌ನಲ್ಲಿ ಮಠಕ್ಕೆ ಬಂದು ದೀಕ್ಷೆ ಪಡೆದೆ. ಅಂದಿನಿಂದ ಇಂದಿನವರೆಗೆ ಧರ್ಮ ಪ್ರಚಾರ ಮಾಡುತ್ತಾ ಬಂದಿದ್ದೇವೆ. ಯಾವ ಮಠಾಧೀಶರೂ, ವೀರಶೈವ ಮಹಾಸಭೆಯವರು, ಯಾವ ಅಕ್ಕನ ಬಳಗದವರು ಕರೆಸಿ ನಮ್ಮ ಪ್ರವಚನ ಮಾಡಿಸಿದ್ದಾರೆ ? ಇಂಥದೊಂದು ಒಳ್ಳೆಯ ಕಾರ್ಯ ಮಾಡುತ್ತಿದ್ದೀರಿ ಎಂದು ಸತ್ಕರಿಸಿದ್ದಾರೆ ? ಒಳಗೊಳಗೇ ಅಸಹಕಾರ ಮಾಡುತ್ತಲೇ ಬಂದಿದ್ದಾರೆ. ಈಗ ಲಿಂಗದೇವದ ನೆಪ ಮಾಡಿಕೊಂಡು ಬಹಿರಂಗ ಘರ್ಷಣೆಗೆ, ನಿಂದನೆಗೆ ಇಳಿದಿದ್ದಾರೆ ಅಷ್ಟೆ.

ವಾಲ್‌ಟೇರ್ ಎಂಬ ಮೇಧಾವಿ ಹೇಳುತ್ತಾನೆ. **"ನಿನ್ನ ಅಭಿಪ್ರಾಯವನ್ನು ಪೂರ್ಣ**

ವಿರೋಧಿಸುತ್ತೇನೆ. ಆದರೆ ನಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ಇರುವ ಸ್ವಾತಂತ್ರಕ್ಕಾಗಿ ನಾನು ಎಂದೂ ಹೋರಾಡುತ್ತೇನೆ''. ಪ್ರಜಾಪ್ರಭುತ್ವದ ಆಧಾರದ ಮೇಲೆ ಯಾವುದಾದರೂ ಧರ್ಮ ಹುಟ್ಟಿ ಬೆಳೆದಿದ್ದರೆ ಅದು ಲಿಂಗಾಯತ ಧರ್ಮ, ಶರಣ ಧರ್ಮ. ಪ್ರಭುದೇವ-ಮುಕ್ತಾಯಕ್ಕ, ಪ್ರಭುದೇವ-ಸಿದ್ಧರಾಮೇಶ್ವರ, ಪ್ರಭುದೇವ-ಅಕ್ಕಮಹಾದೇವಿ ಸಂವಾದಗಳು, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಜ್ವಲಂತ ಉದಾಹರಣೆಗಳು. ಅನೇಕ ವಿಷಮ ಘಟನೆ ನಡೆದರೂ ಅವನ್ನು ದಾಟಿ ಅಕ್ಕ ಅನುಭವ ಮಂಟಪಕ್ಕೆ ಬಂದಳು. ಸ್ವಾಭಾವಿಕವಾಗಿ ಸಾಮಾನ್ಯ ಜನ ಕೌಶಿಕನನ್ನು ಏಕೆ ಮತ್ತು ಹೇಗೆ ತೊರೆದಳು ? ಏಕೆ ದಿಗಂಬರೆಯಾದಳು ? ನಿಜ ವೈರಾಗ್ಯ ಮೂರ್ತಿಯೇ ? ಎಂದೆಲ್ಲ ಸಂದೇಹಿಸುವ ಸಾಧ್ಯತೆ ಮೊದಲೇ ತಿಳಿದು ಶರಣರು ಹಲವಾರು ಪ್ರಶ್ನೆ ಕೇಳಿ, ಆಕೆ ಚೊಕ್ಕ ಚಿನ್ನ ಎಂದು ಗೊತ್ತಾದಾಗ ಅಕ್ಕ ಎಂಬ ಬಿರುದು, ನೀಡಿ ಗೌರವಿಸಿದರು. ದಾರಿಯಲ್ಲಿ ಬರುವಾಗಲೇ ಹಲ್ಲೆ ಮಾಡಿ, ಆಕೆ ಬರದಂತೆ ಬೆದರಿಕೆ ಒಡ್ಡಲು ಹೋಗಲಿಲ್ಲ. **ಸಂವಾದದಲ್ಲಿ ಸತ್ಯವನ್ನರಿಯುವ ಪ್ರಾಮಾಣಿಕ ಪ್ರಯತ್ನವಿರುತ್ತದೆ. ಹಲ್ಲೆ-ಬೆದರಿಕೆಗಳಲ್ಲಿ ಸತ್ಯದ ಬಾಯಿ ಮುಚ್ಚುವ ದಬ್ಬಾಳಿಕೆ ಇರುತ್ತದೆ.** ಹರಿಹರ ಕವಿ ಹೇಳುವನು, "ಶಿವಭಕ್ತಿಯು ಕರ್ಮವು ಎಂದೂ ಒಂದಾಗಿರದು." ಎಂದು. ಹಾಗೆ ಶರಣ ಸಂಸ್ಕೃತಿ ಉತ್ಸವ ನಡೆಸುವ ಬೃಹನ್ಮಠದ ಶ್ರೀಗಳು ಬಸವ ತತ್ವ(ಶರಣ ಸಂಸ್ಕೃತಿ)ವು ಗೂಂಡಾಗಿರಿಯು ಎಂದೆಂದೂ ಹೊಂದಲಾರವು ಎಂಬುದನ್ನು ಅರಿತುಕೊಳ್ಳಬೇಕು.

ಲಿಂಗದೇವ ನಮಗೆ ಧರ್ಮದ ಅಮೃತ ಧಾರೆಯಾಗಿ ಕಂಡರೆ ವೀರಶೈವವಾದಿಗಳಿಗೆ ಕೆಂಡದ ಉಂಡೆ. ನಮ್ಮ ವಿಚಾರವನ್ನು ನಾವು ವೇದಿಕೆ ಮಾಡಿಕೊಂಡು ಜನರಿಗೆ ಮನವರಿಕೆ ಮಾಡಿಕೊಡುತ್ತೇವೆ. ಅವರೂ ವೇದಿಕೆ ರಚಿಸಿಕೊಂಡು, ಪತ್ರಿಕೆಗಳ ಮೂಲಕವೂ ಬೇಕಾದಂತೆ ವಿಮರ್ಶಿಸಲಿ. ಆದರೆ ಪ್ರಜಾಪ್ರಭುತ್ವಕ್ಕೆ, ಅದಕ್ಕಿಂತ ಹೆಚ್ಚಾಗಿ ಶರಣರ ಸಂಸ್ಕೃತಿಗೆ ಸಲ್ಲದ ದೌರ್ಜನ್ಯ ಪ್ರದರ್ಶಿಸಿ, ಬಲವಂತವಾಗಿ ಸತ್ಯದ ಬಾಯಿ ಮುಚ್ಚಿಸುವ ಪ್ರಯತ್ನವೇಕೆ ? ಪ್ರತಿಭೆಗೆ ಮುಸುಕು ಹೊದ್ದಿಸುವ ಮಾತ್ಸರ್ಯವೇಕೆ ?

ಬೃಹನ್ಮಠದವರ ಏಕಾಂಗಿ ಹೋರಾಟ

ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಲಿಂಗದೇವನ ವಿರುದ್ಧ ಕತ್ತಿ ಹಿರಿದು ಹೋರಾಟಕ್ಕೆ ನಿಂತಿದ್ದಾರೆ. ಏಕೋ ಉಳಿದೆಲ್ಲ ಮಠಾಧೀಶರು ಒಂದೆರಡು ಸಭೆಗಳಲ್ಲಿ ಹಿಮ್ಮೇಳ (chorus) ಹಾಡಿದರೂ ಶ್ರೀ ಶಿವಮೂರ್ತಿ ಸ್ವಾಮಿಗಳು ಈಗ ಒಂಟಿಧ್ವನಿಯಾಗಿದ್ದಾರೆ. ಅವರೊಡನೆ ಧಾರವಾಡದ ವೀರಶೈವ ಮಹಾಸಭೆ ಮತ್ತು ಅಕ್ಕನ ಬಳಗ ಬೆನ್ನಬಲಕ್ಕೆ ನಿಂತಿವೆ. ಆದರೆ ಈಗ ನನ್ನನ್ನು ಒಂದೆರಡು ಮೂಲಭೂತ ಸಂದೇಹಗಳು ಕಾಡುತ್ತಲಿವೆ.

1. ತೀರಾ ಇತ್ತೀಚೆಗೆ ಶ್ರೀ ಗುರುಬಸವಲಿಂಗಾಯನಮಃ ಅಳವಡಿಸಿಕೊಂಡು, ದಸರಾ ದರ್ಬಾರ್ ನಿಲ್ಲಿಸಿ ಶರಣ ಸಂಸ್ಕೃತಿ ಉತ್ಸವ ಆಚರಿಸುತ್ತ, ಬಸವಣ್ಣನವರೇ ಧರ್ಮಗುರು, ವಚನ ಸಾಹಿತ್ಯವೇ ಲಿಂಗಾಯತ ಧರ್ಮದ ಧಾರ್ಮಿಕ ಸಂವಿಧಾನ ಎಂದು ಈಗೀಗ ಒಪ್ಪಿಕೊಂಡು ಹೊಸದಾಗಿ ನಡೆಯಲು ಕಲಿತ ಮಗು ಅತ್ತಿತ್ತ ಹರಿದಾಡುವಂತೆ, ಉತ್ಸಾಹದಿಂದ ಬಸವ ಕೇಂದ್ರಗಳನ್ನು ತೆಗೆಯುತ್ತಲಿರುವ ಶ್ರೀಗಳು ಬಸವಣ್ಣನವರನ್ನು ಧರ್ಮಗುರು ಎಂದೊಪ್ಪದ, ವಚನ ಸಾಹಿತ್ಯವನ್ನೇ ಧರ್ಮ ಸಂಹಿತೆ ಎಂದು ನಂಬದೆ ವೇದಾಗಮ ಪುರಾಣಗಳ ಮೊರೆಹೊಕ್ಕಿರುವ ವೀರಶೈವ ಮಹಾಸಭೆಯವರೊಡನೆ ಹೊಂದಿಕೊಂಡುದು (ನಮ್ಮ ವಿರೋಧಿಸುವ ಮಟ್ಟಿಗೆ ಮಾತ್ರವೋ ?) ಏಕೆ ಮತ್ತು ಹೇಗೆ? ಇದೂ ಒಂದು ರೀತಿಯ ವಿದೇಶದಲ್ಲಿರುವಂಥ Contract marriage ಒಪ್ಪಂದದ ಮದುವೆಯಂತೆಯೋ ? **ಬೃಹನ್ಮಠದ ಶ್ರೀಗಳು ವೀರಶೈವ ಮಹಾಸಭೆಯ ಧ್ಯೇಯಧೋರಣೆ**

ಒಪ್ಪಿರುವರೋ ? ಹಾಗಾದರೆ ಏಕೆ ಬಸವಣ್ಣನವರು ಈ ಧರ್ಮದ ಸಂಸ್ಥಾಪಕರು ಎಂದು ವೀರಶೈವ ಮಹಾಸಭೆಯವರನ್ನು ಒಪ್ಪಿಸುತ್ತಿಲ್ಲ. ಒಪ್ಪದಿದ್ದಾಗ ಪ್ರತಿಭಟಿಸುತ್ತಿಲ್ಲ, ಒಪ್ಪಿಸಲು ಹೋರಾಡುತ್ತಿಲ್ಲ? ಇದು ಬಲು ಚೋದ್ಯದ ಸಂಗತಿ !

2. ಬೃಹನ್ಮಠದ ಹಿಂದಿನ ನಂಬಿಕೆಗಳು ಏನೇ ಇರಲಿ. ಸದ್ಯಕ್ಕಂತೂ ಬಸವಣ್ಣನವರು ಧರ್ಮಗುರು, ವಚನ ಸಾಹಿತ್ಯ ಧರ್ಮ ಸಂಹಿತೆ, ಲಿಂಗಾಯತವು ಒಂದು ಸ್ವತಂತ್ರ ಧರ್ಮ. ಇಲ್ಲಿ ಬಹುದೇವತೋಪಾಸನೆಗೆ ಎಡೆಯಿಲ್ಲ ಎಂದು ಒಪ್ಪುವಷ್ಟಕ್ಕೆ ಬಂದು ನಿಂತಿದ್ದಾರೆ. ವೀರಶೈವ ಮಹಾಸಭೆಯವರು ಮಾತ್ರವಲ್ಲ ಇನ್ನೂ ಹಲವಾರು ಮಠಾಧೀಶರು ಏನೆಲ್ಲ ಮಾಡುತ್ತಿದ್ದಾರೆ. ತಮ್ಮ ಹೋರಾಟದ ಗುರಿ ಲಿಂಗದೇವ ಮತ್ತು ನಾನು ಮಾತ್ರ ಯಾಕಾಗಬೇಕು ? **ಇನ್ನಿತರ ಮಠಾಧೀಶರ ತಪ್ಪು ಆಚರಣೆಗಳ ವಿರುದ್ಧವೂ ಶಿವಮೂರ್ತಿ ಶ್ರೀಗಳು ಹೋರಾಡಲು ಏಕೆ ಕಾರ್ಯಕ್ರಮ ರೂಪಿಸಿಲ್ಲ ?**

3. ವೀರಶೈವ ಮಹಾಸಭೆ, ಇದಕ್ಕೂ ಮಿಗಿಲಾಗಿ ಶಿವಯೋಗ ಮಂದಿರವನ್ನು ಶ್ರೀ ಹಾನುಗಲ್ ಕುಮಾರ ಶ್ರೀಗಳು ಕಟ್ಟಿದ್ದೇ ಚಿತ್ರದುರ್ಗದ ಬೃಹನ್ಮಠದ ಮುರುಘಾಸಮಯ (ಪಂಥ)ದ ವಿರುದ್ಧ ಒಂದು ಶಕ್ತಿಯನ್ನು ಹುಟ್ಟುಹಾಕಲು. ಇವರು ನಿಜವಾದ ಬಸವ ಭಕ್ತರಾದರೆ ಬಸವಾ ಎಂಬುದನ್ನು ನಮ್ಮ ಉಸಿರಾಗಿ ಮಾಡಿಕೊಂಡ ನಾವು ಇವರಿಗೆ ಶತ್ರುಗಳಾಗಿ ಹೇಗೆ ಕಾಣಲು ಸಾಧ್ಯ ? ಬಸವಣ್ಣನವರನ್ನು, ಶರಣರನ್ನೂ ಕಡೆಗಣಿಸುವ ವೀರಶೈವ ಮಹಾಸಭೆಯವರು ಹೇಗೆ ಆಪ್ತ ಮಿತ್ರರಾಗಲು ಸಾಧ್ಯ ?

ಮನುಷ್ಯನ ಹೋರಾಟಕ್ಕೆ ಒಂದು ನೀತಿ ಸಂಹಿತೆ (moral code) ಅಗತ್ಯ. 'ಮಣ್ಣೆತ್ತಾದರೂ ತನ್ನೆತ್ತು ಗೆಲ್ಲಬೇಕೆಂಬ ಛಲ ಶರಣಂಗೆ ಇರಬೇಕು' ಎಂಬ ಧರ್ಮಪಿತರ ವಾಣಿಯಂತೆ, ಹೋರಾಡಬೇಕು ಅದರಲ್ಲಿ ಛಲವಿರಬೇಕು. ಆದರೆ ಆ ಹೋರಾಟ ಒಂದು ಸೈದ್ಧಾಂತಿಕ ಮತ್ತು ನೈತಿಕ ಚೌಕಟ್ಟಿನಲ್ಲಿರಬೇಕು. ಅವಿಲ್ಲದಿದ್ದರೆ ಹೀರೋ (ನಾಯಕ) ಆಗಬೇಕೆಂದು ಹೋರಾಡಿ ವಿಲನ್ (ಖಳನಾಯಕ) ಎಂದು ವ್ಯಕ್ತಿಯು ಇತಿಹಾಸದಲ್ಲಿ ದಾಖಲಾಗುವ ಸಂದರ್ಭ ಬಂದು ಬಿಡುತ್ತದೆ. ಆದ್ದರಿಂದ **ಬೃಹನ್ಮಠದ ಶ್ರೀಗಳ ಹೋರಾಟ ಕಾದ ಬಂಡೆಯ ಮೇಲೆ ಬಿದ್ದ ನೀರ ಹನಿಯಾಗದೆ, ಕಪ್ಪೆ ಚಿಪ್ಪಿನಲ್ಲಿ ಬಿದ್ದು ಮುತ್ತಿನ ಮಣಿಯಾಗುವಂಥ ಹನಿಯಾಗಲಿ** ಎಂದು ಹೃತ್ಪೂರ್ವಕವಾಗಿ ಹಾರೈಸುವೆ.

-ಮಾತಾಜಿ

ಇಳೆಯನ್ನಗಲಿದ ಶರಣ. ಕೆ.ಬಿ. ಚನ್ನಮಲ್ಲಾರಾಧ್ಯರು

ಕೋಲಾರ ವಾಸಿಗಳಾಗಿದ್ದ ಶರಣ. ಕೆ.ಬಿ.ಚನ್ನಮಲ್ಲಾರಾಧ್ಯರು ಮುಳಬಾಗಿಲು ತಾಲ್ಲೋಕಿನಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದರು. ಏಳೆಂಟು ವರ್ಷಗಳಿಂದ ಬಸವ ಧರ್ಮಪೀಠದ ಅಭಿಮಾನಿಗಳಾಗಿ, ರಾಷ್ಟ್ರೀಯ ಬಸವ ದಳದ ಸಕ್ರಿಯ ಕಾರ್ಯಕರ್ತರಾಗಿ ಸೇವಾನಿರತರಾಗಿದ್ದರು. ಪ್ರತಿವರ್ಷ ಶರಣಮೇಳಕ್ಕೆ ತಾವು ಕಾಣಿಕೆ ಕೊಡುವುದೇ ಅಲ್ಲದೆ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹಿಸಿಯೂ ಕೊಡುತ್ತಿದ್ದರು. ಸುಮಾರು ಮೂರುನಾಲ್ಕು ತಿಂಗಳಿಂದ ಅನಾರೋಗ್ಯದಿಂದ ಬಳಲಿ ದಿನಾಂಕ 05-04-2001 ಗುರುವಾರದಂದು ಲಿಂಗೈಕ್ಯರಾದರು. ಪತ್ನಿ, ಇಬ್ಬರು ಪುತ್ರಿಯರು, ಅಪಾರ ಬಂಧು-ಬಳಗ, ಶರಣ ಬಂಧುಗಳನ್ನು ಅಗಲಿದ್ದಾರೆ. ಇಂತಹ ಶರಣರ ದಿವ್ಯ ಆತ್ಮವನ್ನು ಸೃಷ್ಟಿಕರ್ತನು ತನ್ನಲ್ಲಿ ಅಡಗಿಸಿ ಕೊಳ್ಳಲು ಧರ್ಮಪಿತ ಬಸವಣ್ಣನವರು ಕೃಪೆ ಮಾಡಲೆಂದು, ಲಿಂಗೈಕ್ಯರಾದ ಶರಣ ಕೆ.ಬಿ. ಚನ್ನಮಲ್ಲಾರಾಧ್ಯರ ಅಗಲಿಕೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಹಾರೈಸುವೆವು.

-ಮಾತಾಜಿ

ಸಂಪಾದಕೀಯ- 2

ಪ್ರವಚನ ಕೆಡಿಸುವ ಹೇಯ ಕೆಲಸವನ್ನು ಮಠಾಧೀಶರು ಮಾಡದಿರಲಿ

ಜಗತ್ತಿನಲ್ಲಿಯೇ ಅತ್ಯಂತ ಪವಿತ್ರವಾದ ಕಾಯಕ ಪ್ರವಚನ. ಎಷ್ಟು ಜನರ ಹೃದಯ-ಮನ-ಬುದ್ಧಿಗಳು ಹಸನಾಗುತ್ತವೆಂಬುದನ್ನು. ಹೇಳಲು ಸಾಧ್ಯವಿಲ್ಲ. ಹೇಗೆ ಹಸಿದವರಿಗೆ ಊಟಕ್ಕಿಟ್ಟಾಗ ಅವರು ಉಂಡು, ಅಪಾರ ಆನಂದ ಮತ್ತು ಕೃತಜ್ಞತಾಭಾವ ಹೊಂದುವರೋ ಹಾಗೆ ಪ್ರವಚನ ಜ್ಞಾನದ ಪಾವನ ಜಲದಲ್ಲಿ ಮಿಂದು ಪುನರ್ಜಾತರಾದವರ ಮನಸ್ಸಿನ ಸಂತೋಷ. ತೀರಾ ಇತ್ತೀಚೆಗೆ ಬೆಂಗಳೂರಿನ ಸುಬ್ರಹ್ಮಣ್ಯ ನಗರದ ಸಂಗೊಳ್ಳಿ ರಾಯಣ್ಣ ಆಟದ ಮೈದಾನದಲ್ಲಿ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳ ಪ್ರವಚನ ೫ ವಾರ ಕಾಲ ನಡೆಯಿತು. ಕೆಲವರನ್ನು ಬಿಟ್ಟರೆ ಹೆಚ್ಚಿನವರು ಆರ್ಥಿಕವಾಗಿ ಅಶಕ್ತರು ಮತ್ತು ಹೆಚ್ಚಾಗಿ ಮಧ್ಯಮ ವರ್ಗದವರು. ಪ್ರವಚನ ನಡೆದ ಸಂಜೆಗಳು ಅವರಿಗೆ ಅಮೃತದ ಕ್ಷಣಗಳು. ಬಸವ ಜಯಂತಿ ದಿನ ಸಂಜೆಗೆ ನಾನು ಭಾಗವಹಿಸಿದೆ. ಶ್ರೋತೃಗಳು ಒಬ್ಬೊಬ್ಬರ ಮುಖದ ಮೇಲೂ ಸಂತೋಷ . ''ಜೀವನದ ಬೇಗುದಿಯಲ್ಲಿ ಬೆಂದ ನಮಗೆ ಈ ಪ್ರವಚನ ಪುನರ್ಜನ್ಮ ನೀಡಿದೆ. ಇದರ ಬಗ್ಗೆ ಬಣ್ಣಿಸಲಾರೆವು. ಇನ್ನಷ್ಟು ದಿನ ಮುಂದುವರಿಸಲು ಸ್ವಾಮೀಜಿಯವರಿಗೆ ಹೇಳಿರಿ.'' ಎಂದು ವಿನಂತಿಸಿದಾಗ ನನಗೆ ಬಹಳ ಸಂತೋಷವೆನಿಸಿತು.

ನಾನು ಮನೆ ಬಿಟ್ಟು ಬಂದಾಗ ಇಟ್ಟುಕೊಂಡ ಧ್ಯೇಯ ಏಕಾಂತವಾಸ, ಮೌನ, ಜಪ-ತಪ, ಧ್ಯಾನ ನಿರತ ಸಮಾಧಿ ಸ್ಥಿತಿ ಪಡೆಯುವುದು ಮಾತ್ರ. ''ಪ್ರವಚನ ಒಂದು ಶ್ರೇಷ್ಠ ವಾಙ್ಮಯ ತಪಸ್ಸು, **ಇದರಿಂದ ನಾವು ಪೂರ್ಣರಾಗುವುದಷ್ಟೇ ಅಲ್ಲ ; ಕೇಳಿದವರೂ ಪುನರುತ್ಥಾನ ಪಡೆಯುತ್ತಾರೆ.**'' ಎಂದು ಪೂಜ್ಯ ಅಪ್ಪಾಜಿ ಪುನಃ ಪುನಃ ಹೇಳಿ ಪ್ರವಚನ ಕಾಯಕದ ಬಗ್ಗೆ ನಮ್ಮ ನಂಬಿಕೆಯನ್ನು ದೃಢಪಡಿಸಿದರು.

ಎಲ್ಲಾ ಮಠಾಧೀಶರು ಅನೇಕ ಜಾತ್ರೆ, ಉತ್ಸವ, ಬಸವ ಜಯಂತಿ, ವಿಶೇಷ ಕಾರ್ಯಕ್ರಮಗಳು, ಅವರವರ ವರ್ಧಂತಿ, ಅಭಿನಂದನ ಮುಂತಾದ ವೈಭವದ ಕಾರ್ಯಕ್ರಮಗಳನ್ನು ಲಕ್ಷಾಂತರ ರೂಪಾಯಿ ವ್ಯಯಿಸಿ ಏರ್ಪಡಿಸುತ್ತಾರೆ. ಯಾರ್ಯಾರನ್ನೋ ಪ್ರಮುಖವಾಗಿ ರಾಜಕಾರಣಿಗಳನ್ನು ಆಹ್ವಾನಿಸುತ್ತಾರೆ. ಒಂದು ಕ್ರಮ ಬದ್ಧವಾದ ಜ್ಞಾನವಾಗಲೀ ಆಚರಣೆಯ ಜಾಡಾಗಲಿ ಜನರಿಗೆ ಸಿಗದು. ಒಬ್ಬರು ಸ್ವಾಹಿತಿಗಳು ಒಂದು ರೀತಿ ಹೇಳಿದರೆ ಅದಕ್ಕೆ ವಿರುದ್ಧವಾದ ಇನ್ನೊಂದು ವಿಚಾರವನ್ನು ನಂತರ ಮಾತನಾಡುವವರು ಹೇಳಿ ಕೇಳುಗರ ತಲೆಯಲ್ಲಿ ಗೊಂದಲವನ್ನುಂಟು ಮಾಡುತ್ತಾರೆ. ಬಸವ ಜಯಂತಿಯ ಭಾಷಣ, ಮಾಲೆಗಳೂ ಅಷ್ಟೆ. ಒಂದು ಸ್ಥಿರವಾದ ನಂಬಿಕೆ ಬೆಳೆಯಲು ಸಹಾಯಕವಾಗುವುದೇ ಇಲ್ಲ. ಒಬ್ಬರು ಬಿತ್ತಿದರೆ ಮತ್ತೊಬ್ಬರು ಹರಗುವರು.

ಒಂದು ನಗೆ ಹನಿ ನೆನಪಿಗೆ ಬರುತ್ತದೆ. ಅರಣ್ಯ ಇಲಾಖೆಯವರು ರಸ್ತೆ ಬದಿಯಲ್ಲಿ ಗಿಡ ನೆಡಲು ಜನರನ್ನು ನೇಮಿಸಿದ್ದರಂತೆ ಅವರು ತಮ್ಮ ಕೆಲಸ ತಾವು ಮಾಡುತ್ತಿದ್ದರು. ಓರ್ವ ದನಗಾಹಿ ಗಮನಿಸಿದ. ಇಡೀ ದಿನ ಕೆಲಸ ಮಾಡಿದ್ದರು. ಓರ್ವ ತಗ್ಗು ತೋಡುತ್ತಿದ್ದ. ಇನ್ನೊರ್ವ ತಗ್ಗು ಮುಚ್ಚುತ್ತಿದ್ದ. ಬೆಳಿಗ್ಗೆ ಇದ್ದ ಸ್ಥಿತಿಯೇ ಸಂಜೆಗೂ ಇತ್ತು. ಕುತೂಹಲದಿಂದ ಆ ದನಗಾಹಿ ಕೇಳಿದ. ಏನು ಹೀಗೆ ? ಅವನು ತಗ್ಗು ತೆಗೆಯುತ್ತಾನೆ, ನೀನು ಮುಚ್ಚುತ್ತಿ ! ಎಂದ. ಆಗ ಆತ ಹೇಳಿದ, ಇಂದು ೩ ಜನರನ್ನು ಇಲ್ಲಿಗೆ ನೇಮಕ ಮಾಡಿದ್ದರು. ಒಬ್ಬನ ಕೆಲಸ ತಗ್ಗು ತೆಗೆಯುವುದು, ಇನ್ನೊಬ್ಬನ ಕೆಲಸ ಸಸಿ ನೆಡುವುದು. ಮತ್ತೊಬ್ಬನ ಕೆಲಸ ತಗ್ಗು ಮುಚ್ಚುವುದು. ಇಂದು ಸಸಿ ನೆಡುವವನು ಚಕ್ಕರ್ ಹೊಡೆದು ಬಿಟ್ಟಿದ್ದಾನೆ. ಹೀಗಾಗಿ ಸಸಿಗಳನ್ನು ಯಾರೂ ನೆಡಲು ಆಗಲಿಲ್ಲ. ಈತ ತನಗೆ ವಹಿಸಿದ ಕೆಲಸ ತಗ್ಗು ತೆಗೆಯುವುದನ್ನು ಮಾಡಿದ, ನಾನು ನನ್ನ ಕೆಲಸ ತಗ್ಗು ಮುಚ್ಚುವುದನ್ನು ಮಾಡಿದ್ದೇನೆ ಎಂದ. ಲಿಂಗಾಯತರ ಅದ್ದೂರಿಯ ಬಸವ

ಜಯಂತಿಗಳ ವೈಖರಿಯೂ ಹೀಗೆ. ತತ್ವದ ಸಸಿ ನೆಡುವವರೇ ಇರುವುದಿಲ್ಲ. ಜ್ಞಾನದ ದೃಷ್ಟಿಯಿಂದ ಹೆಚ್ಚಿನ ಲಾಭ ಇರುವುದಿಲ್ಲ. ಮಾತ್ರ ವ್ಯವಹಾರ ದೃಷ್ಟಿಯಿಂದ ಲಾಭದಾಯಕ. ಒಂದು ಊರಲ್ಲಂತೂ ಬಸವ ಜಯಂತಿ ವ್ಯಾಪಾರದಲ್ಲಿ ಬಂಡವಾಳ ಹೂಡಿಕೆ ಇಲ್ಲದೆ ಲಾಭವಂತೆ, ಮತ್ತೆ ಕೆಲವು ಕಡೆ ಫಿಫ್ಟಿ-ಫಿಫ್ಟಿ ಒಪ್ಪಂದ. ಅಂದರೆ ದೇಣಿಗೆ ಸಂಗ್ರಹ ಮಾಡಿದವರಿಗೆ ಮಾಡಿದ್ದರಲ್ಲಿ ಅರ್ಧ, ಸಮಿತಿಗೆ ಅರ್ಧ.

ಆದರೆ ಪ್ರವಚನ ಹಾಗಲ್ಲ, ನಿರರ್ಗಳವಾಗಿ ಹರಿಯುವ ನೀರಿನ ಝುರಿ-ಸತತ ಜ್ಞಾನ, ಖಚಿತ ಜ್ಞಾನ. ಎಷ್ಟು ತಾತ್ತ್ವಿಕ, ಆಧ್ಯಾತ್ಮಿಕ ವಿಷಯ ಮನೋಗತವಾಗುತ್ತವೆ ! ಸದ್ಭಕ್ತರಿಗೆ ತಮ್ಮ ಧಾರ್ಮಿಕ ಜೀವನವನ್ನು ರೂಪಿಸಿಕೊಳ್ಳಲು ಅನುಕೂಲವಾಗುತ್ತದೆ. ಯಾರಿಗೂ ಭಾರವಾಗದೆ ಅನವಶ್ಯಕ ವೈಭವಗಳ ಅಪವ್ಯಯಕ್ಕೆ ಎಡೆ ಮಾಡದೆ ಪ್ರವಚನವು ಆಳವಾದ ಜ್ಞಾನವನ್ನು ನೀಡುತ್ತದೆ. ಇಂಥ ಪ್ರವಚನಗಳನ್ನು ನಡೆಯದಂತೆ, ಮಾಡಬೇಕೆಂದು ಚಿತ್ರದುರ್ಗದ ಬೃಹನ್ಮಠದ ಶ್ರೀಗಳು ಛಲ ತೊಡುವುದು ಅತ್ಯಂತ ಪಾಪಮಯ ಕೆಲಸ. ತಮ್ಮ ಛಲಕ್ಕೆ ಬಸವ ಕೇಂದ್ರ, ವೀರಶೈವ ಮಹಾಸಭೆ, ಅಕ್ಕನ ಬಳಗಗಳನ್ನು ಬಳಸಿಕೊಳ್ಳುವುದು ಇನ್ನೂ ಹೇಯವಾದ ಕೆಲಸ. ಯಾರೋ ಪುಣ್ಯಾತ್ಮರು ಊಟಕ್ಕೆ ಇಡುವಾಗ ಹಸಿದವರು ಉಣ್ಣುತ್ತಿರುವಾಗ ಆ ಅಡಿಗೆಯಲ್ಲಿ ಸಗಣಿ ಬೆರಸುವುದು (ಅದನ್ನು ಜಹಿರಾಬಾದ್ ಎಂಬಲ್ಲಿ ಬಸವ ಕೇಂದ್ರದವರು ಮಾಡಿ, ಇಂದು ಜನರ ಕಣ್ಣಲ್ಲಿ ತಿರಸ್ಕೃತರಾಗಿದ್ದಾರೆ) ಎಷ್ಟು ಪಾಪಮಯವೋ, ಉಣ್ಣಲಿಕ್ಕುವವರ ಮೇಲೆ ಹಲ್ಲೆ ಮಾಡುವುದು ಉಣ್ಣುವವರ ತಟ್ಟೆ ಕಿತ್ತುಕೊಳ್ಳುವುದು ಎಷ್ಟು ಪಾಪಮಯವೋ ಅಷ್ಟೇ ಪಾಪಮಯ. ಪ್ರವಚನಗಳನ್ನು ಕೆಡಿಸುವುದು. ಉಳಿದ ನಕ್ಸಲೀಯರಿಗೆ ನಾವು ಪಾಪ-ಪುಣ್ಯದ ಬಗ್ಗೆ ಹೇಳುವುದು ವ್ಯರ್ಥ. (ಆದರೆ ಅವರುಗಳು ಮಾನವೀಯತೆಯುಳ್ಳವರು ಎಂದು ಕೇಳಿದ್ದೇನೆ.) ಆದರೆ ಕಾವಿ ತೊಟ್ಟ ಶ್ರೀ ಶಿವಮೂರ್ತಿ ಸ್ವಾಮಿಗಳು, ಸದಾ ವಿಭೂತಿ ಪಟ್ಟೆ ಹಣೆ ಮೇಲೆ ಢಾಳಾಗಿ ಧರಿಸುವ ಚಂದ್ರಕಾಂತ ಬೆಲ್ಲದ ಪಾಪ-ಪುಣ್ಯಗಳ ಬಗ್ಗೆ ತಿಳುವಳಿಕೆ ಹೊಂದುವುದು ಅಗತ್ಯವಿದೆ. ಹಣದಿಂದ ಲೌಕಿಕವಾದುದನ್ನು ಕೊಳ್ಳಬಹುದು. ಆದರೆ ಬಸವ ಕೃಪೆಯನ್ನು, ದೇವ ಕೃಪೆಯನ್ನು ಪಡೆದುಕೊಳ್ಳುವುದು ಅಸಾಧ್ಯ ಎಂಬುದನ್ನರಿತು, ತಮಗಾದಷ್ಟು ಧರ್ಮ ಪ್ರಚಾರ ತಾವು ಮಾಡಿಕೊಳ್ಳಲಿ, ಇನ್ನಿತರರು ಮಾಡುವ ಧರ್ಮಪ್ರಚಾರಕ್ಕೆ ಅಡ್ಡಿ ಉಂಟು ಮಾಡುವ ಹೀನ ಬುದ್ಧಿ ಬಿಡಲಿ ಎಂದು ಹಾರೈಸುತ್ತೇನೆ.

ಗಣಾಚಾರ ದಳ ಸ್ಥಾಪನೆ

ಭಾನುವಾರ ದಿ.೨೯-೪-೨೦೦೧ದಂದು, ಮೊದಲೇ ಚಿತ್ರದುರ್ಗದ ಬೃಹನ್ಮಠದ ಶ್ರೀಗಳು, ಚಂದ್ರಕಾಂತ ಬೆಲ್ಲದ ಅವರು ಬಹುಜನರನ್ನು ಕರೆದುಕೊಂಡು ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ನಿಲ್ಲಿಸಲು ಬರುವುದಾಗಿ ಪ್ರಮುಖ ದಿನಪತ್ರಿಕೆಗಳಲ್ಲಿ ಸುದ್ದಿ ಕೊಟ್ಟಿದ್ದರಿಂದ ಹುಬ್ಬಳ್ಳಿ-ಧಾರವಾಡ, ಕಿತ್ತೂರು ಮತ್ತು ಹತ್ತಿರದ ರಾಷ್ಟ್ರೀಯ ಬಸವ ದಳಗಳ ಜನರು ಸಹಸ್ರಾರು ಸಂಖ್ಯೆಯಲ್ಲಿ ನವನಗರದ ಪ್ರವಚನ ಮೈದಾನದಲ್ಲಿ ಸಮಾವೇಶವಾಗಿದ್ದರು. ಇವರಿಗೆಲ್ಲ ಬಹಳ ನೋವಾಗಿ ಸಿಟ್ಟು ಬಂದಿತ್ತು. ''ದಾವಣಗೆರೆಯಲ್ಲಿ ಕ್ರೂರ ವರ್ತನೆ ಮಾಡಿ ಪ್ರವಚನ ನಿಲ್ಲಿಸಿದಂತೆ ಹುಬ್ಬಳ್ಳಿಯಲ್ಲಿ ಆಗಗೊಡುವುದಿಲ್ಲ. ನಮ್ಮ ಶಾಂತಿ-ಸೌಜನ್ಯಗಳನ್ನು ಬೃಹನ್ಮಠದ ಸ್ವಾಮಿಗಳು ತಪ್ಪಾಗಿ ತಿಳಿದಂತೆ ಕಾಣುತ್ತದೆ. ಪ್ರವಚನ ಮಾಡಿಸುವವರು, ಕೇಳುವವರು ಜನರು, ಹೇಳುವವರು ಬಸವ ಧರ್ಮ ಪೀಠದವರು. ಬೃಹನ್ಮಠದವರು, ವೀರಶೈವ ಮಹಾಸಭೆಯವರು ಇದಕ್ಕೇಕೆ ಅಡ್ಡಿ ಮಾಡಬೇಕು ? ತಮಗೆ ಪ್ರವಚನ ಮಾಡುವ ತಾಕತ್ತಿದ್ದರೆ ಮಾಡಿಕೊಳ್ಳಲಿ ; ಮಾತಾಜಿಯವರುಗಳು ಮಾಡುವ ಪ್ರವಚನ ಕೆಡಿಸಲು ಇವರೇಕೆ ಬರಬೇಕು ? ಇಂದು ಅವರು ಹತ್ತಿರ ಬಂದಾದರೂ ಬರಲಿ ; ಆ ಜನರಿಗೆ ಬುದ್ಧಿ

ಕಲಿಸಿಯೇ ಬಿಡುತ್ತೇವೆ.'' ಎಂದು ಅನೇಕ ಶರಣರು ಮುಖ್ಯವಾಗಿ ತರುಣರು ಸಿದ್ಧರಾಗಿಬಿಟ್ಟಿದ್ದರು. ನನಗೋ ಬೆಂಗಳೂರಿನಲ್ಲಿದ್ದರೂ ಅದೇ ಚಿಂತೆ. ಹುಬ್ಬಳ್ಳಿ-ಧಾರವಾಡದ ಶರಣ ಬಂಧುಗಳು ತಾತ್ವಿಕವಾಗಿ ಗಟ್ಟಿಗೊಂಡವರು. ಬೃಹನ್ಮಠದ ಶ್ರೀಗಳು ಬಾಡಿಗೆ ಗೂಂಡಾಗಳನ್ನು ತಂದು ಗಲಾಟೆ ಮಾಡಿಸುತ್ತಾರೆ . ಎಂದು ಸುದ್ದಿ ಹಬ್ಬಿಸಿದರೆ, ಹೆದರಿ ಮನೆಯಲ್ಲಿ ಅಡಗಿ ಕೂಡುವ ಹೇಡಿಗಳಲ್ಲ. ಕಿತ್ತೂರು ಚನ್ನಮ್ಮನ ವೀರ ಸಂತತಿಯಲ್ಲವೆ? ಇನ್ನಷ್ಟು ಸಂಖ್ಯೆಯಲ್ಲಿ ತಮ್ಮ ಮನೆ ಮಂದಿಯನ್ನೆಲ್ಲ ಕರೆದುಕೊಂಡೇ ಬಂದಿದ್ದರು. ಪ್ರವಚನ ಕೇಳುತ್ತಿದ್ದ ಹಳ್ಳಿಯ ಓರ್ವ ಹೆಣ್ಣು ಮಗಳು ದೊಡ್ಡ ಕೋಲು ಹಿಡಿದುಕೊಂಡು ಎಲ್ಲರಿಗಿಂತ ಮುಂದೆ ಹೋಗಿ ನಿಂತಿದ್ದಳಂತೆ. ಅವರ ಧೈರ್ಯ-ಶೌರ್ಯಗಳನ್ನು ಪೂಜ್ಯ ಗಂಗಾ ಮಾತಾಜಿ ಸಾಕಷ್ಟು ಬಣ್ಣಿಸಿದರು. ನಾನು ಫೋನ್ ಮಾಡಿ, ''ಹುಡುಗರು ಬೃಹನ್ಮಠದ ಸ್ವಾಮಿಗಳ ಈ ಕುಕಾರ್ಯದಿಂದ ರೋಸಿ ಹೋಗಿದ್ದಾರೆ. ದುಡುಕಿ ಪ್ರತಿಭಟನಕಾರರ ಮೇಲೆ ಹಲ್ಲೆ ಮಾಡಬಾರದು, ನಮಗೆ ಕೆಟ್ಟ ಹೆಸರು ಬರುತ್ತೆ. ಆದ್ದರಿಂದ ನಮ್ಮ ಬಸವ ದಳದವರು ದುಡುಕದಂತೆ ಎಚ್ಚರ ವಹಿಸಿರಿ'' ಎಂದು ಹಿರಿಯರಿಗೆ ಹೇಳುತ್ತಿದ್ದೆ. ಓರ್ವ ಶರಣರು ಫೋನಲ್ಲಿ ಹೇಳಿದರು, ''ನಮಗೆ ನೆಮ್ಮದಿಯಾಗಿ ಈವಯ್ಯ ಪ್ರವಚನ ಕೇಳಲು ಸಹ ಬಿಡುತ್ತಿಲ್ಲ. ದಿನಾಲು ಕಿರಿಕಿರಿ. ಆ ಪತ್ರಿಕೆಗಳಿಗೂ ಬುದ್ಧಿ ಇಲ್ಲ, ಈವಯ್ಯ ಕೊಟ್ಟ ಸುದ್ದೀನ ಮತ್ತೆ ಮತ್ತೆ ಕೊಡುತ್ತಾರೆ. ಇಂದು ನಾನಂತೂ ಸುಮ್ಮನಿರುವುದಿಲ್ಲ. ನಾನು ಜೇಲಿಗೆ ಹೋದರೆ ನನ್ನ ಹೆಂಡತಿ-ಮಕ್ಕಳಿಗಷ್ಟು ಹೊಟ್ಟೆಗೆ ಹಾಕ್ಬಿಡ್ರಿ.'' ಎಂದು ಬಿಡಬೇಕೆ ? ಕೆಲವು ಸಾಮಾನ್ಯ ಹೆಣ್ಣುಮಕ್ಕಳು ಸಹಿತ ಸಿಟ್ಟಿಗೆದ್ದಿದ್ದರು. 'ನಮ್ಮ ತಾಳ್ಮೆ ಕೆಟ್ಟಿದೆ. ನೀವು ಶಾಂತಿ ಮಂತ್ರ ಹೇಳಬೇಡಿ.' ಎಂದು ಗಂಗಾ ಮಾತಾಜಿಗೆ ನುಡಿದಿದ್ದರಂತೆ.

ಪೋಲೀಸರು ಜನರ ಭಾವನೆ ಗ್ರಹಿಸಿ ಅತ್ತ ಹೋಗಿ ೩೦-೪೦ ಸಂಖ್ಯೆಯಲ್ಲಿದ್ದ ಶಾಸಕ ಚಂದ್ರಕಾಂತ ಬೆಲ್ಲದರ ಪರಿವಾರವನ್ನು ತುಂಬಾ ದೂರದಲ್ಲಿ ತಡೆದು ''ನೀವು ದುಡುಕಬೇಡಿರಿ. ಅವರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ನಮ್ಮ ಮಾತು ಮೀರಿ ಮುಂದೆ ಹೋದರೆ ಗಂಭೀರ ಪರಿಸ್ಥಿತಿ ಎದುರಿಸಬೇಕಾದೀತು.'' ಎಂದು ಬುದ್ಧಿವಾದ ಹೇಳಿದ್ದಾರೆ. ''ನಮ್ಮನ್ನು ಬಂಧಿಸಿ (ಮರ್ಯಾದೆ ಉಳಿಸಿರಿ)'' ಎಂದು ಗೋಗರೆದಿದ್ದಕ್ಕೆ ೨೦ ಜನರನ್ನು ವ್ಯಾನಿನಲ್ಲಿ ಕೂರಿಸಿಕೊಂಡು ಒಯ್ದು ಬಿಟ್ಟರಂತೆ. ಪ್ರವಚನ ಜಾಗದಲ್ಲಿ ಎಲ್ಲವೂ ಶಾಂತಿವಾಗಿ ನಡೆಯಿತು. ಉತ್ಸಾಹಿ ತರುಣರು 'ಈಗ ಬರುತ್ತಾರೆ, ಆಗ ಬರುತ್ತಾರೆ' ಎಂದು ಪ್ರದರ್ಶನಕಾರರಿಗಾಗಿ ಉತ್ಸುಕತೆಯಿಂದ ಕಾಯುತ್ತಿದ್ದರಂತೆ.

ಅವರನ್ನು ಬರಗೊಡದೆ ದೂರದಿಂದಲೇ ಪೋಲೀಸರು ಕಳಿಸಿದ್ದು ಕೇಳಿ ಹುಡುಗರಿಗೆ ನಿರಾಶೆಯೋ ನಿರಾಶೆ !

'ಇವತ್ತು ಬುದ್ಧಿ ಕಲಿಸಬೇಕು ಅಂತ ಮಾಡಿದ್ವಿ, ಎಂಥಾ ಕೆಲಸ ಆಯ್ತು.' ಎಂದು ಪೇಚಾಡಿದರು. ತಕ್ಷಣ ನನಗೆ ಫೋನ್ ಮಾಡಿದರು, ''ಇಂದು ನಾವೊಂದು ಗಣಾಚಾರ ದಳ ಸ್ಥಾಪನೆ ಮಾಡಬೇಕು ಎಂದುಕೊಂಡಿದ್ದೇವೆ. ಒಪ್ಪಿಗೆ ಕೊಡಿರಿ.'' ಎಂದು.

ರಾಷ್ಟ್ರೀಯ ಬಸವ ದಳವೇ ಇದೆಯಲ್ಲ ಮತ್ತೇಕೆ ? ಎಂದೆ. ''ರಾಷ್ಟ್ರೀಯ ಬಸವ ದಳದವರಲ್ಲಿ ಹಿರಿಯರು ಮುದುಕರು ನಮ್ಮ ಉತ್ಸಾಹಕ್ಕೆ ತಣ್ಣೀರೆರೆಚುವಂತೆ ಶಾಂತಿ ಮಂತ್ರ ಹೇಳುತ್ತಾರೆ.'' ಎಂದರು ''ಬೇಡಪ್ಪಾ, ನೀವು ಬಿಸಿ ರಕ್ತದ ತರುಣರು, ದುಡುಕುವ ಸಂಭವ ಇರುತ್ತದೆ'' ಎಂದೆ.'

''ಇಲ್ಲ, ನಾವೇನು ಚಿತ್ರದುರ್ಗ ಬೃಹನ್ಮಠದ ಶ್ರೀಗಳಂತೆ, ವೀರಶೈವ ಮಹಾಸಭೆಯವರಂತೆ ಇನ್ನೊಬ್ಬರ ಕಾರ್ಯಕ್ರಮ ಕೆಡಿಸಲು ಹೋಗುವುದಿಲ್ಲ. ನಮ್ಮ ಪ್ರವಚನಗಳನ್ನು ಕೆಡಿಸಲು ಬರುವವರನ್ನು ತಡೆಯುತ್ತೇವೆ ಅಷ್ಟೆ. ನಮ್ಮದು ಆತ್ಮರಕ್ಷಣೆಗಾಗಿಯೇ ವಿನಾ ಆಕ್ರಮಣಕ್ಕಾಗಿ ಅಲ್ಲ .'' ಎಂದರು. ಆಗಲಿ ಎಂದು ಒಪ್ಪಿಗೆ ನೀಡಿದೆ. ಶರಣ ವಿನಯ ಪರಮಾದಿಯವರನ್ನು ಗಣಾಚಾರ ದಳದ ಹುಬ್ಬಳ್ಳಿ ಘಟಕದ

ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿ, ಅಂದು ಘೋಷಿಸಿದರು. ಈಗ ಗಣಾಚಾರ ದಳದ ಹುಬ್ಬಳ್ಳಿ ಶಾಖೆ ಮಾಡಿದ್ದಾರೆ. ಮುಂದಿನ ಉದ್ದೇಶ ಎಲ್ಲಾ ಊರುಗಳ ರಾಷ್ಟ್ರೀಯ ಬಸವ ದಳಗಳಿಂದ ಆಯ್ದ ಒಂದು ಸಾವಿರ ಜನ ಗಣಾಚಾರಿಗಳ ಪಡೆಯನ್ನು ರೂಪಿಸುವುದು. ಇವರುಗಳು ಸತ್ ಸಂಕಲ್ಪ ತೊಡುವುದು,

ಬಸವ ಧರ್ಮ ಪೀಠದ ಧರ್ಮ ಪ್ರಚಾರಕರು ಪ್ರವಚನ ಮಾಡುವಾಗ ಚಿತ್ರದುರ್ಗ ಬೃಹನ್ಮಠದವರು, ವೀರಶೈವ ಮಹಾಸಭೆ ಮತ್ತೆ ಯಾರೇ ಆದರೂ ಪ್ರವಚನ ಕೆಡಿಸುವ ತಂತ್ರ ರೂಪಿಸಿದರೆ ಅದಕ್ಕೆ ಅವಕಾಶ ಕೊಡದಂತೆ ಪ್ರವಚನ ನಡೆಸಲು ಸಿದ್ಧರಾಗಿ, ಯಾವಾಗಲೇ ಕರೆದರೂ ತಮ್ಮ ವೈಯಕ್ತಿಕ ಕೆಲಸ ಬದಿಗೊತ್ತಿ ಪ್ರವಚನಕ್ಕೆ ಬರಬೇಕೆಂಬುದು ಆಗಿದೆ. ಹೀಗೆ ಆಲೋಚಿಸುವ ಶರಣರೆಲ್ಲ ಸಾತ್ವಿಕ ಧೈರ್ಯ, ಬಸವ ಭಕ್ತಿ, ಇಷ್ಟಲಿಂಗ ಪೂಜಾ ನಿಷ್ಠೆಯಿಂದ ಕೂಡಿರುವುದೊಂದು ವಿಶೇಷ.

-ಮಾತಾಜಿ

ಅಕ್ಕನ ಬಳಗಗಳ ಆಧುನಿಕ ಮಹಿಳೆಯರು

ನಮ್ಮ ಮಹಾದೇವಿ ಅಕ್ಕ ನಿಜಶರಣೆ, ಅಂದು
ಶ್ರೀ ಗುರುಬಸವಣ್ಣನು ಕರುಣಿಸಿದ ಇಷ್ಟಲಿಂಗವ ನಿಷ್ಠೆಯಿಂದ ಪೂಜಿಸಿ
ಸ್ವಯಲಿಂಗಿಯಾದಳು ।

ಇಂದು ಅಕ್ಕನ ಬಳಗದವರೆಂದು ಹೆಸರಿಟ್ಟುಕೊಂಡು ಬೀಗುತ್ತ
ಇಷ್ಟಲಿಂಗವನರಿಯದೆ ಅರೆಮರುಳರ ಬೆಂಬತ್ತಿ, ಹಲವು ಮಹಿಳೆಯರು
ಅಜ್ಞಾನದಲ್ಲಿ ತೊಳಲಿ ಬಳಲುತಿಹರು ।

ನಮ್ಮ ಮಹಾದೇವಿ ಅಕ್ಕಗಳು ಅಂದು
ನಿಜ ಶರಣರ ಸಂಗದಲ್ಲಿರ್ದು ಅನುಭಾವದಿಂದ
ಭವವ ತೊಡೆದಳು ।

ಇಂದು ಅಕ್ಕನ ಬಳಗದವರು
ನಿಜವನರಿಯದ ವೀರಶೈವ ಭವಿಗಳ ಸಂಗದಿಂದ
ಭವಭಾರಿಗಳಾಗುತಿಹರು ।

ಇಂತು ತನ್ನಂತರಂಗದಲ್ಲಿರ್ದ
ಲಿಂಗದೇವನ ಮಹಾಬೆಳಗಕೂಡಿ ನಿಜೈಕ್ಯಳಾದ
ನಮ್ಮ ಮಹಾದೇವಿ ಅಕ್ಕಗಳ ನಿಜನಿಲುವ ಇವರೆತ್ತ ಬಲ್ಲರು ?

ಈ ಅಕ್ಕನ ಬಳಗಿಗಳು ಹಲವು ಗುಡಿಗಳ ಸುತ್ತುತ್ತ
ಸ್ಥಾವರವ ಪೂಜಿಸುತ್ತ ಲಿಂಗದೇವನನೇ ನಿಂದಿಸುವುದ ಕಂಡು
ನಾಚಿ ನೀರಾದೆನಯ್ಯ ಲಿಂಗಜ್ಞಾನಿ ಶ್ರೀ ಚನ್ನಬಸವಣ್ಣ

10-5-2001

ಡಾ|| ಮರಿಬಸಪ್ಪ ದನದಮನಿ, ಧಾರವಾಡ

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣವನ್ನು ಓದಲು ಪ್ರೇರೆಪಿಸಿ,
ನಿಮ್ಮ ಬಂಧು ಮಿತ್ರರಿಗೂ ಉಡುಗೊರೆಯಾಗಿ ಕಳಿಸಿರಿ.

ಸಂಪಾದಕೀಯ- 3

ಮಾಧ್ವರ ಸಂಘಟನೆ

ದಕ್ಷಿಣ ಕನ್ನಡ ಪ್ರದೇಶದ-ಉಡುಪಿಯಲ್ಲಿ ನಡೆದ ಅಷ್ಟಮಠಾಧೀಶರ ಮತ್ತು ಮಾಧ್ವ ತತ್ತ್ವಜ್ಞಾನ ಸಮ್ಮೇಳನದಲ್ಲಿ ವೈಷ್ಣವ ಮಾಧ್ವರೆಲ್ಲ ಪಂಥ ಭೇದ ಮರೆತು ಒಂದಾಗಲು ಕರೆ ನೀಡಿದ್ದಲ್ಲದೆ, 'ವೈಷ್ಣವ ಮಾಧ್ವರನ್ನೆಲ್ಲ ಒಂದುಗೂಡಿಸುವ ಇಚ್ಛೆ ಪ್ರಕಟಿಸಲಾಯಿತು. ಕುರುಬರು, ಒಕ್ಕಲಿಗರು, ಮೊಗವೀರರೂ ಮುಂತಾದವರಲ್ಲಿ ಇರುವ ವೈಷ್ಣವರನ್ನು ಉದಾಹರಣೆಗೆ ಕನಕ ಭಕ್ತರನ್ನು ಒಳಗೊಳ್ಳುವ ಸಂಘಟನೆ ಮಾಡುವ ಬಗ್ಗೆ ಒಲವು ತೋರಲಾಯಿತು. ಆ ವರದಿ ನೋಡಿ ಮನದಲ್ಲೇ ನಕ್ಕು ನಾನು ಸುಮ್ಮನಾಗಿದ್ದೆ. ಆದರೆ ಹೊಸ ದಿಗಂತ ಪತ್ರಿಕೆಯಲ್ಲಿ ಎಸ್.ಎಸ್.ಪ್ರವೀಣ್‌ಕುಮಾರ ಬರೆದ ಪತ್ರ ನನಗೆ ಈ ಲೇಖನ ಬರೆಯಲು ಪ್ರೇರಣೆ ನೀಡಿತು. ಅಂತೂ ಪರವಾಗಿಲ್ಲ,' ವಿಶೇಷವಾಗಿ ವಿಚಾರ ಮಾಡುವ ಪ್ರವೀಣಕುಮಾರ್‌ರಂಥವರು ಇದ್ದಾರಲ್ಲ ಎನಿಸಿ ಸಹರ್ಷವೆನಿಸಿತು:

ಹೆಮ್ಮೆಯ ವಿಷಯವಲ್ಲವೆ ?

ಉಡುಪಿಯಲ್ಲಿ ಈಚೆಗೆ ನಡೆದ ಮಾಧ್ವ ತತ್ತ್ವಜ್ಞಾನ ಸಮ್ಮೇಳನದಲ್ಲಿ ವೈಷ್ಣವ ಮಾಧ್ವರೆಲ್ಲ ಪಂಥ ಭೇದ ಮರೆತು ಒಂದಾಗಬೇಕೆಂದು ಮಠಾಧೀಶರು ಕರೆ ನೀಡಿದ್ದಾರೆ.

ಹೊಸದಿಗಂತ ೩ನೇ ಏಪ್ರಿಲ್ ೨೦೦೧. ಈ ವೈಷ್ಣವರಲ್ಲಿ ಅವರು ಮೊಗವೀರರನ್ನು ಸೇರಿಸಿದ್ದಾರೆ! ಆದರೆ ನಿಜವಾಗಿ ನಮ್ಮ ಮೊಗವೀರರಲ್ಲಿ ಶೈವ-ವೈಷ್ಣವ ಎಂದು ಪ್ರಭೇದವೇ ಇಲ್ಲ. ಆದರೆ ಎಲ್ಲಾ ತುಳುವರಂತೆ ಮೊಗವೀರರೂ ನಾಗಮೂಲದವರು, ಹಾಗೂ ಇವರಿಗೆ ನಾಗಾರಾಧನೆ, ಭೂತಾರಾಧನೆ ಬಗ್ಗೆ ವಿಶೇಷ ನಂಬಿಕೆ. ಇವೆರಡೂ ಶೈವ ಸಂಪ್ರದಾಯದ ಅಂಗವೆಂದು ಹೇಳಲಾಗುತ್ತದೆ.

ಮೇಲಾಗಿ ಪುರಾಣಗಳ ಪ್ರಕಾರ ಭಗವಾನ್ ಪರಶುರಾಮನು ಕರಾವಳಿ ಪ್ರದೇಶವನ್ನು ಸೃಷ್ಟಿಸಿ ಇಲ್ಲಿಯ ಮೂಲ ನಿವಾಸಿಗಳಿಗೆ ದಾನಕೊಟ್ಟು ಹಿಮಾಲಯಕ್ಕೆ ತಪಸ್ಸಿಗೆ ಹೋಗುವ ಮುನ್ನ ಅಪ್ಪಣೆ ಕೊಟ್ಟದ್ದೇನೆಂದರೆ - ನನ್ನನ್ನು ಪ್ರತ್ಯೇಕವಾಗಿ ಪೂಜಿಸುವ ಅವಶ್ಯಕತೆ ಇಲ್ಲ. ನನ್ನ ಆರಾಧ್ಯ ದೈವ ಶಿವ - ಶಕ್ತಿ. ನೀವೆಲ್ಲಾ ಅವರನ್ನೇ ಪೂಜಿಸಿದರೆ ನನಗೆ ತೃಪ್ತಿಯ್ಯಾಗಿ ನಾನು ನಿಮ್ಮನ್ನು ಹರಸುತ್ತಾ ಇರುತ್ತೇನೆ. ಅದಕ್ಕಾಗಿಯೇ ಶಂಕರಾಚಾರ್ಯರು ಈ ಪವಿತ್ರ ಪರಶುರಾಮ ಸೃಷ್ಟಿಯಲ್ಲಿ ಏಳು ಶಕ್ತಿ (ದುರ್ಗಾ)ಲಿಂಗಗಳನ್ನು ಸ್ಥಾಪಿಸಿದ್ದು, ಹಾಗೂ ಭಕ್ತರು ಹಳ್ಳಿ-ಹಳ್ಳಿಗಳಲ್ಲಿ ಶಿವ ಸುಬ್ರಹ್ಮಣ್ಯರ ದೇವಸ್ಥಾನಗಳನ್ನು ಕಟ್ಟಿಸಿದ್ದು.

ಉಡುಪಿ ಮಠಾಧೀಶರನ್ನು ಉತ್ತರ ಭಾರತದಲ್ಲಿ ಉಡುಪಿ ಶಂಕರಾಚಾರ್ಯ ಎಂದು ಕರೆದರೆ ಬೇಸರ ಪಡುವ ಬದಲು ಸಂತೋಷ ಪಡಬೇಕಿತ್ತು. ಹೆಚ್ಚು ಜನರು ಆದರಿಸುವ ವ್ಯಕ್ತಿಯೊಂದಿಗೆ ಹೋಲಿಸಿದರೆ ಹೆಚ್ಚು ಹೆಮ್ಮೆಯ ವಿಷಯವಲ್ಲವೆ ?

ಎಸ್.ಎಸ್.ಪ್ರವೀಣ್‌ಕುಮಾರ್, ಬೆಂಗಳೂರು.

(ಕೃಪೆ - ಹೊಸದಿಗಂತ ದಿ.೧೧-೫-೨೦೦೧)

"ಉಡುಪಿ ಮಠಾಧೀಶರನ್ನು ಉತ್ತರ ಭಾರತದಲ್ಲಿ ಉಡುಪಿ ಶಂಕರಾಚಾರ್ಯ ಎಂದು ಕರೆದರೆ ಬೇಸರ ಪಡುವ ಬದಲು ಸಂತೋಷ ಪಡಬೇಕಿತ್ತು," ಎಂಬ ಅಭಿಪ್ರಾಯ ಓದಿದಾಗ ಉಡುಪಿ ಮಠಾಧೀಶರು ಶಂಕರಾಚಾರ್ಯರ ಬಗ್ಗೆ ಅಸಹನೆ ಹೊಂದಿದ್ದಾರೆ ಎಂದು ತಿಳಿದುಬರುತ್ತದೆ. ಸ್ಮಾರ್ತ ಬ್ರಾಹ್ಮಣರು ತಮಿಳುನಾಡಿನ ಅಯ್ಯರಗಳು, ಕೇರಳದ ಶೈವ ಬ್ರಾಹ್ಮಣರು ಶ್ರೀ ಶಂಕರಾಚಾರ್ಯರ

ಅದ್ವೈತವನ್ನು ಜನ್ಮಜಾತ ಅಭಿಮಾನದಿಂದ ಒಪ್ಪಿಕೊಂಡಿದ್ದರೆ, ಭಾರತದಾದ್ಯಂತ ಜಾತಿಮತಪಂಥಾತೀತವಾಗಿ ಶ್ರೀ ಶಂಕರಾಚಾರ್ಯರ ಅದ್ವೈತ ಸಿದ್ಧಾಂತವೇ ವ್ಯಾಪಕವಾಗಿ ಪ್ರಚಾರದಲ್ಲಿದೆ. ಶ್ರೀ ಶಂಕರರು ಒಪ್ಪಿದ್ದು ವರ್ಣಾಶ್ರಮ ಸಮಾಜಶಾಸ್ತ್ರ. ಹೀಗಾಗಿ ವಿಚಾರವಾದಿಗಳಿಗೆ ಆ ಬಗ್ಗೆ ತುಂಬಾ ಕೋಪ ಇದ್ದರೂ ಕೆಲವು ಅಧ್ಯಾತ್ಮಿಕ ಆಶ್ರಮಗಳು ಶಂಕರಾಚಾರ್ಯರ ಸಾಮಾಜಿಕ ನಿಲುವು ತೆಗೆದುಕೊಳ್ಳದೆ, ಕೇವಲ ಅದ್ವೈತ ಸಿದ್ಧಾಂತವನ್ನು ಬೋಧನೆಗೆ ಬಳಸುತ್ತಾರೆ. ಸ್ವಾಮಿ ಚಿನ್ಮಯಾನಂದರು, ಕರ್ನಾಟಕದ ಸಿದ್ಧಾರೂಢ ಪರಂಪರೆಯೂ ನನ್ನ ಮಾತಿಗೆ ಒಂದು ಉದಾಹರಣೆ. ಹೀಗಾಗಿ ಶಂಕರಾಚಾರ್ಯರ ಹೆಸರು ಹೆಚ್ಚು ಪ್ರಚಾರದಲ್ಲಿದೆ. ದಕ್ಷಿಣದವರು ಎಂದ ತಕ್ಷಣ ಮದ್ರಾಸಿಗಳೇ ಎಂದು ಉತ್ತರ ಭಾರತದವರು ಕೇಳುವಂತೆ ನೀವು ಶಂಕರಾಚಾರ್ಯರ ಸಂಪ್ರದಾಯವರೇ ಎಂದು ನಮ್ಮ ಹಣೆ ಮೇಲಿನ ವಿಭೂತಿ ನೋಡಿ ತಟ್ಟನೆ ಕೇಳುತ್ತಾರೆ.

ಅದೇ ರಾಮಾನುಜರ ಬಗ್ಗೆ ಹೆಚ್ಚು ಪ್ರಚಾರವಿಲ್ಲ ; ಮಧ್ವಾಚಾರ್ಯರದು ಇನ್ನೂ ಕಮ್ಮಿ. ಮಾಧ್ವ ಸಿದ್ಧಾಂತ ವೈಷ್ಣವರಿಗೆ ಅದೂ ಮಾಧ್ವ ಬ್ರಾಹ್ಮಣರಿಗೆ ಸೀಮಿತವಾಗಿ ಬಿಟ್ಟಿದೆ. ಉಡುಪಿ ಹೋಟೆಲ್ಲುಗಳವರು ಯಾವುದೇ ಜಾತಿಯವರಿರಲಿ ತಮ್ಮ ಊರಿನ ಬಗ್ಗೆ, ತಮ್ಮೂರ ಮಠಗಳ ಬಗ್ಗೆ ಅಭಿಮಾನ ತಾಳಿ ಯಥೇಚ್ಛವಾಗಿ ಕಾಣಿಕೆ ಕೊಡುತ್ತಿರುವುದರಿಂದ ಮಾಧ್ವ ಸಂಪ್ರದಾಯ, ಅಷ್ಟ ಮಠಗಳ ಬಗ್ಗೆ ಪ್ರಚಾರವಿದೆಯೇ ವಿನಾ ಶಂಕರಾಚಾರ್ಯರ ಅದ್ವೈತ ಸಿದ್ಧಾಂತದಂತೆ ಮಾಧ್ವರ ದ್ವೈತ ಸಿದ್ಧಾಂತ ಜನಪ್ರಿಯವಾಗಿಲ್ಲ. ಉತ್ತರದಲ್ಲಿರುವ ಕೃಷ್ಣಭಕ್ತಿ ಅದು ಭಾಗವತ ಭಕ್ತಿಯೇ ವಿನಾ ಮಾಧ್ವ ಸಿದ್ಧಾಂತದಂತೆ ಸೈದ್ಧಾಂತಿಕ ಭಕ್ತಿಯಲ್ಲ.

ಎಲ್ಲಾ ವೈಷ್ಣವ ಬ್ರಾಹ್ಮಣರನ್ನು ಮಾತ್ರವಲ್ಲ ವೈಷ್ಣವರಾದ ಇತರರನ್ನು, ಶೂದ್ರಾದಿಗಳನ್ನು ಒಂದು ಗೂಡಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಇದು ಎಷ್ಟರ ಮಟ್ಟಿಗೆ ಪ್ರಾಯೋಗಿಕ ? ಕುರುಬರು ಮೂಲತಃ ಶಿವಭಕ್ತರು. ಕವಿ ಕಾಳಿದಾಸನ ಕಾಲದಿಂದಲೂ ಕುರುಬರು ಪೂಜಿಸುವ ದೇವತೆಗಳಾದ ಬೀರೇಶ್ವರ, ಮೈಲಾರಲಿಂಗ, ರೇವಣಸಿದ್ಧೇಶ್ವರ, ಗೊಲ್ಲಾಳೇಶ್ವರ ಎಲ್ಲವೂ ಶೈವ ದೇವತೆಗಳು ಮತ್ತು ಅವರೆಲ್ಲ ತ್ರಿಪುಂಡ್ರ (ವಿಭೂತಿ)ಧಾರಕರು. ಭಕ್ತಿ ಕವಿಯಾದ ಕನಕದಾಸರು ಕಾಗಿನೆಲೆಯ ಕೇಶವನ ಭಕ್ತರಾದ ಕಾರಣ ಶೈವ ಮಾರ್ಗಿಗಳಾದ ಕುರುಬರೊಳಗೆ ವೈಷ್ಣವ ಭಕ್ತಿ ಪ್ರವೇಶಿಸಿತು. ಆಳವಾಗಿ ಚಿಂತಿಸಿದರೆ ಕುರುಬ ಜನಾಂಗದವರು ಕನಕದಾಸರು ತಮ್ಮ ಜಾತಿಯಲ್ಲಿ ಹುಟ್ಟಿದ್ದಕ್ಕೆ ಅವರನ್ನು ಶ್ರದ್ಧಾಕೇಂದ್ರವಾಗಿ ಇರಿಸಿಕೊಂಡಿದ್ದಾರೆಯೇ ವಿನಾ ಸಾಂಸ್ಕೃತಿಕವಾಗಿ ವೈಷ್ಣವ ಮಾರ್ಗಿಗಳಲ್ಲ. ಹೀಗಿರುವಾಗ ವೈಷ್ಣವ ಕುರುಬರನ್ನು ತಮ್ಮೊಡನೆ ಕರೆದುಕೊಳ್ಳುತ್ತೇವೆ ಎಂಬ ಹೇಳಿಕೆ ಕುರುಬ ಸಮಾಜವನ್ನು ವೈಷ್ಣವರು-ಶೈವರು ಎಂದು ಒಡೆಯುವ ತಂತ್ರ ಪ್ರಯೋಗಿಸಿದಂತೆ ಅಲ್ಲವೆ ? ಸಮಸ್ತ ಹಿಂದು ಸಮಾಜದ ಸಂಘಟನೆ ಬಗ್ಗೆ ಚಿಂತಿಸುವ ಶ್ರೀ ಪೇಜಾವರ ಸ್ವಾಮಿಗಳು ಹಿಂದು ವೇದಿಕೆ ಮೇಲೆ ಹಿಂದು ಸಮಾಜದ ಐಕ್ಯತೆಯ ಬಗ್ಗೆ ಭಾಷಣ ಮಾಡಿ ಪುನಃ ಹಿಂದುಗಳಲ್ಲಿ ವೈಷ್ಣವರನ್ನು ಪ್ರತ್ಯೇಕ ಮಾಡುವ ತಂತ್ರ ಹೂಡುವುದು ಎಷ್ಟರ ಮಟ್ಟಿಗೆ ಉಚಿತ ?

ಈ (ಕು)ತಂತ್ರಕ್ಕೆ ಪ್ರವೀಣಕುಮಾರ್ ಅವರ ಪತ್ರ ಒಳ್ಳೆಯ ತಿರುಗೇಟು ಕೊಟ್ಟಿದೆ. ಪ್ರವೀಣ ಕುಮಾರ ಮೊಗವೀರ ಜಾತಿಗೆ ಸೇರಿದವರು. ಅವರಲ್ಲೂ ಇರುವ ವಿಷ್ಣು ಭಕ್ತರನ್ನು ಇತರರಿಂದ ಪ್ರತ್ಯೇಕಿಸಿ ತಮ್ಮತ್ತ ಎಳೆದುಕೊಳ್ಳುವ ಹೇಳಿಕೆಯನ್ನು ಮಾಧ್ವ ಸಮ್ಮೇಳನ ಘೋಷಿಸಿದೆ. ಪ್ರವೀಣಕುಮಾರ್ ಹೇಳುವಂತೆ ಮಾಧ್ವರಲ್ಲಿರುವಂತೆ ವೈಷ್ಣವರು ಉಳಿದ ಹಿಂದುಗಳಲ್ಲಿಲ್ಲ. ಉಳಿದೆಲ್ಲ ಹಿಂದುಗಳು ವೈಷ್ಣವ ದೇವತೆಗಳನ್ನು ಆರಾಧಿಸಿದರೂ ಶಿವ ದ್ವೇಷಿಗಳಲ್ಲ, ಶಿವನನ್ನು ಅಗೌರವದಿಂದ ಕಾಣದೆ ಗೌರವದಿಂದ

ಪೂಜಿಸುತ್ತಾರೆ. ಅದೇ ಶ್ರೀ ವೈಷ್ಣವರು ಅಂದರೆ ರಾಮಾನುಜ ಪಂಥಿಗಳು ಮತ್ತು ವೈಷ್ಣವರಾದ ಮಾಧ್ವರು ಶಿವನ ಹೆಸರನ್ನು ಕೇಳಿದರೆ ಸಿಡಿದು ಬೀಳುತ್ತಾರೆ. ಇಂಥ ವಿಷ್ಣು ಭಕ್ತಿಯನ್ನು ಮಾಡಲು ವೈಷ್ಣವ, ಶ್ರೀ ವೈಷ್ಣವ ಬ್ರಾಹ್ಮಣರು ಬಿಟ್ಟರೆ ಬೇರೆ ಯಾವ ಹಿಂದೂಗಳು ಸಿದ್ಧರಾಗುವುದಿಲ್ಲ. ಅಂದಾಗ ಎಲ್ಲ ವೈಷ್ಣವರನ್ನು ಕುರುಬರು, ಮೊಗವೀರರು ಸೇರಿದಂತೆ ಒಂದುಗೂಡಿಸಬೇಕೆಂಬ ಸಲಹೆ, ನಿರ್ಣಯ ಹಾಸ್ಯಾಸ್ಪದವಲ್ಲವೆ ?

ಒಂದುಗೂಡಿಸುವುದು ಎಂದರೇನು ?

ವಿಶ್ವಗುರು ಬಸವಣ್ಣನವರು ಜಾತಿಯ ಕಟ್ಟನ್ನು ಒಡೆದು ಎಲ್ಲರನ್ನೂ ಒಂದುಗೂಡಿಸಲು ನಾಲ್ಕು ಸೂತ್ರಗಳನ್ನು ಕೊಡುತ್ತಾರೆ. ಅವೆಂದರೆ

೧. ದೀಕ್ಷೆ ಕೊಡುವುದು
೨. ಒಡನಾಡುವುದು
೩. ಪರಸ್ಪರ ಊಟೋಪಚಾರ ಮಾಡುವುದು
೪. ವಿವಾಹ ಸಂಬಂಧ ಬೆಳೆಸುವುದು.

ಆವ ಕುಲವಾದರೇನು ಶಿವಲಿಂಗವಿದ್ದವನೆ ಕುಲಜನು !
ಕುಲವನರಸುವರೆ ಶರಣರಲ್ಲಿ, ಜಾತಿಸಂಕರವಾದ ಬಳಿಕ ?
ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ
ಲಿಂಗದೇವಾ, ನಂಬುವೆ ನಿಮ್ಮ ಶರಣರನು. -ಬಸವ ವಚನ ದೀಪ್ತಿ 715

ಈ ಹಿನ್ನೆಲೆಯಲ್ಲಿ ಅಷ್ಟಮಠಾಧೀಶರು ಕುರುಬರು, ಮೊಗವೀರರು. ಇತ್ಯಾದಿ ಎಲ್ಲರಿಗೂ ವೈಷ್ಣವ (ಮಾಧ್ವ ಸಿದ್ಧಾಂತ) ದೀಕ್ಷೆ ಕೊಡಬಲ್ಲರೇ ? ಕೊಟ್ಟ ಬಳಿಕ ಒಡನಾಡಬಲ್ಲರೇ ? ಸಮಾನ ಪಂಕ್ತಿಯಲ್ಲಿ ಕುಳ್ಳಿರಿಸಿಕೊಂಡು ಭೋಜನ ಮಾಡಬಲ್ಲರೆ ? ವಿವಾಹ ಸಂಬಂಧ ಬೆಳೆಸಬಲ್ಲರೆ ? ಇವೇನನ್ನೂ ಮಾಡದೆ ಇದ್ದ ಮೇಲೆ ಎಲ್ಲರನ್ನೂ ಕೂಡಿಸಿಕೊಳ್ಳುವುದು ಎಂದರೇನು ?

ವಿಶ್ವಗುರು ಬಸವಣ್ಣನವರು ಕೊಟ್ಟ ಇಷ್ಟಲಿಂಗ ಕಟ್ಟಿಕೊಂಡು ಅವರ ಸಂವಿಧಾನದಲ್ಲಿ ಸಮಾನತೆ ಇದ್ದರೂ ಆಚರಿಸದ ವೀರಶೈವವಾದಿ ಲಿಂಗಾಯತರನ್ನೇ ಬಸವ ತತ್ತ್ವದ ಪ್ರಕಾರ ನಡೆಯುವಂತೆ ಮಾಡಲು ನಾವು ಹೆಣಗಾಡುತ್ತಿರುವಾಗ, ಇನ್ನು ಅವರ ವಿಚಾರಧಾರೆಯಲ್ಲೇ ಇಲ್ಲದ ಸಮಾನತೆಯನ್ನು ಮಾಧ್ವ ಸಿದ್ಧಾಂತ ಬೋಧಿಸಿ ಪ್ರತಿಪಾದಿಸಿ ಎಲ್ಲರನ್ನೂ ಒಂದುಗೂಡಿಸಲು ಮಾಧ್ವ ಸಿದ್ಧಾಂತಿಗಳಿಗೆ ಎಂದಾದರೂ ಸಾಧ್ಯವೆ ? ಕೈಲಾಗದ ಆದರ್ಶವನ್ನು ಬಾಯಿ ತುಂಬ ಆಡುವುದು ಸಲ್ಲದ ನಡೆ !

-ಮಾತಾಜಿ

ಪೂಜ್ಯ ಗುರುಗಳ ಸಂಸ್ಮರಣ ಕಾರ್ಯಕ್ರಮ

ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಅಧಿಕಾರಿಗಳಾದ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳು ದಿ.30-6-1995ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನೈದಿದರು. ಪೂಜ್ಯ ಲಿಂಗೈಕ್ಯ ಮಹಾಜಗದ್ಗುರುಗಳ 7ನೆಯ ಲಿಂಗೈಕ್ಯ ಸಂಸ್ಮರಣ ಕಾರ್ಯಕ್ರಮವನ್ನು ಕೂಡಲ ಸಂಗಮದ ಮಹಾಮನೆ ಮಹಾಮಠದಲ್ಲಿ ದಿ. 30-6-2001ರಂದು ಬೆಳಗ್ಗೆ 11 ಗಂಟೆಗೆ ಗಣಪ್ರಸಾದದೊಡನೆ ಏರ್ಪಡಿಸಲಾಗಿದೆ. ಮರುದಿನವೇ ಭಾನುವಾರ ಇರುವುದರಿಂದ ಬೆಂಗಳೂರಿನ ಬಸವ ಮಂಟಪದಲ್ಲಿ 1-7-2001ರಂಧು ಬೆಳಗ್ಗೆ 10-30ಕ್ಕೆ ಮತ್ತು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ಸಹ ಭಾನುವಾರ ದಿ. 1-7-2001ರಂದು ಬೆಳಗ್ಗೆ 10-30ಕ್ಕೆ ಗಣ ಪ್ರಸಾದದೊಡನೆ ಏರ್ಪಡಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಲು ಕೋರಿಕೆ.

ವಚನ ಕಿರಣ :- ಮಾತೆ ಅಕ್ಕಮಹಾದೇವಿ, ಬಸವ ಧರ್ಮ ಪೀಠ

೧. ಗುಡಿಯ ದೇವತೆಗಳಿಗೆ
ನೂರಾರು ರೂಪಾಯಿಗಳ ಖರ್ಚು ಮಾಡುವರು
ತೀರ್ಥ-ಕ್ಷೇತ್ರಂಗಳ ತಿರುಗಿ ಸಾವಿರಾರು ವ್ಯಯಿಸುವರು
ಧರ್ಮಲಾಂಛನವಾದ ಇಷ್ಟಲಿಂಗವ ಕೊಳ್ಳಲು
ಬೆಲೆ ಕೇಳಿ ಬಳಲುವ
ಭಂಡರ ಕಂಡು ನಗುವಂತಾಯಿತ್ತು ; ಮಾತಾ ಪ್ರಿಯ ಸಚ್ಚಿದಾನಂದ.

೨. ದೇವತೆಗಳಿಗೆ ಹರಕೆ ಹೊತ್ತು
ಸಾವಿರಾರು ಹಣ ಸುರಿವರು
ಕಾಯಿಲೆಯಾದರೆ ಲಕ್ಷ ಲಕ್ಷ ಖರ್ಚಿಸಲು ಹಿಂಜರಿಯರು
ಜಂಗಮ ಕಾರ್ಯಕ್ಕೆ ಧನವ ಸವೆಸಿ
ಪುಣ್ಯವ ಕೊಂಬುವವರೇ ವಿರಳವಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೩. ರೋಗ ರುಜಿನಗಳು ಬಂದು ಖರ್ಚಾದರೆ
ತಮ್ಮ ಕರ್ಮವೆಂದುಕೊಳ್ಳುವರು,
ಕಳ್ಳ ಕಾಕರು ಒಯ್ದರೆ ಮರುಗಿ ಸುಮ್ಮನಾಗುವರು ;
ಜಂಗಮ ದಾಸೋಹಕ್ಕೆ ಬೇಡಿದರೆ
ಇಲ್ಲವೆನ್ನುವರಯ್ಯಾ ಮಾತಾ ಪ್ರಿಯ ಸಚ್ಚಿದಾನಂದ.

೪. ಜೀವಭಯ ತೋರಿಸುವ ಕಳ್ಳರಿಗೆ
ಸರ್ವಸ್ವವನ್ನೂ ಧಾರೆಯೆರೆಯುವರು ;
ಮೃತ್ಯುಭೀತಿಯಿಂದ ವೈದ್ಯರ ಮುಂದೆ
ಹಣ ಸುರಿದು ಬೇಡುವರು ;
ಧರ್ಮ-ಸಮಾಜಗಳ ಸೇವೆಗೈಯುವ
ತ್ಯಾಗಿಗಳಿಗೆ, ಜಂಗಮರಿಗೆ
ನಿಂದಿಸಿ ಹಿಂದೆ ಕಳಿಸುವರಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೫. ಸಮಯಗಳೆದು ಗುಡಿ-ಗುಂಡಾರಗಳ
ಸುತ್ತಿ ಸುತ್ತಿ ಬಳಲುವರು
ಧನ ವ್ಯಯಿಸಿ ತೀರ್ಥಕ್ಷೇತ್ರಂಗಳ
ತಿರು-ತಿರುಗಿ ದಣಿವರು
ದೇಹ ದೇವಾಲಯವಾಗಿಸುವ
ಧರ್ಮಲಾಂಛನ ಇಷ್ಟಲಿಂಗವ
ಬಿಟ್ಟು ತೊಳಲುವ ಕರ್ಮಿಗಳನನೇನೆಂಬೆನಯ್ಯ

ಮಾತಾ ಪ್ರಿಯ ಸಚ್ಚಿದಾನಂದ.

೬. ಶಾಸ್ತ್ರವನೆಷ್ಟು ಓದಿದರೇನು ?
ಪುರಾಣವನೆಷ್ಟು ಕೇಳಿದರೇನು ?
ಶರಣರದೊಂದು ವಚನ ಓದದೆ ಕೇಳದೇ ಅರಿಯದನ್ನಕ್ಕ
ಗೀತಂಗಳನೆಷ್ಟು ಹಾಡಿದರೇನು ?
ಮನದಲ್ಲಿ ಮಾತಾ ಪ್ರಿಯ ಸಚ್ಚಿದಾನಂದನಿಲ್ಲದನ್ನಕ್ಕ.

೭. ಕಟ್ಟಿದ ಲಿಂಗವ ತೆಗೆದು ಗೂಟಕ್ಕೆ ನೇತು ಹಾಕಿ
ನಟ್ಟಿರುವ ಲಿಂಗಗಳಿಗೆರಗಿದರೇನು ?.
ಕಂಕುಳಲ್ಲಿ ಕೂಸನ್ನಿರಿಸಿಕೊಂಡು
ಊರಲ್ಲೆಲ್ಲ ಹುಡುಕಾಡಿದಂತಾಯಿತ್ತಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೮. ಜಪವ ಮಾಡಿ ಜಿಹ್ವೆ ನೊಂದಿತ್ತು
ಲಿಂಗವ ದೃಷ್ಟಿಸಿ ನೋಟ ಬೆಂದಿತ್ತು
ಕೋಪ ತಾಪ ಮುನಿಸುಗಳಿಂದೆನ್ನ
ಮನವ ಮುಕ್ತವ ಮಾಡಿ ನಿಜವ ನೆಲೆಯಲ್ಲಿ ನಿಲಿಸಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೯. ನಿರಾಕಾರ ನಿನ್ನ ಕಾಣಲು ಸಾಕಾರ ರೂಪವಾಗಿ
ಕರಸ್ಥಲಕ್ಕೆ ಲಿಂಗವ ಕೊಟ್ಟ ಶ್ರೀ ಗುರು
ಇಷ್ಟಲಿಂಗವ ನೆಟ್ಟ ದೃಷ್ಟಿಯಿಂದ ನೋಡುವ
ಕಂಗಳಶ್ರುಜಲಂಗಳುದುರುವ ದೃಷ್ಟಿಯನಿಟ್ಟು
ನಾನು ನೀನೆಂಬ ಭಾವ ತೊರೆದ ಸ್ಥಿತಿಯನೇನೆಂಬೆನಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ.

೧೦. ಕಲ್ಲು ದೈವಂಗಳಿಗೆ ಹಾಲು-ತುಪ್ಪವನೆರೆದು,
ಸಮಾಜ ಸೇವೆಗೈಯುವ ಶರಣರು
ಧರ್ಮಪ್ರಚಾರ ಮಾಡುವ ಜಂಗಮರು ಬಂದಾಗ
ಆಶ್ರಯವೀಯದೇ ಪ್ರಸಾದವ ನೀಡದೆ ಹಿಂದೆ ಕಳಿಸುವ
ಕಾಣುವ ಜೀವಿಗಳ ನೋವಿಗೆ ನಲುಗದೆ
ಕಲ್ಲು ದೈವಂಗಳಿಗೆರಗುವ
ಕಲ್ಲು ಹೃದಯದವರ ಮೆಚ್ಚುವನೇ
ಮಾತಾ ಪ್ರಿಯ ಸಚ್ಚಿದಾನಂದನು ?

೧೧. ಹೊರ ಒಳಗು ತೊಳೆದಲ್ಲದೆ
ಪಾತ್ರೆ ಅಡಿಗೆ ಮಾಡಲು ಸಲ್ಲದಯ್ಯಾ
ಹೊರ ಒಳಗೆ ಶುಚಿಗೊಳಿಸಲಾರದ ತಟ್ಟೆ

ಪ್ರಸಾದ ಸ್ವೀಕಾರಕ್ಕೆ ಯೋಗ್ಯವಾಗದಯ್ಯ
ಅಂತರಂಗ ಬಹಿರಂಗ ಶುದ್ಧವಾಗದ ಭಕ್ತನ
ಮಾತಾ ಪ್ರಿಯ ಸಚ್ಚಿದಾನಂದನೊಲ್ಲನಯ್ಯಾ.

೧೨. ಉಪಕಾರಕ್ಕೆ ಉಪಕಾರ ಅಪಕಾರಕ್ಕೆ ಅಪಕಾರ ಗೈಯುವುದು ಮಾನವ ಗುಣ
ಅಪಕಾರಕ್ಕೆ ಅಪಕಾರ ಉಪಕಾರಕ್ಕೆ ಅಪಕಾರಗೈಯುವುದು ಆಸುರಿ ಗುಣ
ಉಪಕಾರಕ್ಕೆ ಉಪಕಾರ ಅಪಕಾರಕ್ಕೂ ಉಪಕಾರ ಗೈಯುವುದೇ ದೈವೀಗುಣವಯ್ಯಾ
ಮಾತಾ ಪ್ರಿಯ ಸಚ್ಚಿದಾನಂದ

೧೩. ಉಣಬೇಕೆಂದು ಉಣ್ಣುವುದಲ್ಲ ; ಹಸಿದುಣ್ಣಬೇಕು
ಹಸಿದಾಗ ಉಣ್ಣುವುದಲ್ಲ ; ಹೊತ್ತಿನ ಗೊತ್ತನರಿದುಣ್ಣಬೇಕು
ಹಣವಿದೆಯೆಂದು ಭಕ್ಷ್ಯ-ಭೋಜ್ಯಗಳ ಬಳಸುವದಲ್ಲ
ಆರೋಗ್ಯಕ್ಕೆ ಯೋಗ್ಯವಾದುದನ್ನರಿತು ಬಳಸಬೇಕು
ಪ್ರಸಾದದಲ್ಲಿ ರುಚಿಯನರಸಬಾರದೆಂಬ
ಶರಣ ವಾಣಿಯಿಹುದಾಗಿ ರುಚಿಯನ್ನರಿತು
ಉಣ್ಣುವುದಲ್ಲ ಪ್ರಮಾಣವನ್ನರಿತುಣ್ಣಬೇಕು
ಆಹಾರದಂತೆ ವಿಹಾರ, ವಿಹಾರದಂತೆ ವಿಚಾರವಾದ ಕಾರಣ
ಶ್ರೀಮಂತ ಪದಾರ್ಥಗಳನ್ನುಣ್ಣುವುದಲ್ಲ
ಸಾತ್ವಿಕ ಆಹಾರವನುಣ್ಣಬೇಕು
ಇಂತು ಆಹಾರದ ನಿಯಮವನ್ನರಿತು ಆಚರಿಸುವವನು
ನಾನಾ ರೋಗ ರುಜಿನಗಳಿಂದ ದೂರವಿದ್ದು
ವೈದ್ಯರ ಕಾಣದಂತಿರುವನಯ್ಯಾ, ಮಾತಾ ಪ್ರಿಯ ಸಚ್ಚಿದಾನಂದ.

ತ್ರಿಪದಿಗಳು

೧. ಫಲಾಪೇಕ್ಷೆಯಿಲ್ಲದೆ ಮಾಡುವವ ಉತ್ತಮ
ಫಲಾಪೇಕ್ಷೆ ಬಯಸಿ ಮಾಡುವವ ಮಧ್ಯಮ
ಪ್ರಯತ್ನಿಸದೆ ಫಲಾಪೇಕ್ಷಿಸುವವನಧಮ ಬಸವಣ್ಣ.

೨. ಧರ್ಮಪ್ರಚಾರಕೆ ಜಂಗಮರು ಬಾಗಿಲಿಗೆ
ಬಂದಾಗ ದಾಸೋಹಗೈಯುವವನ
ಜೀವನ ಧನ್ಯವಾಗದಿಪ್ಪುದೇ ಬಸವಣ್ಣ ?

೩. ಹೊತ್ತಿನ ಗೊತ್ತನ್ನರಿತು ಆಹಾರದ ಮಹತಿಯನ್ನರಿತು
ದೇಹಶ್ರಮವಂ ಗೈದು ಉಣ್ಣುವ ಆಹಾರದ ಒಂದೊಂದು
ಕಣವು ಪಚನವಾಗುವುದಯ್ಯಾ ಬಸವಣ್ಣ.

★

ಕಲ್ಯಾಣ ಕಿರಣದ ಎರಡು ಪ್ರತಿಗಳು ಬರುತ್ತಿದ್ದರೆ ಒಂದರ ಕ್ರಮ ಸಂಖ್ಯೆ ಕಾಣಿಸಿ ದಯವಿಟ್ಟು ಪತ್ರ ಬರೆಯಿರಿ.
-ವ್ಯವಸ್ಥಾಪಕರು

ಯುಗಪುರುಷ ಬಸವಣ್ಣನವರ ಶಿಕ್ಷಣ ತಂತ್ರ

ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ
ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ !
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ
ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ !
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ
ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ !
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ
ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ !
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾನು ಬೆರಗಾದೆನು.

ಅ.ಪ್ರ.ವ - 52

ಶರಣ ಬಂಧುಗಳೇ, ತಾವು ಎಂದಾದರೂ ಈ ವಚನವನ್ನು ಓದಿದ್ದೀರಾ ? ಕರ್ನಾಟಕ ಸರ್ಕಾರದ ಅಲ್ಲಮಪ್ರಭುದೇವರ ವಚನ ಸಂಪುಟದ ಗುರುಕರುಣಸ್ಥಲದಲ್ಲಿ ಈ ವಚನ ಮುದ್ರಣವಾಗಿದೆ. ಓದಿದ್ದರೆ ನೀವು ಅದೃಷ್ಟವಂತರು! ಓದದೆ ಇದ್ದರೆ ನಾನು ಅದೃಷ್ಟವಂತಳು!! ಅದು ಹೇಗೆ ? ಮುಂದೆ ನೋಡಿ ...!!!

ವೈರಾಗ್ಯ ಚಕ್ರವರ್ತಿಗಳೂ, ಶೂನ್ಯಪೀಠದ ಪ್ರಥಮಾಧಿಕಾರಿಯೂ ಆಗಿದ್ದ ಅಲ್ಲಮ ಪ್ರಭುದೇವರು ಈ ವಚನದಲ್ಲಿ ಏನು ಹೇಳುತ್ತಿದ್ದಾರೆ ? ಗುರು-ಶಿಷ್ಯರ ಸಂಬಂಧವನ್ನು. ಎಲ್ಲಾರೀತಿಯ ಬುದ್ಧಿ ಕಲಿಸುವ ಸಂಬಂಧಕ್ಕೂ " ಆಗಲಿ ಮಹಾಪ್ರಸಾದ " ಎಂದು ತಲೆದೂಗುತ್ತಿದ್ದಾರೆ. ಕೊನೆಯಲ್ಲಿ ಬೆರಗಾದೆನು ಎಂದು ಆಶ್ಚರ್ಯ ಚಕಿತರಾಗಿದ್ದಾರೆ. ಇಲ್ಲಿ ಇವರನ್ನು ಬೆರಗುಗೊಳಿಸಿದ ಸಂಗತಿ ಯಾವುದು ? ಕೆಲವರು ಹೇಳುತ್ತಾರೆ "ಇದೊಂದು ಚಮತ್ಕಾರದ ವಚನ" ಎಂದು. ಹಾಗಿದ್ದರೆ ಈ ವಚನದ ರಹಸ್ಯ ಏನಿರಬಹುದು ಎಂದು ತಿಳಿಯಲು ಕೆಲವು ಗಣ್ಯರನ್ನು, ಅಭಿಮಾನಿಗಳನ್ನು, ಜ್ಞಾನವೃದ್ಧರನ್ನು, ಅನುಭಾವಿಗಳನ್ನು ಭೇಟಿಯಾಗಿ ಕೇಳೋಣ. ಕೊನೆಯಲ್ಲಿ ನಾವು ಚಿಂತನೆಗೈಯ್ಯೋಣ.

ಧರ್ಮಬಂಧುಗಳೇ ಬನ್ನಿ, ಈಗ ದೊಡ್ಡವರು, ಬಲಿಷ್ಠರು (ಅ)ಜ್ಞಾನಿಗಳು ಎನಿಸಿಕೊಂಡವರ ಬಳಿಗೆ ಹೋಗೋಣ. ಅವರು ಹೇಳುತ್ತಾರೆ. "ಪ್ರಭುದೇವರು ನಮಗಾಗಿಯೇ ಈ ವಚನವನ್ನು ಬರೆದಿದ್ದಾರೆ. ನೋಡಿ ಅವರೇ ಹೇಳುತ್ತಿದ್ದಾರೆ. ಗುರುವಾದವನು ಹೇಗೇ ಇರಲಿ, ಏನೇ ಮಾಡಲಿ, ಅದೆಲ್ಲ ಒಳ್ಳೆಯದಕ್ಕೆ ತಾನೇ ಎಂಬ ಭಾವ ಇಲ್ಲಿ ವ್ಯಕ್ತವಾಗಿದೆ. ಇದನ್ನರಿತು ಶಿಷ್ಯನಾದವನು ಅದೃಷ್ಟವಶಾತ್ ತನಗೆ ಸಿಕ್ಕಿರುವ ಗುರುವಿನ ಬಗ್ಗೆ ಸಂದೇಹ ತಾಳದೆ, ಕ್ರೋಧಗೊಳ್ಳದೆ, ಯೋಗ್ಯತೆಯನ್ನು ಅಳತೆ ಮಾಡಲು ಹೋಗದೆ, ಪ್ರಶ್ನಿಸದೆ ಅವನು ಹೇಳಿದ್ದಕ್ಕೆಲ್ಲ " ಆಗಲಿ ಮಹಾಪ್ರಸಾದ " ಎಂದು ಗುರುವು ಕಾಲಲ್ಲಿ ತೋರಿಸಿದ್ದನ್ನು.ಶಿಷ್ಯ ತನ್ನ ತಲೆ ಮೇಲೆ ಹೊತ್ತು ಸೇವೆ ಮಾಡಬೇಕು. ಅಂಥ ಗುರುವಿನ ಬಳಿ ಅತ್ಯಂತ ವಿನೀತನಾಗಿ ವರ್ತಿಸಬೇಕು. ಏಕೆಂದರೆ ಸ್ವಾಮಿ ವಿವೇಕಾನಂದರು ಒಂದು ಕಡೆ ಹೀಗೆ ಹೇಳುತ್ತಾರೆ. "ಸಾವಿರಾರು ಶಿಷ್ಯರು ಸಿಗುತ್ತಾರೆ. ಆದರೆ ಒಬ್ಬ ಒಳ್ಳೆಯ ಗುರು ಸಿಗುವುದು ದುರ್ಲಭ " ಎಂದು. ರಾಜಕೀಯ ಪದವಿಗಳಿಗಿಂತಲೂ ಉನ್ನತವಾದುದು ಗುರು ಪದವಿ. ಶಿಷ್ಯರೇ ನೋಡಿ ಕೌಟಿಲ್ಯನ ಅರ್ಥಶಾಸ್ತ್ರ ಏನು ಹೇಳುತ್ತಿದೆ. "ಗುರುವನ್ನು ಸದಾ ಹೊಗಳುತ್ತಿರಬೇಕು" ಎಂದಲ್ಲವೆ ? ಆದ್ದರಿಂದ

ಶಿಷ್ಯನಾದವನು ಗುರುವಿಗೆ ಕೋಪ ಬರದಂತೆ, ಗುರುವಿನೊಳಗಿರುವ ಅಹಂ ಜಾಗ್ರತವಾಗದಂತೆ ಎಚ್ಚರಿಕೆ ವಹಿಸುತ್ತಾ ಸದಾ ಪ್ರಸನ್ನ ಮುಖಿಯಾಗಿರುವಂತೆ ನೋಡಿಕೊಳ್ಳುತ್ತಾ, ಅವನಿಂದ ಜ್ಞಾನವನ್ನೂ (?) ಪಡೆಯಬೇಕು. ಏಕೆಂದರೆ ಒಂದು ಸಾರಿ ಗುರುವಿನ ಕೋಪಕ್ಕೆ ತುತ್ತಾಗಿ ಶಾಪಗ್ರಸ್ತನಾದ ಶಿಷ್ಯ ಭವಿಷ್ಯದಲ್ಲಿ ಮತ್ತೆ ಎಂದಿಗೂ ಮುಂದೆ ಬರಲಾರ. ಆದ್ದರಿಂದ ಗುರುವು ಬಡಿಯಲ್ಲಿ, ಬೈಯ್ಯಲಿ, ಗದರಲಿ, ಶಪಿಸಲಿ ಅದಕ್ಕೆಲ್ಲ ಮಹಾಪ್ರಸಾದ, ಗುರುಭ್ಯೋ ನಮಃ ಎಂದು ಕೈ ಜೋಡಿಸಬೇಕು, ಪಾಠ ಪ್ರವಚನ ಕಲಿಯಬೇಕು ತಿಳಿಯಿತೆ ? " ಎಂದು ಅಭಯಹಸ್ತ ಆಡಿಸಿ ನಿಮ್ಮನ್ನು ಕಳಿಸಿಕೊಡುತ್ತಾರೆ.

ಮುಂದೆ ಅರ್ಧಜ್ಞಾನಿಗಳು, ಗಣ್ಯರೆನಿಸಿಕೊಂಡವರನ್ನು ಭೇಟಿಯಾಗೋಣ. ಅವರು ಹೇಳುತ್ತಾರೆ. " ಇದು ಶಿಷ್ಯರ ಯೋಗ್ಯತೆ-ಅರ್ಹತೆಗಳನ್ನು ಅಳೆಯುವ ವಚನ, ಕೃತಯುಗದಲ್ಲಿ ಶಿಷ್ಯರು ಬಹಳ ವಿನಯಶಾಲಿಗಳಾಗಿದ್ದರೆಂದೂ, ಬಡಿದು ಬುದ್ಧಿ ಕಲಿಸಿದರೂ ಮಹಾಪ್ರಸಾದವೆನ್ನುತ್ತಿದ್ದರೆಂದೂ, ತ್ರೇತಾಯುಗದಲ್ಲಿ ಸ್ವಲ್ಪ ಪರಿವರ್ತನೆಯಾಗಿ ಗುರುಗಳಿಗೆ ಬಡಿಯುವುದಕ್ಕೂ ಅವಕಾಶವಿರದೆ ಬಯ್ಯುವುದಕ್ಕೆ ಮಾತ್ರ ಅವಕಾಶವಿತ್ತೆಂದೂ, ದ್ವಾಪರಕ್ಕೆ ಬರುವ ವೇಳೆಗೆ ಶಿಷ್ಯರಿಗೆ ಬಯ್ಯುವುದು ತಪ್ಪಿ ಗದರಿಸಿ ನುಡಿಯುವುದು ಮಾತ್ರ ಸಾಧ್ಯವಾಗಿತ್ತೆಂದೂ. ಆದರೆ ಈ ಕಲಿಯುಗದಲ್ಲಿ ಶಿಷ್ಯರ ಉಪಟಳ ಉದ್ಧಟತನ ಜಾಸ್ತಿಯಾಗಿರುವುದರಿಂದ ಶಿಕ್ಷಿಸುವುದರ ಮೂಲಕ ಬುದ್ಧಿಕಲಿಸುವುದೂ ಕಠಿಣವಾಗಿ ತೋರಿ ಗುರುಗಳೇ ಶಿಷ್ಯರಿಗೆ ಬಗ್ಗಬೇಕಾದ, ತಲೆ ಬಾಗಿ ವಂದಿಸಬೇಕಾದ ದುಃಸ್ಥಿತಿ ಬಂದಿದೆಯೆಂದೂ ಅರ್ಥವಾಗುತ್ತದೆ. ಮೊದಲ ಯುಗಗಳಲ್ಲಿದ್ದ ಗುರುವಿನ ಸ್ಥಾನಮಾನ ಈಗ ಇಲ್ಲವಾಗಿದೆ. ಆದ್ದರಿಂದಲೇ ಜನರಿಗೆ ನೈತಿಕ, ಧಾರ್ಮಿಕ, ತಾತ್ತ್ವಿಕ, ಅಧ್ಯಾತ್ಮಿಕ ಶಿಕ್ಷಣ ಕೊಡುವುದಕ್ಕಿಂತ ಮೆಡಿಕಲ್, ಇಂಜನಿಯರಿಂಗ್, ಪಾಲಿಟೆಕ್ನಿಕ್ ಇತ್ಯಾದಿ ಕಾಲೇಜುಗಳನ್ನು ತೆರೆದು ಶಿಕ್ಷಣ ಕೊಡುವುದು ಅತ್ಯಂತ ಸುಲಭವೆಂದರಿತ ಸ್ವಾಮಿಗಳು ಶಾಲಾ-ಕಾಲೇಜುಗಳಿಗೆ ಶರಣು ಹೋಗಿರುವುದು. " ಎಂದು ತಮ್ಮಲ್ಲಿದ್ದ ಜ್ಞಾನವನ್ನು ಪ್ರದರ್ಶಿಸಿ ನಿಮ್ಮನ್ನು ಹರಸಿ ಕಳಿಸುತ್ತಾರೆ.

ಈಗ ವಚನ ಸಾಹಿತ್ಯದ ಅಭಿಮಾನಿಗಳನ್ನು ಪ್ರಶ್ನಿಸೋಣ. ಅವರೆಲ್ಲ ಹೀಗೆನ್ನುತ್ತಿದ್ದಾರೆ. "ಈ ವಚನದಲ್ಲಿ ಪ್ರಭುದೇವರು ಗುರುಶಿಷ್ಯರ ಸ್ಥಾನದಲ್ಲಿ ಯಾರನ್ನು ಇರಿಸಿ ನುಡಿಯುತ್ತಿದ್ದಾರೆ. ಎಂಬುದು ಸಂದೇಹಾಸ್ಪದ. ಆಳವಾಗಿ ಚಿಂತಿಸಿದಾಗ ಗುರು ಶಿಷ್ಯರ ಸಂಬಂಧವನ್ನು ತುಲನಾತ್ಮಕವಾಗಿ, ಸೂಕ್ಷ್ಮವಾಗಿ ನಮ್ಮ ಮುಂದೆ ಇರಿಸಿದ್ದಾರೆ ಎಂದೆನಿಸುತ್ತದೆ. ಏಕೆಂದರೆ ಒಂದು ಕಾಲದಲ್ಲಿ ಬಡಿದರೆ, ಬೈದರೆ, ಗದರಿದರೆ ಮಾತ್ರ ಶಿಷ್ಯರು ಬುದ್ಧಿ ಕಲಿಯುತ್ತಾರೆ ಎಂಬ ನಂಬಿಕೆ ಪ್ರಚಲಿತದಲ್ಲಿತ್ತು. ಈ ನಂಬಿಕೆಯನ್ನು ಹುಸಿಮಾಡಿ, ಶಿಕ್ಷಿಸದೆ ವಂದಿಸಿಯೂ ಬುದ್ಧಿ ಕಲಿಸಬಹುದು, ಕಲಿಸಲು ಬರುತ್ತದೆ ಎಂದು ವಚನದ ಕೊನೆಯಲ್ಲಿ ಹೇಳಿರುವುದನ್ನು ಗಮನಿಸಿದರೆ ನುಡಿದಂತೆ ನಡೆದು ನಡೆದಂತೆ ನುಡಿದು ತೋರಿಸಿದ ತಮ್ಮ ಪರಮಾರಾಧ್ಯ ಗುರು ಬಸವಣ್ಣನವರನ್ನು ಮನಸ್ಸಿನಲ್ಲಿಟ್ಟುಕೊಂಡು ಈ ವಚನ ಬರೆದಂತೆ ಕಾಣುತ್ತದೆ. ಹೇಳುವುದನ್ನು ನೇರವಾಗಿಯೇ ಹೇಳಬಹುದಿತ್ತಲ್ಲವೆ ? ಸುತ್ತಿ ಬಳಸಿ ಹೇಳುವ ಅಗತ್ಯವಿತ್ತೆ ? ಎಂದರೆ ಪ್ರಭುದೇವರಿಗೆ ಗೊತ್ತಿತ್ತು. ವೈಶಿಷ್ಟಪೂರ್ಣವಾದ ಅಸಾಮಾನ್ಯ ವ್ಯಕ್ತಿತ್ವದ ಗುರುಬಸವಣ್ಣನವರನ್ನು ಮತ್ತು ಅವರಿಂದ ಸೃಜಿಸಲ್ಪಟ್ಟ ವಚನ ಸಾಹಿತ್ಯವನ್ನು ಒಂದಲ್ಲ ಒಂದು ದಿನ ಪುರೋಹಿತಶಾಹಿ ಮೂಲೆಗುಂಪಾಗಿಸಿ. ಹಾಳು ಮಾಡುತ್ತದೆ ಎಂದು. ಅದಕ್ಕೆ ರಾತ್ರಿ ಮಲಗುವಾಗ ಕಳ್ಳನ ತಲೆದಿಂಬಿನ ಕೆಳಗೆ ಚಾಣಾಕ್ಷನಾದ ದಾರಿಹೋಕ ತನ್ನ ಹೊನ್ನನ್ನು ಬಚ್ಚಿಟ್ಟಂತೆ, ಯಶೋದೆಯ ಮಡಿಲಲ್ಲಿ ಶ್ರೀಕೃಷ್ಣನನ್ನು ಬೆಳೆಸಿದಂತೆ ಅವರಿಗರಿವಿಲ್ಲದಂತೆ ಬಸವಣ್ಣನವರನ್ನು ಬಚ್ಚಿಟ್ಟಿದ್ದಾರೆ; ಬೆಳೆಸಿದ್ದಾರೆ. ಬಂಧುಗಳೇ, ಈ ಮಾತುಗಳ ಬಗ್ಗೆ ತಮಗೆ ಇನ್ನು ಸಂದೇಹವೆ ? ಹಾಗಿದ್ದರೆ ಬನ್ನಿ, ಕ್ರೈಸ್ತ ಧರ್ಮ ಪ್ರಚಾರಕರೂ, ಬಸವಾಭಿಮಾನಿಗಳೂ ಆದ ಉತ್ತಂಗಿ ಚನ್ನಪ್ಪನವರು ಏನು ಹೇಳುತ್ತಾರೆಂದು ಕೇಳೋಣ.

"ನಾನೊಬ್ಬ ಕ್ರಿಸ್ತಾನುಯಾಯಿ, ನನಗೆ ಮಾನವೀಯ ದೃಷ್ಟಿಯಿಂದ ವಿರಕ್ತರೂ ಅಷ್ಟೇ ಬೇಕಾದವರು, ಪಂಚಾಚಾರ್ಯರೂ ಅಷ್ಟೇ ಬೇಕಾದವರು. ಆದರೆ ಯಥಾರ್ಥ ವಿಷಯವನ್ನು ತಿಳಿಯಬೇಕೆಂದು ಬಯಸುವವರಲ್ಲಿ ನಾನೊಬ್ಬ, ಸತ್ಯವನ್ನು ಕಟುವಾದರೂ ಎತ್ತಿ ಹೇಳಬೇಕೆಂದು ನನ್ನ ಮನೀಷೆ. ಬಸವಣ್ಣನವರನ್ನು ಪವಿತ್ರಹೃದಯದಿಂದ ಅರಿತುಕೊಳ್ಳಲು ಹವಣಿಸಿದವರಲ್ಲಿ ನಾನೊಬ್ಬ, ಆದುದರಿಂದ ಬಸವಣ್ಣನವರು ಹೇಳಿದ ಒಂದು ಮಾತು ಪುನಃ ಪುನಃ ನನ್ನ ಸ್ಮರಣೆಗೆ ಬರುತ್ತದೆ. ಅದೇನೆಂದರೆ

"ಎನಗಿಂತ ಕಿರಿಯರಿಲ್ಲ
(ಲಿಂಗ ?) ಶಿವಭಕ್ತರಿಗಿಂತ ಹಿರಿಯರಿಲ್ಲಯ್ಯ"

ಈ ಮಾತುಗಳನ್ನು ದೇವರ ಸಾಕ್ಷಿಯಾಗಿ ಬಸವಣ್ಣನವರು ಹೇಳಿದ್ದಾರೆ. ಇದರರ್ಥ "ನಾನೊಬ್ಬ ವಿನಮ್ರ ಸೇವಕ, ಭಕ್ತರ, ಪತಿತರ ಸೇವೆಯೇ ನನ್ನ ಕಾಯಕ. ಅವರ ಉದ್ಧಾರವೇ ನನ್ನ ಉದ್ಧಾರ. ಅವರ ಏಳ್ಗೆಯೇ ನನ್ನ ಏಳ್ಗೆ." ಎಂಬ ಸೇವಾಭಾವನೆ ಅಣ್ಣನವರ ಈ ವಚನದಲ್ಲಿ ಉಗ್ಗಡಿಸುತ್ತದೆ. ಆದುದರಿಂದ ಈ ಒಂದೇ ಒಂದು ವಚನವನ್ನು ಆಚಾರದಲ್ಲಿ ತಂದವನು ಮಾತ್ರ ಲಿಂಗಾಯತ. ಸಮಾಜದಲ್ಲಿ ಯಾತಕ್ಕಾಗಿ ಕೋಲಾಹಲವೆದ್ದಿದೆ ? ವಿರಕ್ತರು "ನಾವು ಸಮಾಜದಲ್ಲಿ ಹಿರಿಯರು; ಪೂಜೆಗೆ ಅರ್ಹರು" ಎನ್ನುತ್ತಾರೆ. ಇದೇ ಮಾತನ್ನು ಪಂಚಾಚಾರ್ಯರು ಉಚ್ಚರಿಸುತ್ತಿರುವರು. ಈ ಹಿರಿತನಕ್ಕಾಗಿಯೇ ತಾನೇ ಈ ಕಾದಾಟ? ಬಸವಣ್ಣನವರ ಕಿರಿತನದ ಘನಸಂಪತ್ತೆಲ್ಲಿ? ನೀವೆಲ್ಲಿ? ಈ ವಚನಾರ್ಥವನ್ನು ನಿಮ್ಮ ಜೀವನದಲ್ಲಿ ಒರೆಗೆ ಹಚ್ಚಿ ನೀವೇ ಪರೀಕ್ಷಿಸಿಕೊಂಡರೆ ನಾನು ಹೇಳಿದ ಕಳಕಳಿಯ ಮಾತಿನ ಮರ್ಮ ನಿಮಗೆ ತಾನೇ ಗೊತ್ತಾಗುತ್ತದೆ."

ಮೇಲಿನ ಮಾತುಗಳಿಗೆ ಪುಷ್ಟಿಕೊಡುವಂತಿರುವ ಪ್ರಭುದೇವರ ವಚನದ ಸಾಲು-

ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ
ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ

ಎಂಬ ಧ್ವನಿಗೆ ಕೈಜೋಡಿಸುವ ಅಪ್ಪನವರ ಮತ್ತೊಂದು ವಚನ ಹೀಗಿದೆ. ನೋಡಿರಿ, ಓದಿರಿ, ಮನನ ಮಾಡಿರಿ.

ಎನಗೆ ನಾನೇ ಹಗೆ ನೋಡಯ್ಯಾ
ಎನಗೆ ನಾನೇ ಕೆಳೆ ನೋಡಯ್ಯಾ
ನಿಮ್ಮ ಸದ್ಭಕ್ತರೊಡನೆ ವಿರೋಧ ಮಾಡಿದರೆ
ಎನ್ನ ಕೊಲುವುದಾಗಿ
ನಿಮ್ಮ ಪುರಾತರಿಗಂಜಿ ಬೆಸಗೊಂಡಡೆ ಎನ್ನ ಕಾಯ್ವುದಾಗಿ
ಅನ್ಯ ಹಗೆ ಎಲ್ಲಿ; ಅನ್ಯ ಕೆಳೆ ಎಲ್ಲಿ?
ಬಾಗಿದ ತಲೆ ಮುಗಿದ ಕೈಯಾಗಿರಿಸು ಲಿಂಗದೇವಾ!

"ಶರಣು ಶರಣಾರ್ಥಿ" ಎಂದು ತಲೆಬಾಗಿ ಕೈಮುಗಿದು ವಂದಿಸುವ ಕಲೆಯನ್ನು-ಸಂಸ್ಕೃತಿಯನ್ನು ಕಲಿಸಿ, ವಿನಯ-ವೀರತ್ವಗಳ ಸಾಕಾರ ಮೂರ್ತಿಯಾಗಿ ಅಪಾರವಾದ ಶಿಷ್ಯಕೋಟಿಯನ್ನು ಆಕರ್ಷಿಸಿದ್ದು ಯಾರು? ಮನುಕುಲೋದ್ಧಾರಿ ಬಸವಣ್ಣನವರಲ್ಲವೇ? ಮುಂದೆ ಈ ನಡೆ-ನುಡಿ ಎಂಥಾ ದೊಡ್ಡ ಕ್ರಾಂತಿಯನ್ನೇ ಮಾಡಿಬಿಟ್ಟಿತು. "ಅನುಯಾಯಿಗಳ ಸಮೂಹಕ್ಕೆ (ಸಮಾಜ) ವಂದಿಸುವುದು ನಮ್ಮ ಪ್ರತಿಷ್ಠೆಗೆ ಕುಂದು; ಅನ್ಯರಿಂದ ನಮಸ್ಕರಿಸಿಕೊಳ್ಳುವುದು ನಮ್ಮ ಜನ್ಮ ಸಿದ್ಧಹಕ್ಕು" ಎಂದು ಪ್ರಚಲಿತದಲ್ಲಿದ್ದ ರೂಢೀಶ್ವರನನ್ನು ಭೇದಿಸಿ, ಸಭೆಗೆ ವಂದಿಸಿದ ನಂತರ ಉಪದೇಶಗೈಯುವ ಶಿಷ್ಟಾಚಾರವನ್ನು ಬೋಧಿಸಿದ್ದು, ಪ್ರಾರಂಭಿಸಿದ್ದು, ಕಲಿಸಿದ್ದು ಕ್ರಾಂತಿಯೋಗಿ, ಆಧ್ಯಾತ್ಮವೀರ ಬಸವಣ್ಣನವರಲ್ಲವೇ? ಬೇರೆ

ಯಾವ ಮತ, ಪಂಥ, ಧರ್ಮಗಳಲ್ಲೂ ಇಲ್ಲದ ಈ ಆಚರಣೆ ಇಂದಿಗೂ ಲಿಂಗಾಯತ ಸಮಾಜದ ವೈಶಿಷ್ಟ್ಯವಾಗಿ ಉಳಿದು ಬಂದಿದೆ. ಈ ಕ್ರಮದಿಂದ ಜನರ ಪರಿವರ್ತನೆಗೆ ಶ್ರಮಿಸಿ ಯಶಸ್ಸು ಗಳಿಸಿದ್ದಕ್ಕೆ ಪ್ರಭುದೇವರು ಬೆರಗಾಗಿದ್ದಾರೆ. ಅಂತೆಯೇ ಅವರು ಹೀಗೆ ಸೃಷ್ಟಿಕರ್ತ ಲಿಂಗದೇವನನ್ನು ಕೇಳುತ್ತಿದ್ದಾರೆ.

ಕೌಪುಕಾಷಾಯಾಂಬರವ ಕಟ್ಟಿ ಮಂಡೆ ಬೋಳಾದರೇನಯ್ಯಾ
ಮನದಲ್ಲಿ ನಿಜವಿಲ್ಲದನ್ನಕ್ಕರ ?
ಹೊನ್ನು ಹೆಣ್ಣು ಮಣ್ಣು ತ್ರಿವಿಧವ ತೊರೆದರೇನಯ್ಯಾ
ಮನದಲ್ಲಿ ವ್ರತಿಯಾಗದನ್ನಕ್ಕರ ?
ಆನು ಜಂಗಮವೆ? ಆನು ಹಿರಿಯನಾದೆನಲ್ಲದೆ ಆನು ಜಂಗಮವೆ?
ಒಡಲಿಲ್ಲದಾತ ಬಸವಣ್ಣ, ಪ್ರಾಣವಿಲ್ಲದಾತ ಬಸವಣ್ಣ
ಬಸವಣ್ಣನಾಗಿ ಹುಟ್ಟಿಸದೆ ಎನ್ನ ಪ್ರಭುವಾಗಿ ಏಕೆ ಹುಟ್ಟಿಸಿದೆ ಗುಹೇಶ್ವರಾ!?

(ಅ.ಪ್ರ.ವ.-900)

ಧರ್ಮಪಿತರು ಹೀಗೆ ತಮ್ಮ ಸಮಕಾಲೀನರು, ಸಜ್ಜನರಿಂದಷ್ಟೆ ಅಲ್ಲ, ಎಲ್ಲಾ ಕಾಲದ ಸರ್ವಜನರಿಂದಲೂ ವಂದಿಸಲ್ಪಟ್ಟಿದ್ದಾರೆ. ಆರಾಧಿಸಲ್ಪಟ್ಟಿದ್ದಾರೆ. ಅಂತೆಯೇ ಸಮಾಜ ಸುಧಾರಕರು ಎಂದು ಹೆಸರಾಗಿದ್ದ ಬೆನಗಲ್ ರಾಮರಾಯರು ಹೇಳುತ್ತಾರೆ "ಬಸವಣ್ಣನವರನ್ನು ಮೀರಿಸಿದ, ಕೊನೆಗೆ ಅವರಿಗೆ ಸರಿಸಮಾನರಾದ ಮತ್ತೊಬ್ಬ ಮಹಾ ವಿಭೂತಿ ಇದ್ದಾರೆ ಎಂದು ಹೇಳುವ ಧೈರ್ಯ ನನಗಿಲ್ಲ"

ಕನ್ನಡದ ಖ್ಯಾತ ಸಾಹಿತಿಗಳಾದ ಅ.ನ.ಕೃ. ಹೇಳುತ್ತಾರೆ "ಬಸವಣ್ಣನವರ ಸಮಾನರು ಯಾರು ಎಂದರೆ "ಅವರೇ" ಎಂದು ಹೇಳಬೇಕಾಗುತ್ತದೆ.

ರಾಷ್ಟ್ರಕವಿ ಕುವೆಂಪು ಶ್ರೀ ಬಸವೇಶ್ವರರನ್ನು ಕುರಿತು ತಮ್ಮ ಒಂದು ಕವನದಲ್ಲಿ "ಇಂದಿಗೂ ನಾವು ನಿನ್ನೆತ್ತರಕ್ಕೆ ಏರಲಾರದೆ ಅಯ್ಯೋ ಮತದ ಉಸುಬಿಗೆ ಸಿಲುಕಿ ತತ್ತರಿಸುತ್ತಿಹೆವಯ್ಯಾ" ಎಂದು ಹಲುಬುತ್ತಿದ್ದಾರೆ.

ಇಷ್ಟೆಲ್ಲಾ ಪೀಠಿಕೆಯೊಡನೆ ಈಗ ನಾವು ಮತ್ತಿಬ್ಬರನ್ನು ಭೇಟಿಯಾಗಬೇಕಾಗಿದೆ. ಇಂದಿನ ಕಾವಿ ಜಗತ್ತಿನಲ್ಲಿ, ತಮ್ಮದೇ ಆದ ದೃಢ ನಿಲುವನ್ನು ತಳೆದಿರುವ ಇವರನ್ನು ಅರ್ಥಮಾಡಿಕೊಳ್ಳುವುದು ಕಷ್ಟಸಾಧ್ಯ. ಆದರೂ ದೃಷ್ಟಾಂತದ ಮೂಲಕ ಇವರ ಬಳಿಗೆ ಹೋಗೋಣ.

ಪ್ರೌಢಶಾಲೆಯ ದಿನಗಳು, ನಮ್ಮನ್ನು ಶೈಕ್ಷಣಿಕ ಪ್ರವಾಸಕ್ಕೆಂದು ಕರೆದುಕೊಂಡು ಹೋಗಿದ್ದರು. ದಾರಿಯಲ್ಲಿ ಶಿಲ್ಪ ಸೌಂದರ್ಯಕ್ಕೆ ಹೆಸರಾಗಿದ್ದ ಬೇಲೂರಿಗೂ ಹೋಗಿದ್ದೆವು. ಅಲ್ಲಿನ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ ಅತ್ಯಂತ ಸುಂದರವಾಗಿತ್ತು. ಅದನ್ನೆಲ್ಲ ನಮಗೆ ಸವಿಸ್ತಾರವಾಗಿ ತೋರಿಸಲೆಂದು ಒಬ್ಬ ಗೈಡ್ ನೇಮಕಗೊಂಡಿದ್ದ. ಆತನ ನಿರೂಪಣಾ ಶೈಲಿ ಅತ್ಯದ್ಭುತವಾಗಿತ್ತು. ನಮ್ಮನ್ನೆಲ್ಲ ದೇವಾಲಯದ ಒಳಾಂಗಣಕ್ಕೆ ಕರೆದೊಯ್ದು ಅಲ್ಲಿನ ಒಂದು ಕಂಭವನ್ನು ತೋರಿಸುತ್ತಾ ಹೇಳಿದ.

ಮಕ್ಕಳೇ, ಇಲ್ಲಿ ನೋಡಿ. ಇದು ಸಾಸುವೆಕಾಳಿನ ಗಣಪತಿ ಎಂದು ಬಹಳಷ್ಟು ಹೆಸರು ಪಡೆದಿದೆ. ಹಾಗೆಯೇ ಅದರ ಪಕ್ಕದಲ್ಲಿರುವ ಖಾಲಿಜಾಗವನ್ನು ನೋಡಿರಿ. ಆ ಜಾಗ ಅಲ್ಲಿ ಏಕೆ ಖಾಲಿ ಇದೆ ಎಂದು ನೀವು ಹೇಳಬಲ್ಲಿರಾ?"

ನಮಗೆ ಗೊತ್ತಿಲ್ಲವೆಂಬಂತೆ ತಲೆ ಅಲ್ಲಾಡಿಸಿದೆವು.

ಆಗ ಗೈಡ್-ಮಾರ್ಗದರ್ಶಕ ಆ ಜಾಗದ ಮಹಿಮೆಯನ್ನು ನಿರೂಪಿಸಿದ್ದು ಹೀಗೆ. "ಮಕ್ಕಳೇ, ಸಾಸುವೆ ಕಾಳಿನ ಗಣಪತಿಗಿಂತಲೂ ಚಿಕ್ಕದಾದ ಮತ್ತೊಂದನ್ನು ಕಲ್ಲಿನಲ್ಲಿ ಕಟೆದು ತೋರಿಸಬಲ್ಲ ಮುಂಬರುವ ಮತ್ತೊಬ್ಬ ಪ್ರತಿಭಾವಂತ ಶಿಲ್ಪಿಗಾಗಿ, ಆ ಪುಟ್ಟ ಸ್ಥಾನವನ್ನು ಮೀಸಲಿಟ್ಟಿದ್ದಾರೆ.

ವಿಸ್ಮಯವೆಂದರೆ ಆ ಜಾಗವನ್ನು ತುಂಬಬಲ್ಲ ಮತ್ತೊಬ್ಬ ಸಮರ್ಥ ಶಿಲ್ಪಿ ಇನ್ನು ಹುಟ್ಟಿಬಂದಿಲ್ಲ ಎಂಬುದಕ್ಕೆ ಆ ಖಾಲಿಜಾಗವೇ ಸಾಕ್ಷಿ ನುಡಿಯುತ್ತದೆ. ಇದಕ್ಕೆ ಕಾರಣ ಕರ್ತನಾದ ಜಕಣಾಚಾರಿಯನ್ನು ಮೀರಿಸಿದ ಮತ್ತೊಬ್ಬ ಮಹಾಶಿಲ್ಪಿಯನ್ನು ಇಂದಿಗೂ ಕಾಣದೆ ಇರುವುದು ಶಿಲ್ಪಜಗತ್ತಿನ ಒಂದು ರಹಸ್ಯವಾಗಿಯೇ ಉಳಿದಿದೆ.''

ಇದೇ ರೀತಿ ಬಸವ ತತ್ತ್ವಜ್ಞಾನದ ಕೀರ್ತಿ ಶಿಖರಗಳಾದ ಸಮರ್ಥ ಮಾರ್ಗದರ್ಶಕರೂ, ಅನುಭಾವಿಗಳೂ, ವಚನ ಸಾಹಿತ್ಯವನ್ನು ತಮ್ಮ ಉಸಿರಾಗಿ ಮಾಡಿಕೊಂಡು, ಸತತವಾಗಿ ವಚನಗಳ ಅಧ್ಯಯನ, ಚಿಂತನ, ಪ್ರಸರಣ, ಪ್ರಕಟಣೆಗಳಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡು ದುಡಿಯುತ್ತಿರುವ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರನ್ನು ಮತ್ತು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ ತಾಯಿಯವರನ್ನು ಸಂದರ್ಶಿಸೋಣ.

ಪ್ರವಚನ ಪಿತಾಮಹರೆಂದೇ ಹೆಸರಾಗಿದ್ದ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರು ನೆರೆದಿದ್ದ ಶ್ರೋತೃವೃಂದಕ್ಕೆ ಈ ರೀತಿಯ ಸವಾಲೆಸೆಯುತ್ತಿದ್ದರು. ''ತಮ್ಮಲ್ಲಿ ಯಾರಾದರೂ ಧರ್ಮಕರ್ತ ಬಸವಣ್ಣನವರನ್ನು ಮೀರಿಸಿದ ಮತ್ತೊಬ್ಬ ಮಹಾಪುರುಷನಿದ್ದಾನೆ ಎಂದು ಸಿದ್ಧಮಾಡಿ ತೋರಿಸಿಕೊಟ್ಟರೆ ನಾನು ಬಸವವಾದ ಬಿಟ್ಟು ಆ ಮಹಾಪುರುಷನನ್ನು ಕುರಿತು ಇನ್ನು ಮುಂದೆ ಪ್ರಚಾರ ಮಾಡುತ್ತೇನೆ.

ಆದರೆ ಬಸವ ಗುರುವಿಗೆ ಪ್ರತಿಸ್ಪರ್ಧಿಯಾದ ಮತ್ತೊಬ್ಬ ಮಹಾಪುರುಷನೊಬ್ಬನು ಇರುವುದು ಹಾಗಿರಲಿ, ಅಂಥವರನ್ನು ತೋರಿಸುವ ಧೈರ್ಯವನ್ನು ಇದುವರೆಗೂ ಯಾರೂ ಮಾಡದೆ ಇರುವುದು ಧಾರ್ಮಿಕ ಜಗತ್ತಿನ ಅದ್ಭುತ ರಹಸ್ಯವಾಗಿಯೇ ಉಳಿದಿದೆ. ಆದರೂ ಕೆಲವರು ಕಾಲ್ಪನಿಕವಾಗಿ ಅಂಥ ವ್ಯಕ್ತಿಗಳನ್ನು ಸೃಷ್ಟಿಸಲು ಹೋಗಿ, ಸಂಶೋಧನೆ ಅಧ್ಯಯನಗಳಿಗೆ ಆ ವ್ಯಕ್ತಿಗಳು ನಿಲುಕದಿದ್ದಾಗ ಸೋಲನ್ನು-ಅಪಮಾನವನ್ನು ಅನುಭವಿಸುತ್ತಿದ್ದಾರೆ, ಎದುರಿಸುತ್ತಿದ್ದಾರೆ.

ಇನ್ನು ಪ್ರಥಮ ಮಹಿಳಾ ಜಗದ್ಗುರುಗಳೆಂದು ಕೀರ್ತಿ ಪಡೆದಿರುವ ಪೂಜ್ಯ ಶ್ರೀ ಬಸವಾತ್ಮಜೆಯವರು ಹೇಳುತ್ತಾರೆ. ''ಕರ್ತನೆಂಬ ಕಲಾವಿದ ಮನುಕುಲದ ಇತಿಹಾಸವೆಂಬ ಭಿತ್ತಿಯ ಮೇಲೆ ತನ್ನ ಕಾರುಣ್ಯ ಕುಂಚದಿಂದ ಬಿಡಿಸಿದ ಅಪ್ರತಿಮ ಚಿತ್ರ ವಿಶ್ವಗುರು ಬಸವಣ್ಣನವರು. ಸರ್ವಗುಣ ಸಂಪನ್ನರಾದ, ಸಕಲಜನವಂದ್ಯರಾದ ದಯೆ, ಮಾನವೀಯತೆ, ಧೀಮಂತಿಕೆಯ ತ್ರಿಕೂಟವಾದ ಬಸವಣ್ಣನವರು ಪರವಸ್ತುವಿನ ಚಿತ್ಕಳೆಯಾಗಿ, ಶರಣರ ಮನೋಮಧ್ಯದ ಸ್ವಯಂಜ್ಯೋತಿಯಾಗಿ ಬಾಳಿ ಬೆಳಗಿದರು.''

ಧರ್ಮಬಂಧುಗಳೇ ಕೇಳಿದಿರಾ ?! ಇಂಥ ಧೀರಾವತಾರಿ ಬಸವಣ್ಣನವರಿಗೂ ಮತ್ತು ಇತರ ಗುರುಗಳು, ಸಂತರು, ಮಹಾತ್ಮರಿಗೂ ಇರುವ ವ್ಯತ್ಯಾಸವನ್ನು ಈಗ ನೋಡೋಣ. ಒಂದು ಚಿಕ್ಕ ಉದಾಹರಣೆಯನ್ನು ನಿಮ್ಮ ಮುಂದಿಡುತ್ತೇನೆ.

''ಭಾರತ ಮಹಿಳೆ'' ಎಂಬ ಕಿರುಹೊತ್ತಿಗೆಯಲ್ಲಿ ಲೇಖಕರಾದ ಪೂಜ್ಯ ಶ್ರೀ ಸ್ವಾಮಿ ವಿವೇಕಾನಂದರು ಹೀಗೆ ಅಭಿಪ್ರಾಯ ಪಡುತ್ತಾರೆ. ''ಅಂಗಹೀನರಿಗೆ, ಗೂನುಬೆನ್ನಿನವರಿಗೆ, ಪೆದ್ದರಿಗೆ, ಉನ್ಮತ್ತರಿಗೆ ಮದುವೆಯಿಲ್ಲವೆಂದು ಶಾಸ್ತ್ರಸಾರುವುದು'' ಸರಿ, ಒಳ್ಳೆಯದು. ನಶ್ವರವಾದ ಲೌಕಿಕ ಜೀವನಕ್ಕೆ ಇವರು ಅರ್ಹರಲ್ಲವೆಂದ ಮೇಲೆ ಇನ್ನು ಅತ್ಯಮೂಲ್ಯವಾದ ಆಧ್ಯಾತ್ಮ ಜೀವನಕ್ಕೆ ಇಂಥವರಿಗೆ ಪ್ರವೇಶ ಉಂಟೆ ? ಎಂದು ಕೇಳಿದರೆ ಇದಕ್ಕೆ ಮಹಾಮಾನವತಾವಾದಿ ಬಸವಣ್ಣನವರು ಏನು ಹೇಳುತ್ತಿದ್ದಾರೆ. ಎಂದು ಕೇಳೋಣ. ಬನ್ನಿ.

ಹಾಲ ಕಂದಲು, ತುಪ್ಪದ ಮಡಕೆಯ ಬೋಡು ಮುಕ್ಕಿನಬೇಡ

ಹಾಲು ಸಿಹಿ, ತುಪ್ಪ ಕಮ್ಮನೆ ; ಲಿಂಗಕ್ಕೆ ಬೋನ ।
ಲಿಂಗದೇವನ ಶರಣರ ಅಂಗಹೀನರೆಂದರೆ ನಾಯಕ ನರಕ - ಬ.ವ.ದೀ. 417

ಹೀಗೆ ಶಾಸ್ತ್ರಗಳಲ್ಲಿ ಹೇಳಿರುವುದನ್ನು ಖಂಡಿಸುತ್ತಿದ್ದಾರೆ. ಅಷ್ಟೇ ಅಲ್ಲ ಪ್ರತಿಯೊಬ್ಬರು ಅಂಗವಿಕಲರಾದರೆ ಮಾತ್ರ ಅಧ್ಯಾತ್ಮ ಜೀವನಕ್ಕೆ, ದೇವರಾಜ್ಯಕ್ಕೆ ಪ್ರವೇಶ ಸಿಗುತ್ತದೆ ಎಂದು ಸಾರುತ್ತಿದ್ದಾರೆ. ನಾನು ಹೀಗೆ ಬರೆದಾಕ್ಷಣ ಈ ಜನ ಎಲ್ಲಾದರೂ ಹೆದರಿಕೊಂಡಾರು. ಏಕೆಂದರೆ ಅವರು ಕೇಳಬಹುದು ''ಏಕಲವ್ಯನಂತೆ ನಾವೂ ಅಂಗವಿಕಲರಾಗಬೇಕೆ ?'' ಎಂದು. ಅಂಥವರಿಗೆ ನಾನು ಹೇಳುತ್ತೇನೆ. ಅಂಗವಿಕಲತೆಗಿಂತಲೂ, ಅಂಗಹೀನತೆಗಿಂತಲೂ-ಮನೋವಿಕಲತೆ, ಮತಿಹೀನತೆ ಹೆಚ್ಚು ಅಪಾಯಕಾರಿ ಎಂದು. ಆದ್ದರಿಂದ ಅಪ್ಪನವರು ಬೋಧಿಸುವುದು ಏಕಲವ್ಯನ ಅಂಗವಿಕಲತೆಯನ್ನಲ್ಲ. ಹಾಗಾದರೆ ಏನು ಹೇಳುತ್ತಾರೆ ? ನಿಮ್ಮ ಜ್ಞಾನೇಂದ್ರಿಯಗಳು, ಕರ್ಮೇಂದ್ರಿಯಗಳು ತಮ್ಮ ಕುಚೇಷ್ಟೆಯನ್ನು ನಿಲ್ಲಿಸಿ, ನಿಮ್ಮನ್ನು ದೇವನೆಡೆಗೆ ಒಯ್ಯಲು, ಮುಕ್ತಿ ಸಿಗಲು ಹೀಗಾಗಬೇಕು. ಎಂದು. ತಮ್ಮ ಒಂದು ಸುಪ್ರಸಿದ್ಧ ವಚನದಲ್ಲಿ ಆದೇಶಿಸುತ್ತಾರೆ.-

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ
ನಿಮ್ಮ ಶರಣರ ಪಾದವಲ್ಲದೆ
ಅನ್ಯ ವಿಷಯಕ್ಕೆಳೆಸದಂತೆ ಇರಿಸು ಲಿಂಗದೇವಾ ! -ಬ.ವ.ದೀ 57

ಸಮಾಜದ ಒಂದು ಭಾಗವೇ ಆಗಿದ್ದ ದೀನರು ದುಃಖಿತರು ದುರ್ಬಲರಿಗೆ ಆತ್ಮಬಲ ತುಂಬಿ ಬದುಕಲು ಕಲಿಸಿದ್ದಲ್ಲದೆ ಮತ್ತೊಂದು ಕಡೆ ಬಲಿಷ್ಠರು, ಉನ್ಮತ್ತರೆನಿಸಿಕೊಂಡಿದ್ದವರನ್ನು ವಿವಿಧೋಪಾಯಗಳಿಂದ ಸನ್ಮಾರ್ಗಕ್ಕೆ ತಂದು ಪರಿವರ್ತಿಸುತ್ತಿದ್ದ ಅಪ್ಪನವರ ಸಾಧನೆ-ಸಿದ್ಧಿ-ಸಂದೇಶಗಳನ್ನು ಪ್ರತ್ಯಕ್ಷ ಕಂಡಿದ್ದ ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು ಹೀಗೆ ಕೊಂಡಾಡುತ್ತಿದ್ದಾರೆ.

ಕಾಲಿಲ್ಲದವಂಗೆ ಕಾಲಕೊಟ್ಟೆ ಬಸವಾ ;
ಕಣ್ಣಿಲ್ಲದವರಿಗೆ ಕಣ್ಣಕೊಟ್ಟೆ ಬಸವಾ;
ಎನ್ನ ಕಣ್ಣು ಕಾಲಿಂಗೆ ನೀನೆಯಯ್ಯಾ ಬಸವಾ ;
ಕಪಿಲಸಿದ್ಧ ಮಲ್ಲಿನಾಥಯ್ಯ ॥35॥
ಇಂತು ಗುರು-ಶಿಷ್ಯ ಸಂಬಂಧವನು ರಚಿಸೀಗ
ನಿಶ್ಚಿಂತನಾದೆನ್ನ ಬಸವ ತಂದೆ
ಅಂತಕಾಂತಕನೆಂಬ ಅನ್ಯೋನ್ಯಕಾನೀಗ
ಪಂಚಬ್ರಹ್ಮನು ಆದೆ ಯೋಗಿನಾಥ ॥34॥

ಇಂಥ ಮಹಾಗುರುವನ್ನು ಪಡೆದ ಕಲಿಯುಗ ನಿಜಕ್ಕೂ ಧನ್ಯ ; ಅನುಯಾಯಿಗಳು ಧನ್ಯರು ; ವಚನ ಸಾಹಿತ್ಯದಲ್ಲಿ ತಮ್ಮ ಪಾಲಿಗೆ ದೇವರು, ಗುರು, ತಾಯಿ, ತಂದೆ, ಬಂಧು ಬಳಗ, ಭಾಗ್ಯ, ತವರು ಎಲ್ಲವೂ ಆಗಿದ್ದ ಧರ್ಮಪಿತರನ್ನು ತಮ್ಮ ಪ್ರಾಣವಾಗಿ ಮಾಡಿಕೊಂಡು ಕೊಂಡಾಡಿದ ವಚನಗಳು ಹೇರಳವಾಗಿ ಸಿಗುತ್ತವೆ. ಇಷ್ಟೊಂದು ಖಚಿತವಾದ, ಸತ್ಯವಾದ, ನಂಬಲರ್ಹವಾದ ಜೀವಂತ ದಾಖಲೆಗಳಿರುವಾಗ ಅದು ಯಾರು ಬಸವಣ್ಣನವರನ್ನು ''ಗುರುವಲ್ಲ ; ಭಕ್ತ'' ಎಂದು ನಮಗೆ ಸುಳ್ಳು ಹೇಳುತ್ತಿರುವುದು. ಇನ್ನು ಮುಂದೆ ಅವರ ಮಾತನ್ನು ನಾವು ನಂಬುವುದಿಲ್ಲ ; ಅಷ್ಟೇ ಅಲ್ಲ ಅಂಥವರಿಗೆ ಹೇಳುತ್ತೇವೆ.

''ನಮ್ಮ ಧರ್ಮಗುರು ಬಸವಣ್ಣನವರು ನಿಮ್ಮಿಂದ ದೊಡ್ಡವರಾಗಬೇಕಿಲ್ಲ, ಬೆಳೆಯಬೇಕಾಗಿಲ್ಲ,

ಬೆಳಗಬೇಕಾಗಿಲ್ಲ. ಏಕೆಂದರೆ ಸದಾ ಸತ್ಯಾನ್ವೇಷಕರಾದ ಜನ ಅಪ್ಪ ಬಸವಣ್ಣನವರಂಥ ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವದ ಗುರು ಸಿಕ್ಕರೆ ಬಿಡುವವರಲ್ಲ. ಈಗಾಗಲೇ ಈ ಪ್ರಕ್ರಿಯೆ ಪ್ರಾರಂಭವಾಗಿದೆ. ಆದ್ದರಿಂದ ನಿಮ್ಮ ಮಾತನ್ನು ಕೇಳಲು ನಾವು ಸಿದ್ದರಿಲ್ಲ.

ಓ! ಪುರೋಹಿತಶಾಹಿ ವರ್ಗವೇ ಒಬ್ಬ ಏಸುವನ್ನು, ಒಬ್ಬ ಮಹಮದ್ ಪೈಗಂಬರನನ್ನು, ಒಬ್ಬ ಬುದ್ಧನನ್ನು, ಒಬ್ಬ ಅಂಬೇಡ್ಕರರನ್ನು ಎದುರಿಸಲಾರದ ನೀವು ಇವರೆಲ್ಲರನ್ನು ತಮ್ಮ ತೋಳಿನಲ್ಲಿ ಅವುಚಿಕೊಂಡ ಬಸವಣ್ಣನವರು ನಿಮ್ಮೆದುರಿಗೆ (ವಚನ ಸಾಹಿತ್ಯ ರೂಪದಲ್ಲಿ) ಬಂದು ನಿಂತಾಗ ಏನು ಮಾಡುವಿರಿ? ತತ್ತರಿಸುತ್ತೀರಲ್ಲವೆ? ನಾನೀಗ ಪ್ರಭುದೇವರೊಂದಿಗೆ "ಆಗಲಿ ಮಹಾಪ್ರಸಾದ" ಎಂದು ತಲೆದೂಗುತ್ತೇನೆ. ಏಕೆ ಗೊತ್ತೆ? ನಿಮ್ಮಂಥವರ ಸಂಖ್ಯೆ ಹೆಚ್ಚಾದಷ್ಟು ನಮಗೆ ನಮ್ಮ ಬಸವಣ್ಣನವರು ಹೆಚ್ಚು ಹೆಚ್ಚು ಅರ್ಥವಾಗುತ್ತಾ ಹೋಗುತ್ತಾರೆ ಅದಕ್ಕೆ.

ಓ! ಮೂಢ ಮತ್ತು ಅಜ್ಞಾನಿ ಲಿಂಗಾಯತರೇ "ನಾನು ದೇವಾಂಶ ಸಂಭೂತ, ನಾನೇ ದೇವರು, ಪವಾಡ ಪುರುಷ, ನನ್ನನ್ನು ಆರಾಧಿಸಿರಿ, ಪೂಜಿಸಿರಿ ಪುಣ್ಯ ಬರುತ್ತದೆ. ನಿಮ್ಮ ಕಷ್ಟಗಳು ನಿವಾರಣೆಯಾಗುತ್ತವೆ." ಎಂದು ತಮ್ಮನ್ನು ತಾವೇ ಗಗನಕ್ಕೇರಿಸಿಕೊಂಡಿರುವ ಗುರುಗಳು ನಿಮಗೆ ಬೇಕೆ? ಹಾಗಿದ್ದರೆ ಅತ್ತ ಹೋಗಿರಿ. "ನಾನು" ಎಂಬ ಅಹಂತತ್ವದ ಬ್ರಹ್ಮರಾಕ್ಷಸನ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸಿದ ಗುರು ನಿಮಗೆ ಬೇಕೆ? ಹಾಗಿದ್ದರೆ ಇತ್ತ ಬನ್ನಿರಿ. ಇಲ್ಲಿ ನಮ್ಮೆಲ್ಲರ ಸಕಲ ಸೌಭಾಗ್ಯ ನಿಧಿ ಜಗಜಟ್ಟಿ ಬಸವೇಶ್ವರರು ಇದ್ದಾರೆ.

ಧರ್ಮ ಬಂಧುಗಳೇ, ಅದೇಕೆ ಅಷ್ಟು ದೂರ ನಿಂತಿದ್ದೀರಿ? ಹತ್ತಿರಕ್ಕೆ ಬನ್ನಿ. ಅದೋ ನೋಡಿ ಚಿಂತಿಸಿದಷ್ಟು ಅಪ್ಪ ಬಸವಣ್ಣನವರ ವ್ಯಕ್ತಿತ್ವ ಎಷ್ಟು ಎತ್ತರಕ್ಕೆ ಬೆಳೆದು ನಿಂತಿದೆ. ಅಪ್ಪನವರ ವಿರಾಟರೂಪ ಭೂಮಿ-ಆಕಾಶವನ್ನು ವ್ಯಾಪಿಸಿ ನಿಂತು ಬಿಟ್ಟಿದೆ. ಬನ್ನಿ, ಧರ್ಮಪಿತರ ಪರುಷಪಾದದ ಬಳಿ ಮಕ್ಕಳಂತೆ ಕುಣಿದು ಕುಪ್ಪಳಿಸೋಣ. ಏಕೆ? ಸುಮ್ಮನೆ ನಿಂತಿದ್ದೀರಿ! ನಿಮಗೆ ಕುಣಿಯಲು ಬರುವುದಿಲ್ಲವೆ? ನಾಚಿಕೆಯೆ? ಅಥವಾ ಸಂಕೋಚವೆ? ಹಾಗಿದ್ದರೆ ಇಲ್ಲಿ ನೋಡಿ.

ತಮ್ಮತನವನ್ನು ಬಿಟ್ಟು ಕೊಟ್ಟು ಬಸವತನವನ್ನು ತುಂಬಿಕೊಂಡಿರುವ ಜನಪದ ಕವಿಗಳು ತಾವು ಕುಣಿಯುತ್ತಾರೆ. ನಮ್ಮನ್ನು ಕುಣಿಸುತ್ತಾರೆ. ಬನ್ನಿ ಅವರೊಂದಿಗೆ ನಾವೂ ಹೆಜ್ಜೆ ಹಾಕೋಣ.

ಭಾಪುರೆ ಬಸವಣ್ಣ ಭಾಪು ಶಿವಮತ ಮಣಿಯೆ
ಭಾಪು ನಿನ್ಹೆಸರು ಅಮರಾತು । ಜಗದೊಳಗೆ
ಭಾಪು ನಿನಗಾರು ಸರಿಯುಂಟೆ ?(ಕ.ಬ. 100)

ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸಿರಿ ಶರಣ ಬಸವಯ್ಯ । ನಮಗಿನ್ನು
ಹರಿಸಿ ಹುಲುಸು ಹುಲ್ಬುಲ್ಲಿಗೋ ॥ (ಕ.ಬ. 55)

★

ಬಸವ ಲಿಂಗೈಕ್ಯ ದಿನಾಚರಣೆ

ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣಶುದ್ಧ ಪಂಚಮಿ ದಿ.30-7-1196ರಂದು ಅವರ 806ನೆಯ ಲಿಂಗೈಕ್ಯ ಸಂಸ್ಮರಣಾ ದಿನವು ಬುಧವಾರ ದಿ.25-7-2001ರಂದು ಒದಗಿ ಬಂದಿದೆ. ಆದ್ದರಿಂದ ಎಲ್ಲಾ ರಾಷ್ಟ್ರೀಯ ಬಸವ ದಳಗಳವರು ಮತ್ತು ಶರಣ ಬಂಧುಗಳು ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ದಿ. 25-7-2001ರಂದು ಬಸವ ಪಂಚಮಿಯನ್ನು, ದಿ.26-7-2001ರಂದು ನೀಲಮ್ಮ (ಸಂಸ್ಮರಣೆ) ಷಷ್ಠಿಯನ್ನು ಆಚರಣೆ ಮಾಡಬೇಕೆಂದು ಸೂಚಿಸಲಾಗಿದೆ.

-ಬಸವ ಧರ್ಮ ಪೀಠ

ಭಾರತೀಯರನ್ನು ಬೌದ್ಧಿಕ ದಾಸ್ಯಕ್ಕೆ ತಳ್ಳುತ್ತಿರುವ ಮೂಢನಂಬಿಕೆಗಳು

ಭಾರತ ದೇಶದ ಅದೃಷ್ಟವನ್ನು ಅದೆಷ್ಟು ಕೊಂಡಾಡಿದರೂ ಸಾಲದು. ಬ್ರಾಹ್ಮಣ ಧರ್ಮ-ಬುಡಕಟ್ಟು ಧರ್ಮ (tribal religion)ಗಳ ನಡುವೆ, ಗಂಡ ಹೆಂಡಿರ ನಡುವೆ ಕೂಸು ಬಡವಾದಂತೆ ಈ ಉಭಯತರ ಮಧ್ಯೆ ನೈತಿಕತೆ, ಮಾನವೀಯತೆ, ದಯೆ, ಅಹಿಂಸೆ ಮುಂತಾದ ಮೌಲ್ಯಗಳು ಸಾಯುತ್ತಲಿವೆ. ಎಲ್ಲ ರಾಷ್ಟ್ರಗಳು, ಜನಾಂಗಗಳು ಮುಂದೆ ಹೆಜ್ಜೆ ಹಾಕುತ್ತಿದ್ದರೆ ಈ ದೇಶದಲ್ಲಿ ನಂಬಿಕೆಗಳು ಶಿಲಾಯುಗದತ್ತ ತೆರಳುವಂತೆ ತೋರುತ್ತವೆ. ಜ್ಯೋತಿಷಿಗಳು, ಪುರೋಹಿತರ ಬಾಳನ್ನು ಉಜ್ವಲಗೊಳಿಸಲು ಅವೈಜ್ಞಾನಿಕವಾದ ಜ್ಯೋತಿಷ್ಯ ಶಾಸ್ತ್ರವನ್ನು ವಿಶ್ವವಿದ್ಯಾಲಯಗಳ ಪಠ್ಯ ಕ್ರಮದಲ್ಲಿ ಅಳವಡಿಸಲು ಮುರಳಿ ಮನೋಹರ ಜೋ(ಶಿ)ಷಿಯವರು ಯತ್ನಿಸಿದರೆ ಎಸ್.ಎಂ. ಕೃಷ್ಣ ಅವರ ಸರಕಾರ ಕೋಣ, ಕುರಿ, ಕೋಳಿ ಕಡಿಯುವಲ್ಲಿ ಆಸ್ಥೆ ವಹಿಸುತ್ತಿದೆ. ಬ್ರಾಹ್ಮಣ ಧರ್ಮದ (priestly religion) ಆದರ್ಶದ ಪುನರುತ್ಥಾನ ಕೇಂದ್ರ ಸರ್ಕಾರದ್ದಾದರೆ ಬುಡಕಟ್ಟು ಧರ್ಮದ (tribal religions)ಪುನರ್ ಪ್ರತಿಷ್ಠಾಪನೆ ಎಸ್.ಎಂ. ಕೃಷ್ಣ ಅವರದು ಇದ್ದಂತೆ ತೋರುತ್ತದೆ.

ಕಳೆದ ತಿಂಗಳಲ್ಲಿ ಮೈಸೂರು ಜಿಲ್ಲೆಯ ಕೊಳ್ಳೆಗಾಲ ತಾಲ್ಲೋಕಿನ ಮತ್ತೀಪುರದಿಂದ ಶರಣ. ಮಲ್ಲಿಕಾರ್ಜುನಪ್ಪನವರು ಫೋನ್ ಮಾಡಿ ಅವರ ಊರಲ್ಲಿ ಆಗಲೇ 50-60 ವರ್ಷಗಳ ಹಿಂದೆ ನಿಂತು ಹೋದ ಮಾರಿ ಹಬ್ಬವನ್ನು ಈ ಸಲ ಶುರುಮಾಡಲು ಬಯಸಿ ಕೆಲವರು ಪ್ರಾಣಿ ವಧೆಗೆ ಸಿದ್ಧರಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು. ಪ್ರಾಣಿ ಬಲಿ ನಿಷೇಧ ಕಾನೂನಿನ ಅನ್ವಯ ದೂರುಕೊಟ್ಟರು. ಆಶ್ಚರ್ಯ ಎಂಬಂತೆ ಪೋಲೀಸ್ ಅಧಿಕಾರಿಗಳು ಅಂತೂ ಕಾನೂನಿನ ಪ್ರಕಾರ ನಡೆಯಲು ನಿರ್ಧರಿಸಿದರು. ಬಲಿ ಪ್ರಿಯರು ಬಗೆ ಬಗೆಯ ಬೆದರಿಕೆ ಹಾಕಿದ್ದರಿಂದ ಶಿಕ್ಷಕ ಮಲ್ಲಿಕಾರ್ಜುನಪ್ಪನವರಿಗೆ ರಕ್ಷಣೆಯನ್ನು ಕೊಟ್ಟು ಅಂತೂ ಪ್ರಾಣಿವಧೆ ತಪ್ಪಿಸಿದರು. ಆ ಪೋಲೀಸ್ ಅಧಿಕಾರಿಗಳಿಗೆ ಪುಣ್ಯ ಬರಲಿ. ಆ ಸಮಯದಲ್ಲಿ ಶಿಕ್ಷಣ ಸಚಿವ ವಿಶ್ವನಾಥ ಅವರು ಪ್ರಾಣಿಬಲಿ ಕೊಟ್ಟು ನೈವೇದ್ಯವನ್ನು ಉಂಡು ಬಂದು, ಪತ್ರಿಕೆ ತುಂಬ ಸುದ್ದಿಯಾಗಿದ್ದರು. ಹೀಗಾಗಿ ಪೋಲೀಸ್ ಅಧಿಕಾರಿಗಳು ಕಾನೂನು ಪಾಲಿಸುವರೋ ಇಲ್ಲವೋ ಎಂಬ ಜನರ ಆತಂಕಕ್ಕೆ ವಿರುದ್ಧವಾಗಿ ಮತ್ತೀಪುರದಲ್ಲಿ ಕಾನೂನು ಪಾಲನೆಯಾಯಿತು.

ಇಂದು ಒಂದು ಫೋನ್ ಬಂದಿತು. ಬೆಂಗಳೂರಿಗೆ 30 ಕಿಲೋಮೀಟರ್ ದೂರದ ಒಂದು ಹಳ್ಳಿ, ಅಲ್ಲಿ ಪ್ರಾಣಿಬಲಿ 60 ವರ್ಷಗಳ ಹಿಂದೆ ನಿಂತು ಹೋಗಿತ್ತು. ಬ್ರಿಟಿಷರ ಕಾಲದಲ್ಲಿ ನಿಂತು ಹೋದುದನ್ನು ಈ ತಿಂಗಳು ಆರಂಭಿಸಲು ನಿರ್ಧರಿಸಿ ಎಂ.ಎಲ್.ಎ ನೇತೃತ್ವದಲ್ಲಿ ದೇವಿ ಗುಡಿಯನ್ನು ಪುನರ್ ನಿರ್ಮಾಣ ಮಾಡಿದ್ದಲ್ಲದೆ ಸಾವಿರಾರು ಕೋಣ, ಕುರಿ,ಕೋಳಿ ಬಲಿಕೊಡಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರಂತೆ. ಪೋಲೀಸರಿಗೆ ದೂರು ಕೊಟ್ಟಿರಾ ಎಂದು ಕೇಳಿದ್ದಕ್ಕೆ, ಅವರು ಎಂ.ಎಲ್.ಎ ಯವರನ್ನೇ ಬೆಂಬಲಿಸುತ್ತಿದ್ದು ಕಾನೂನು ಪಾಲಿಸಲು ಸಿದ್ಧರಿಲ್ಲ ಎಂದು ಫೋನ್ ಮಾಡಿದವರು ಹೇಳಿದರು. ಭಾರತ ದೇಶಕ್ಕೆ ಎರಡೂ ದಿಕ್ಕಿನಿಂದ ಗರ ಬಡಿಯುತ್ತಿದೆ. ಒಂದು ಕಡೆ ಕುತಂತ್ರಿಗಳು, ಇನ್ನೊಂದು ಕಡೆ ಕ್ರೂರಿಗಳು. ಇನ್ನು ಇಲ್ಲಿ ಧರ್ಮ ಉಳಿಯುವುದಾದರೂ ಹೇಗೆ? ಮಾನವೀಯತೆ ಜೀವ ಹಿಡಿದು ಬದುಕುವುದಾದರೂ ಹೇಗೆ?

ಸುಧಾರಣಾತ್ಮಕ ಚಳುವಳಿಗಳು ಈ ದೇಶದಲ್ಲಿ ಬುದ್ಧ, ಬಸವಣ್ಣನವರ ನಂತರ ಬ್ರಿಟಿಷರ ಕಾಲದಲ್ಲಿ ತೀವ್ರಗೊಂಡವು. ಜಾತ್ಯತೀತತೆ, ಮೂಢನಂಬಿಕೆಯ ವಿರೋಧ, ಏಕದೇವೋಪಾಸನೆ ವೈಚಾರಿಕತೆ, ಸಾಮಾಜಿಕ ಅನಿಷ್ಟಗಳಾದ ಅಸ್ಪೃಶ್ಯತೆ, ಸತಿ ಸಹಗಮನ ನಿಷೇಧ, ದೇವರ ಹೆಸರಲ್ಲಿ ಪ್ರಾಣಿ ಬಲಿ ಇವುಗಳ ನಿಷೇಧ ಮುಂತಾದವು ಒಂದು ಅಲೆಯಂತೆ ಎದ್ದವು. ಸಮಗ್ರ ಬದಲಾವಣೆ ಆಧುನಿಕ

ವಿಜ್ಞಾನದ ಹಿನ್ನೆಲೆಯಲ್ಲಿ ಕಾಲಿಡುವಂತೆ ತೋರಿತ್ತು. ಆದರೀಗ ಪುನಃ ಹಳೆಯ ಮತ್ತು ಅನಿಷ್ಟ ನಂಬಿಕೆಗಳು ಪುನಃ ಜಾರಿಗೆ ಬರುತ್ತಿವೆ. ಅದರಲ್ಲಿ ಪ್ರಾಣ ಬಲಿಯೂ ಒಂದು.

ಕೆಲವು ಜಾತಿಗಳವರಿಗೆ ಮೇಲು ಜಾತಿಯವರ ಬಗ್ಗೆ ದ್ವೇಷ ಮತ್ತು ರೋಷ. ಈ ರಾಜಕೀಯ ದ್ವೇಷ ವಿಚಿತ್ರ ರೀತಿಯ ಚಿಂತನಶೈಲಿಯನ್ನು ಹುಟ್ಟು ಹಾಕುತ್ತಿದೆ. ಹೇಗೆಂದರೆ, ಲಿಂಗಾಯತರು ಸಸ್ಯಾಹಾರಿಗಳು. ಅವರ ಮೇಲೆ ದ್ವೇಷಕ್ಕೆ ಮಾಂಸಾಹಾರ ಮಾಡುವುದು ತಮ್ಮ ''ಜಾತಿ ಧರ್ಮ''; ಲಿಂಗಾಯತರು, ಜೈನರು, ಪ್ರಾಣಬಲಿ ಮಾಡಬಾರದು ಎನ್ನುವರಲ್ಲ ; ಅವರಿಗಿಂತಲೂ ತಾವು ರಾಜಕೀಯವಾಗಿ ಶಕ್ತಿಶಾಲಿಗಳು ಎಂದು ಪ್ರದರ್ಶಿಸಲು ಉದ್ದೇಶಪೂರ್ವಕವಾಗಿ ಮಾರಿ ಜಾತ್ರೆ ನಡೆಸಿ ಪ್ರಾಣಬಲಿ ಕೊಡುವರು. ಲಿಂಗಾಯತರನ್ನು ರಾಜಕೀಯವಾಗಿ ದುರ್ಬಲಗೊಳಿಸಲು ಆ ಮುಗ್ಧ ಪ್ರಾಣಿಗಳನ್ನು ಏಕೆ ಬಲಿ ಕೊಡಬೇಕು ? ಇದು ಮಾನವೀಯತೆಯ ಪ್ರಶ್ನೆ. ''ನೀನು ಬದುಕು, ಇತರ ಜೀವಿಗಳನ್ನು ಬದುಕಗೊಡು'' ಎಂಬ ಉದಾತ್ತ ಆದರ್ಶ ದೃಷ್ಟಿಯಿಂದ ಇಂದು ಜೀವ ಹಿಂಸೆಯನ್ನು ತಡೆಗಟ್ಟುವುದು ಆಗತ್ಯವಿದೆ. ಕೆಲವು ಜಾತಿಗಳವರು ಮಾನವೀಯತೆಯನ್ನು ಬಲವಾಗಿ ಹತ್ತಿಕ್ಕಿ ಪ್ರಾಣಿವಧೆ ತಮ್ಮ ಜಾತಿಧರ್ಮ ಎಂದು ಹಠ ಸಾಧಿಸುವರು. ಇಂಥ ದೇಶವನ್ನು ಯಾರು ಕಾಪಾಡಬೇಕೋ ತಿಳಿಯುತ್ತಿಲ್ಲ.

ಜ್ಯೋತಿಷ್ಯ ಅಧ್ಯಯನ

ಇನ್ನು ಪುರೋಹಿತಶಾಹಿಯ ಲೀಲೆ ಜ್ಯೋತಿಷ್ಯದ ಮೂಲಕ ಆರಂಭವಾಗಿದೆ. ಮೂಢನಂಬಿಕೆ ಹೋಗುತ್ತಿವೆ ಎಂದು ಎಲ್ಲರೂ ನಿರೀಕ್ಷಿಸುವಾಗಲೇ ಅವು ಇನ್ನಷ್ಟು ಬಲಗೊಂಡು ಜ್ಯೋತಿಷ್ಯ, ವಾಸ್ತುವಿನ ಮೂಲಕ ವೈಜ್ಞಾನಿಕ ಕಬ್ಬಿಣದ ಕವಚವನ್ನು ತೊಟ್ಟು ಪುನಃ ಪ್ರವೇಶಿಸುತ್ತಿವೆ. ಕುವೆಂಪು ವಿಶ್ವವಿದ್ಯಾಲಯದಲ್ಲಿ ಜ್ಯೋತಿಷ್ಯ ಶಾಸ್ತ್ರವನ್ನು ಅಧ್ಯಯನಕ್ಕೆ ಆಳವಡಿಸಬೇಕೆಂದು ಯು.ಜಿ.ಸಿ ಯಿಂದ ಸೂಚನೆ ಬಂದಿದ್ದು ಕುವೆಂಪು ವಿಶ್ವವಿದ್ಯಾಲಯದ ಉಪಕುಲಪತಿಗಳು ಅಳವಡಿಸಲು ಒಪ್ಪಿಕೊಂಡಿದ್ದಾರಂತೆ. ಇನ್ನೊಂದು ಪರಮಾಶ್ಚರ್ಯ ಸಂಗತಿ ಎಂದರೆ ಇದೇ ವ್ಯಕ್ತಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಇಂದಿನ ಅಧ್ಯಕ್ಷರೂ ಆಗಿರುವುದು.

ನಮ್ಮ ದೇಶದಲ್ಲಿ ವ್ಯಕ್ತಿ ಓದುವ ವಿಜ್ಞಾನ, ಬೋಧಿಸುವ ವಿಜ್ಞಾನಕ್ಕೂ ಅವರು ಆಚರಿಸುವ ಅಜ್ಞಾನಾತ್ಮಕ ಆಚರಣೆಗೂ ಪರಸ್ಪರ ಸಂಬಂಧವೇ ಇರದು. ಬಸವ ತತ್ತ್ವವನ್ನು ತಿಳಿದ ಓರ್ವ ಅವಿದ್ಯಾವಂತ ಎಷ್ಟೋ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿರುತ್ತಾನೆ ಎಂದರೆ ಉತ್ಪ್ರೇಕ್ಷೆಯಲ್ಲ.

ಜ್ಯೋತಿಷ್ಯವೂ ಒಂದು ವಿಜ್ಞಾನವೆ ಎಂದು ಸಮರ್ಥಿಸಿಕೊಳ್ಳುವವರಿಗೇನೂ ಕೊರತೆ ಇಲ್ಲ. ನಮ್ಮ ದೇಶದ ಪುರೋಹಿತ ವರ್ಗಕ್ಕೆ ವೈಜ್ಞಾನಿಕ ವಿವರಣೆ ನೀಡಿ ಮೂಢನಂಬಿಕೆಗಳನ್ನು ಸಮರ್ಥಿಸಿಕೊಳ್ಳುವ ಅದ್ಭುತವಾದ ಕಲೆ ಅಳವಟ್ಟಿದೆ. ಜ್ಯೋತಿರ್ವಿಜ್ಞಾನ ಬೇರೆ, ಜ್ಯೋತಿಷ್ಯ ಶಾಸ್ತ್ರ ಬೇರೆ. ಜ್ಯೋತಿರ್ವಿಜ್ಞಾನವು ವೈಜ್ಞಾನಿಕವಾಗಿ ಗ್ರಹಗಳ ಚಲನೆ, ಗ್ರಹಣ ಸಂಭವಿಸುವುದು ಮುಂತಾದ ವಿಶ್ಲೇಷಣೆ ಮಾಡುತ್ತದೆ. ಜ್ಯೋತಿಷ್ಯ ಶಾಸ್ತ್ರವು ಕಾಲ್ಪನಿಕವಾಗಿ ಕಥೆಗಳನ್ನು ಕಟ್ಟಿ ಭಯವನ್ನು ಬೆಳೆಸುತ್ತದೆ. ವಾರದಲ್ಲಿ ಏಳು ದಿನಗಳಿವೆ. ಇವುಗಳಿಗೆ ಸೂರ್ಯವಾರ, ಸೋಮವಾರ ಇತ್ಯಾದಿ ಹೆಸರಿಡಲಾಗಿದೆ. ಮಂಗಳವಾರ ಮಂಗಳ ಕೆಲಸ ಮಾಡಬಾರದು. ಶನಿವಾರ ಶುಭಕೆಲಸ ಮಾಡಬಾರದು ಎಂಬುದು ಭ್ರಾಂತಿಯಲ್ಲವೆ ? ಇವೆಲ್ಲ ಮನುಷ್ಯನು ಇಟ್ಟ ಹೆಸರು. ಶನಿವಾರದ ಬದಲು ಶುಭವಾರ ಎಂದೇ ಇಟ್ಟಿದ್ದರೆ ಆ ದಿನವು ಶುಭಾವಾಗೇ ಇರುತ್ತಿತ್ತಲ್ಲವೆ ? ಬ್ರಹ್ಮಾಂಡದ ಗಾತ್ರ ವಿಪರೀತ; ಇಲ್ಲಿ ನವಗ್ರಹಗಳೇ ಏಕೆ ಲಕ್ಷಾಂತರ ಗ್ರಹಗಳು,. ನಕ್ಷತ್ರಗಳು ಇವೆ. ನವಗ್ರಹ ಶಾಂತಿಗಾಗಿ ಆಕಳು ದಾನ, ಧಾನ್ಯ ದಾನ ಹೇಳುವುದು ;

ಕೋಟಿಗಟ್ಟಳೆ ಕಿಲೋ ಮೀಟರ್ ದೂರ ಇರುವ ಶನಿಗ್ರಹಕ್ಕೆ ಎಳ್ಳಿನ ಉಂಡೆ ಕಟ್ಟಿ ಉರಿಸುವುದು ಮುಂತಾದ್ದು ವಿಜ್ಞಾನವೆ ?

ಓರ್ವರು ಕೆನಡಾ ದೇಶದಲ್ಲಿ 26 ವರ್ಷಗಳಿಂದ ಇದ್ದಾರಂತೆ. ನಮ್ಮ ಭಕ್ತರ ಮಗಳನ್ನು ನೋಡಲು ಬಂದರು. ಜಾತಕಗಳೆರಡೂ ತುಂಬಾ ಚೆನ್ನಾಗಿ ಕೂಡಿವೆ ಎಂದು ಕೊಡಲು ಆಗ್ರಹಿಸಿದರು. ನಿಶ್ಚಯ ಕಾರ್ಯಕ್ಕೆ ಸಿದ್ಧತೆ ಮಾಡಲು ಹೇಳಿದರು. ಸ್ವಲ್ಪ ಹೊತ್ತು ಬಿಟ್ಟು ಇನ್ನೊಮ್ಮೆ ಜಾತಕ ನೋಡಿಸುವಿರಾ ಎಂದರು. ನಮಗೆ, ನಮ್ಮ ಭಕ್ತರಿಗೆ ಅದರಲ್ಲಿ ನಂಬಿಕೆ ಇಲ್ಲ. ನಾವು ನೋಡುವುದಿಲ್ಲ, ನೋಡಿಸುವುದಿಲ್ಲ ಎಂದೆ. ತಾವೇ ಎಲ್ಲೋ ತೋರಿಸಿ ಎರಡೂ ಜಾತಕ ಪರಸ್ಪರ ವಿರುದ್ಧವಾಗಿವೆ ಎಂದರು. ''ಹೋಗ್ಲಿ ಬಿಡಿರಿ. ದೂರದ ದೇಶಕ್ಕೆ ಕೊಡುವುದು. ನಿಮಗೆ ವಿಪರೀತ ಭ್ರಾಂತಿ ಇದೆ. ನಾಳೆ ಸಣ್ಣಪುಟ್ಟ ಕಾರಣಕ್ಕೂ ಜಾತಕ ಕೂಡಿ ಬರಲಿಲ್ಲ ಎಂದು ಹುಡುಗಿಯನ್ನು ಹಂಗಿಸುವುದು ಬೇಡ'' ಎಂದು ನಿರಾಕರಿಸಲಾಯಿತು. ಅವರು ನಿರಾಶೆಯಿಂದ ಹೋಗಿ ಪುನಃ ಒಂದು ಗಂಟೆ ಬಿಟ್ಟು ಫೋನ್ ಮಾಡಿದರು. ಆ ಹುಡುಗಿಗೆ ಒಂದು ಜನ್ಮನಾಮ, ಇನ್ನೊಂದು ರೂಢಿಯ ಹೆಸರು. ಅವರು ಮೊದಲು ಜನ್ಮನಾಮದ ಬಗ್ಗೆ ಕೇಳಿದ್ದರಂತೆ. ಕೂಡಿ ಬರಲಿಲ್ಲವಂತೆ. ಇಟ್ಟ ಹೆಸರನ್ನು ಹೇಳಿ ಬೇರೆ ಕಡೆ ವಿಚಾರಿಸಿದಾಗ ಚೆನ್ನಾಗಿ ಕೂಡಿಬಂತಂತೆ. ಕೇಳಿ ನನಗೆ·ನಗು ಬಂದಿತು. ವ್ಯಕ್ತಿ ಒಬ್ಬರೇ ಅವರ ದೇಹಕ್ಕೆ ಹೆಸರುಗಳನ್ನು ಇಡುತ್ತಾರೆ. ಅಂದಾಗ ಬೇರೆ ಬೇರೆ ಹೆಸರು ಇಟ್ಟ ಮಾತ್ರಕ್ಕೆ ಜಾತಕ ಬದಲಾಗುವುದೆ ? ವೈದಿಕ ಧರ್ಮದ ಪ್ರತಿಪಾಲಕರಾದ ರಾಮ, ಲಕ್ಷ್ಮಣ ಮುಂತಾದವರು ಜಾತಕ, ಮುಹೂರ್ತ ನೋಡದೆ ಮದುವೆಯಾದರೆ ? ಎಲ್ಲ ನೋಡಿ ಮದುವೆಯಾದರೂ ಒಂದು ದಿನವಾದರೂ ಸುಖವಾಗಿ ಸಂಸಾರ ಮಾಡಲಿಲ್ಲವಲ್ಲ ! ಸುಪ್ರಸಿದ್ಧ ಜ್ಯೋತಿಷ್ಯಾಚಾರ್ಯ ಭಾಸ್ಕರಾಚಾರ್ಯನ ಮಗಳು ಲೀಲಾವತಿ ಮದುವೆಯಾದ ಕೆಲವೇ ಸಮಯದಲ್ಲಿ ವಿಧವೆಯಾದಳಲ್ಲ?! ಆತ ಸರಿಯಾಗಿ ಜಾತಕ ಪರಿಶೀಲಿಸಿರಲಿಲ್ಲವೆ ?

ರಸ್ತೆಯ ಪಕ್ಕದ ಪಾದ ಪಥಗಳಲ್ಲೆಲ್ಲ ಗುಡಿಗಳನ್ನು ಕಟ್ಟಿ ವ್ಯಾಪಾರ ಮಾಡುವ ಪುರೋಹಿತಶಾಹಿ ಪ್ರಬಲವಾಗುತ್ತಿದೆ. ಇವಾವೂ ಜಗತ್ತಿಗೆ ಜ್ಞಾನ ಬೋಧೆ ಮಾಡುವ, ಮಾತನಾಡುವ ದೇವರುಗಳಲ್ಲ. ಮಹಾತ್ಮರು ಮಾತನಾಡುವ ದೇವರುಗಳಿದ್ದಂತೆ. ಅಸಂಖ್ಯಾತ ದೇವತೆಗಳ ಮೂರ್ತಿಗಳನ್ನಿಟ್ಟು ಪೂಜಾರಿ ಜನರನ್ನು ಮತ್ತಷ್ಟು ಮೌಢ್ಯಕ್ಕೆ ತಳ್ಳುತ್ತಿದ್ದರೆ. ಕರ್ಮವಾದ, ಜ್ಯೋತಿಷ್ಯ, ವಾಸ್ತು- ಇವೆಲ್ಲವೂ ಪುರೋಹಿತರಿಗೆ, ಕಟ್ಟಡಗಳ ಗುತ್ತೇದಾರರಿಗೆ, ಇಂಜಿನಿಯರರಿಗೆ ಲಾಭದಾಯಕವಾಗಿ ಜನರನ್ನು ಮೌಢ್ಯತೆ- ಭಯಗಳ ಮಧ್ಯೆ ಸಿಕ್ಕಿಸಿ ಅಪ್ಪಚ್ಚಿ ಮಾಡುತ್ತಿವೆ. ಆತ್ಮಬಲವನ್ನೇ ಕುಂದಿಸುತ್ತಿವೆ. ಈ ಬಗ್ಗೆ ಪ್ರಜಾವಾಣಿಯ ವಾಚಕರ ವಾಣಿ ವಿಭಾಗದಲ್ಲಿ ಮುದ್ರಣಗೊಂಡ ಒಂದು ಓಲೆಯನ್ನು ಮುದ್ರಿಸಲಾಗಿದೆ ಗಮನಿಸಿರಿ.

ಮಹಾನ್ ಮಾದಕ ಸುಳ್ಳು

ಮಾನ್ಯರೇ, ಎಂ.ಎಲ್.ಶ್ರೀಪಾದರಾವ್ (ಪ್ರ.ವಾ. ಮೇ 4) ಅವರು 'ಸರಸ್ವತಿ ಗೋರಾ ಅವರು ಜ್ಯೋತಿಷ್ಯ ಶಾಸ್ತ್ರವನ್ನು ಕಾಲೇಜುಗಳಲ್ಲಿ ಅಧ್ಯಯನ ಮಾಡುವುದು ಮೌಢ್ಯ' ಎಂದು ಹೇಳಿರುವುದಕ್ಕೆ ಪ್ರತಿಕ್ರಿಯಿಸುತ್ತಾ ಜ್ಯೋತಿಷ್ಯ ಶಾಸ್ತ್ರ ಆಧ್ಯಾತ್ಮಿಕ ಉತ್ಕರ್ಷಕ್ಕೆ ಕಾರಣೀಭೂತವಾದ, ವಿಜ್ಞಾನಕ್ಕೂ ಆಧಾರವಾದ ಒಂದು ವಿಜ್ಞಾನ ಎಂದಿದ್ದಾರೆ.

ನಾನು ಚಿಕ್ಕಂದಿನಿಂದ ಜ್ಯೋತಿಷ್ಯ ಶಾಸ್ತ್ರವನ್ನು ಅಧ್ಯಯನ ಮಾಡಿ ನಮ್ಮ ಕೇರಿಗಳಲ್ಲಿ, ಸ್ನೇಹಿತರಲ್ಲಿ ಅದನ್ನು ಪ್ರಯೋಗಿಸಿ ಯಶಸ್ವಿಯಾಗಿದ್ದೇನೆ. ನನ್ನ ಅನುಭವದ ಪ್ರಕಾರ ಜ್ಯೋತಿಷ್ಯ ಶಾಸ್ತ್ರ

ಮನುಷ್ಯರ ಅಜ್ಞಾನವನ್ನು, ಅಸಹಾಯಕತೆಯನ್ನು, ಮುಗ್ಧತೆಯನ್ನು ಬಂಡವಾಳವಾಗಿಸಿಕೊಂಡು ಅಸ್ತಿತ್ವ ಪಡೆಯಬಲ್ಲ ಒಂದು ಮಹಾನ್ ಮಾದಕ ಸುಳ್ಳು, ಜನರನ್ನು ಪ್ರಜ್ಞಾವಂತರನ್ನಾಗಿಸದೆ ಗುಲಾಮಗಿರಿಯ ಮನಃಸ್ಥಿತಿಗೆ ಈ ಜ್ಯೋತಿಷ್ಯಶಾಸ್ತ್ರ ತಳ್ಳುತ್ತದೆ. ಇಂಥ ಅಪಾಯಕರ ಅಂಧಕಾರವನ್ನು ಈ ದೇಶದ ಜಾತಿಯ ಕ್ರೌರ್ಯಕ್ಕೊಳಗಾದ ಯಾರೂ ಇಷ್ಟಪಡಲಾರರು. ರಾವ್‌ರವರಿಗೆ ಹಾಗೂ ಅಂಥ ಸಮುದಾಯಕ್ಕಷ್ಟೇ ಇದು ಖುಷಿ ನೀಡಬಹುದು.

ನಿರುದ್ಯೋಗ, ಬಡತನ, ಹಸಿವು, ಕೋಮುವಾದ ಇತ್ಯಾದಿ ಬೆಂಕಿಗಳು ಜನರನ್ನು ಸುಡುತ್ತಿರುವ ಸಂದರ್ಭದಲ್ಲಿ ಇವುಗಳನ್ನು ಇಲ್ಲವಾಗಿಸುವ ಕ್ರಿಯಾಶೀಲ ಶಿಕ್ಷಣದ ಮಳೆಗಾಗಿ ನಾವು ಕಾತರಿಸುತ್ತಿದ್ದೇವೆ. ಮತ್ತೆ ಮತ್ತೆ ಈ ದೇಶದ ಚರಿತ್ರೆಯಲ್ಲಿರುವ ಜಾತಿ, ಧರ್ಮ, ಅಸಮಾನತೆಯ ಹಾಳುಬಾವಿಗೆ ನಮ್ಮನ್ನು ತಳ್ಳುವಂಥ ಸರ್ಕಾರ, ಶಿಕ್ಷಣ ಹಾಗೂ ರಾವ್‌ರಂಥ ಪ್ರತಿಕ್ರಿಯೆ ಮನಸ್ಸುಗಳು ನಮಗೆ ಬೇಕಾಗಿಲ್ಲ.

ನಾಗರಘಟ್ಟ -ಎನ್.ಕೆ.ಹನುಮಂತಯ್ಯ (ಕೃಪೆ : -ಪ್ರಜಾವಾಣಿ. ವಾಚಕರ ವಾಣಿ 10-5-2001)

ಜನರು ಶಕುನ-ಅಪಶಕುನಗಳ ಬಗ್ಗೆ ವಿಪರೀತ ಭ್ರಾಂತಿಯನ್ನು ಹೊಂದಿದ್ದಾರೆ. ಒಂದೊಂದು ಕಡೆ ಒಂದು ತರಹದ ನಂಬಿಕೆ. ವಾರಗಳ ಬಗ್ಗೆ ವಿಮರ್ಶೆ ಮಾಡೋಣ.

1. ಆಯಿತು (ಭಾನು)ವಾರ-ಆಯ್ತೋ ಹೋಯ್ತೊ
2. ಸೋಮವಾರ-ಶಿವನವಾರ ಎಂದು ಇದನ್ನು ಮಾತ್ರ ಎಲ್ಲಿ ಹಿಂದೂಗಳೂ ಪವಿತ್ರವೆಂದು ಮನ್ನಿಸುತ್ತಾರೆ.
3. ಮಂಗಳವಾರ-ಅಮಂಗಳ, ಒಳ್ಳೆಯ ಕೆಲಸ ಮಾಡಬಾರದು.
4. ಬುಧವಾರ- ಮಾಡಿದ್ದೆಲ್ಲ ಬೂದಿಯೇ ಸರಿ.
5. ಗುರುವಾರ- ಇದೊಂದು ಸೋಮವಾರದಂತೆ ಅಮಂಗಲವಾಗದಂತೆ ಉಳಿದಿದೆ.
6. ಶುಕ್ರವಾರ- ಲಕ್ಷ್ಮಿವಾರ ಆವತ್ತು ಯಾರಿಗೂ ಹಣ ಕೊಟ್ಟು ಖರ್ಚು ಮಾಡಬಾರದು.
7. ಶನಿವಾರ- ಅತ್ಯಂತ ಅನಿಷ್ಟ ; ಒಳ್ಳೆಯ ಕೆಲಸ ಮಾಡಬಾರದು.

ಹೀಗೆಲ್ಲ ಮಾತನಾಡುತ್ತ ಇದರ ಜೊತೆಗೆ ರಾಹುಕಾಲ, ಯಮಗಂಡಕ ಕಾಲ ಎಂದು ಬೇರೆ ರಗಳೆ ಮಾಡಿ ಜ್ಯೋತಿಷಿಗಳು ಈ ದೇಶವನ್ನು ಹಾಳು ಮಾಡಿದ್ದಾರೆ. ಆತ್ಮ ವಿಶ್ವಾಸವಿಲ್ಲದ ಭಯಗ್ರಸ್ತ ಮನಸ್ಸುಗಳನ್ನು ಸೃಷ್ಟಿಸಿದ್ದಾರೆ. ಒಂದು ವೇಳೆ ಆ ವಾರಗಳ ಹೆಸರು ಬೇರೆ ಇದ್ದಿದ್ದರೆ ? ಹೋಗಲಿ, ನಾವು ಬೇರೆ ಹೆಸರು ಇಟ್ಟು ಬಳಸಿದರೆ ಆ ವಾರಗಳ ಹೆಸರುಗಳಲ್ಲಿರುವ ಕಲಂಕವು ಹೋಗಿಬಿಡುವುದಷ್ಟೆ ? ಹೆಸರಿನಲ್ಲೆ ಕಲಂಕವಿದ್ದರೆ ಹೆಸರು ಬದಲಿಸಿದಾಗ ಹೋಗಲೇ ಬೇಕಲ್ಲವೆ ? ಉದಾಹರಣೆಗೆ ನಾನು ಹೀಗೆ ಹೆಸರಿಡುತ್ತೇನೆ.

1. ಭಾನುವಾರ	- **ದೇವವಾರ**	- God's day
2. ಸೋಮವಾರ	- **ಶಿವವಾರ**	- Shiva day
3. ಮಂಗಳವಾರ	- **ಬಸವವಾರ**	- Basava day
4. ಬುಧವಾರ	- **ಚನ್ನವಾರ**	- Chenna day
5. ಗುರುವಾರ	- **ಪ್ರಭುವಾರ**	- Prabhu day
6. ಶುಕ್ರವಾರ	- **ಮಾತೃವಾರ**	- Mother's day
7. ಶನಿವಾರ	- **ಶರಣವಾರ**	- Sharana day

1. ಭಾನುವಾರ= ದೇವರು ಸೃಷ್ಟಿಸಿದ ಒಂದು ಗೋಲವಾದ ಸೂರ್ಯನ ಹೆಸರಿಡುವ ಬದಲು ದೇವವಾರವೆಂದು ಭಾನುವಾರವನ್ನು ಕರೆದು ಸೃಷ್ಟಿಕರ್ತ ಪರಮಾತ್ಮನನ್ನು ಸ್ಮರಿಸಿ ಅವನ

ಶುಭನಾಮದಿಂದಲೇ ವಾರಗಳ ಹೆಸರನ್ನು ಆರಂಭಿಸಬಾರದೇಕೆ ?

2. ಸೋಮವಾರ=ಶಿವವಾರ : ದೇಶದಾದ್ಯಂತ ಮಾತ್ರವಲ್ಲ ಹೊರದೇಶಗಳಲ್ಲಿ ಸಹ ಹಿಂದುಗಳು ಸೋಮವಾರವನ್ನು ಶಿವನ ವಾರವೆಂದು ಪರಿಗಣಿಸಿ ಪವಿತ್ರವೆಂದು ಭಾವಿಸುವರು. ಸೋಮ=ಎಂದರೆ ಚಂದ್ರ ಸೋಮವಾರವೆಂದರೆ ಚಂದ್ರವಾರ ; ಇದು ಶಿವನಿಗೆ ಮೀಸಲಾದವಾರ. ಈ ಸುತ್ತಿ-ಬಳಸಿದ ಹಾದಿ ಏಕೆ ಬೇಕು ಅವನ್ನು ಭಾರತೀಯ ಪರಂಪರೆಯ ಮೂಲ ಪುರುಷನಾದ ಶಿವನ ಹೆಸರಿನಿಂದಲೇ ಶಿವವಾರ ಎಂದು ಏಕೆ ಕರೆಯಬಾರದು ?

3. ಮಂಗಳವಾರ=ಬಸವವಾರ: ನಾವು ಸ್ವತಂತ್ರ ಧರ್ಮದ ಅನುಯಾಯಿಗಳು. ಧರ್ಮಪಿತ ಬಸವಣ್ಣನವರು ಬಯಲಾದುದು ಶ್ರಾವಣಶುದ್ಧ ಪಂಚಮಿ ಮಂಗಳವಾರದಂದು. ಆದ್ದರಿಂದ ಅದನ್ನು ಧರ್ಮಪಿತರ ಶುಭನಾಮದಿಂದ ಬಸವವಾರ ಎಂದು ಕರೆದು ಅದು ಅಮಂಗಲ ಎಂಬ ಸೂತಕ ತೊಡೆಯಬಾರದೇಕೆ ?

4. ಬುಧವಾರ= ಚನ್ನವಾರ : ಚನ್ನಬಸವಣ್ಣನವರು ಮಹಾಜ್ಞಾನಿಗಳು ಅವರ ಶುಭನಾಮದಿಂದ ಬುಧವಾರವನ್ನು ಚನ್ನವಾರ ಎಂದೇ ಕರೆಯಬಾರದೇಕೆ ?

5. ಗುರುವಾರ=ಪ್ರಭುವಾರ : ಅಲ್ಲಮ ಪ್ರಭುಗಳು ಮಹಾಜ್ಞಾನಿಗಳು, ಆದರ್ಶ ಗುರುವಾಗಿ ಅನುಭವ ಮಂಟಪದ ಸಾಧಕರನ್ನು ಮುನ್ನಡೆಸಿದರು. ಆದರ್ಶ ಗುರುವಿನ ಸಂಕೇತ. ಆದ್ದರಿಂದ ಗುರುವಿನ ಹೆಸರಿನ ವಾರವನ್ನು ಪ್ರಭುವಾರ ಎಂದೇಕೆ ಕರೆಯಬಾರದು ? ವಿಶ್ವವಸು ಸಂವತ್ಸರದ ಚೈತ್ರಮಾಸದ ಪ್ರತಿಪದೆಯಂದು ಅಲ್ಲಮಪ್ರಭುಗಳು ಶೂನ್ಯ ಪೀಠದ ಆರೋಹಣ ಮಾಡಿದರು. ಆ ಸಂವತ್ಸರವನ್ನು ಶರಣರು ಕಾಲಜ್ಞಾನದಲ್ಲಿ ಪ್ರಭುನಾಮ ಸಂವತ್ಸರ ಎಂದೇ ಕರೆದಿದ್ದಾರೆ.

6. ಶುಕ್ರವಾರ=ಮಾತೃವಾರ : ಶುಕ್ರವಾರವನ್ನು ದೇವಿಯ ಹೆಸರಿನಲ್ಲೋ ಲಕ್ಷ್ಮಿಯ ಹೆಸರಿನಲ್ಲೋ ಕರೆದು ಕಾಲ್ಪನಿಕ ದೇವತೆಯರಿಗೆ ಗೌರವ ಕೊಡುತ್ತ ಮೂಢ ಆಚರಣೆಗಳನ್ನು ಪ್ರೋತ್ಸಾಹಿಸುವ ಬದಲು ಮಾತೃವಾರ ಎಂದು ಕರೆದು ಮಹಿಳಾ ಕುಲಕ್ಕೆ ಗೌರವ ಸಲ್ಲಿಸುವುದು ಸೂಕ್ತ.

7. ಶನಿವಾರ=ಶರಣವಾರ: ಹಿಂದುಗಳ ಭಕ್ತಿಯೇ ವಿಚಿತ್ರ. ಶನಿಯನ್ನು ಅತ್ಯಂತ ಕೆಟ್ಟವನೆಂದು ಭಾವಿಸಿ ಸಿಟ್ಟು ಬಂದಾಗ ಮಕ್ಕಳಿಗೆ 'ಶನಿ ಮುಂಡೇದೆ' ಎನ್ನುವರು. ಇತರರನ್ನು ಬೈಯುವಾಗ 'ಶನಿಯಂತೆ ಕಾಡುತ್ತಾನೆ' ಎನ್ನುವರು. ಮತ್ತೆ ತಪ್ಪದೆ ಶನಿವಾರ ಶನಿ ಪೂಜೆ ಮಾಡಿ, ಎಳ್ಳಿನ ದೀಪ ಹಚ್ಚುವರು. ಶನಿ ಸದಾ ಇನ್ನೊಬ್ಬರನ್ನು ಪೀಡಿಸುವ ಗೂಂಡಾ ದೇವತೆ. (ಬಹುಶಃ ಇದೇ ಪ್ರವೃತ್ತಿಯಿಂದಲೇ ಈ ದೇಶದಲ್ಲಿ ಸಾತ್ವಿಕರಿಗಿಂತಲೂ ಗೂಂಡಾ ಜನರಿಗೆ ಹೆದರಿ ಅವರನ್ನು ಗೌರವಿಸುವ ಪ್ರವೃತ್ತಿ ಬೆಳೆದಂತೆ ತೋರುತ್ತದೆ) ಆದ್ದರಿಂದ ಆ ಹೆಸರಿನ ಬದಲು ಶನಿವಾರವನ್ನು ಪವಿತ್ರವಾದ ಶರಣವಾರ ಎಂದು ಕರೆದು ಆ ದಿನಕ್ಕಂಟಿದ ಕಲಂಕವನ್ನು ತೊಡೆಯುವುದಲ್ಲದೆ ''ಶರಣ'' ಎಂದರೆ ದೇವರಿಗೆ ಶರಣಾದವನು ಎಂದು ಜಗತ್ತಿನ ಎಲ್ಲ ಮಹಾತ್ಮರನ್ನು ಗೌರವಿಸಿ, ಸಾಂಪ್ರದಾಯಿಕ ಶನಿವಾರವನ್ನು ಏಕೆ ಮಂಗಲಮಯಗೊಳಿಸಬಾರದು ?

ಹೀಗೆ ಯಾವುದಾದರೊಂದು ಉತ್ತಮ ಪ್ರಯತ್ನ ಮಾಡಿ ಜ್ಯೋತಿಷ್ಯ ಶಾಸ್ತ್ರದ ಆಳವಾದ ಹಾಳುಭಾವಿಯಿಂದ ಜನರನ್ನು ಮೇಲಕ್ಕೆತ್ತುವುದು ಅತ್ಯಂತ ಅಗತ್ಯವೆನಿಸುತ್ತಿದೆ.

ಪ್ರಜಾವಾಣಿ ಪತ್ರಿಕೆಯ ವಾಚಕರ ವಾಣಿ ವಿಭಾಗದಲ್ಲಿ ರಾಮಕೃಷ್ಣರಾವ್ ಎಂಬ ಸಾಗರದವರು ಒಂದು ಪತ್ರ ಬರೆದಿದ್ದಾರೆ. ಅದರಲ್ಲಿ ಅವರು ''ಊರಿಡೀ ಶರಾಬು ಅಂಗಡಿಗಳನ್ನು ಸರಕಾರ ತೆರೆದಿದೆ. ಯಾರು ಬೇಕಾದರೂ ಕುಡಿಯಬಹುದು. ಆದರೆ ಆದರ ಬಗ್ಗೆ ಈ ಬುದ್ಧಿಜೀವಿಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಆದರೆ ವಿಶ್ವವಿದ್ಯಾಲಯಗಳಲ್ಲಿ 'ಜ್ಯೋತಿಷ್ಯಶಾಸ್ತ್ರ ಕಲಿಸಲು

ವಿರೋಧಿಸುತ್ತಾರೆ.'' ಎಂದು ಪ್ರಗತಿಪರ ಚಿಂತಕರನ್ನು ಟೀಕಿಸಿದ್ದಾರೆ.

ನಿಜವಾಗಿಯೂ ಆಲೋಚಿಸಿದರೆ, ಕುಡಿತಕ್ಕಿಂತಲೂ ಜ್ಯೋತಿಷ್ಯ ಶಾಸ್ತ್ರದಲ್ಲಿ ವ್ಯಕ್ತಿ ತಾಳುವ ನಂಬಿಕೆ ಅಪಾಯಕಾರಿ. ಕುಡಿತದಿಂದ ವ್ಯಕ್ತಿಯು ಹಾಳಾದರೆ ಜ್ಯೋತಿಷ್ಯದಿಂದ ವ್ಯಕ್ತಿ ಮಾತ್ರವಲ್ಲ ಅವನ ಕುಟುಂಬ, ಸಮಾಜ, ಇಡೀ ದೇಶವೇ ಭ್ರಮೆಗೊಂಡು ಹಾಳಾಗುತ್ತದೆ. ಕುಡಿತದ ವ್ಯಸನವನ್ನು ಪಶ್ಚಾತ್ತಾಪ ಪಟ್ಟು ಒಂದು ದಿನ ವ್ಯಕ್ತಿ ಬಿಡಬಹುದು. ಕುಡಿತ ಎಂಬುದು ಒಂದು ವ್ಯಸನ ಎಂಬ ಪ್ರಜ್ಞೆ ಸದಾ ಕುಡುಕನನ್ನು ಕಾಡುತ್ತದೆ. ಆದರೆ ಜ್ಯೋತಿಷ್ಯದಲ್ಲಿ ನಂಬಿಕೆ ಎಂಬ ಹಾಳುಭಾವಿಗೆ ಬಿದ್ದ ಮನುಷ್ಯ ಆತ್ಮವಿಶ್ವಾಸ ಕಳೆದುಕೊಂಡು ಪುರೋಹಿತ ಶಾಹಿಯ ಕೈಗೊಂಬೆಯಾಗಿರುತ್ತಾನೆ. ಹೀಗಾಗಿ ಆ ಕೂಪದಿಂದ ಹೊರಬರುವುದು ಕಷ್ಟಸಾಧ್ಯ. ಕುಡಿತ ದೇಹದ ಸ್ವಾಸ್ಥ್ಯವನ್ನು ಹಾಳು ಮಾಡಿದರೆ ಜ್ಯೋತಿಷ್ಯ ಮನಸ್ಸಿನ ಆತ್ಮವಿಶ್ವಾಸವನ್ನು ಕುಂದಿಸುತ್ತದೆ. ಆದ್ದರಿಂದ ಕುಡಿತಕ್ಕಿಂತಲೂ ಜ್ಯೋತಿಷ್ಯವೇ ಅಪಾಯಕಾರಿ, ಸಮೂಹಸನ್ನಿ (mass hysteria)ಗೆ.ಕಾರಣವಾಗುವ ಅಪಾಯಕಾರಿ ಮೂಢನಂಬಿಕೆ ಜ್ಯೋತಿಷ್ಯ.

ಬಸವ ತತ್ವಾನುಯಾಯಿಗಳು ನಿರಂತರವಾಗಿ ತಮ್ಮ ಸುತ್ತಲೂ ಇರುವ ಜನರಿಗೆ ವೈಜ್ಞಾನಿಕ ವಿವರಣೆ ನೀಡಿ ಮೂಢನಂಬಿಕೆ ಹೋಗಲಾಡಿಸುವ ಪವಿತ್ರ ಕಾಯಕವನ್ನು ಕೈಕೊಳ್ಳಬೇಕು.

ಜ್ಯೋತಿಷ್ಯವು ವೈಯಕ್ತಿಕ ನಂಬಿಕೆಯ ಮಟ್ಟದಲ್ಲಿ ಇರಬೇಕೇ ವಿನಾ ಪತ್ಯಕ್ರಮದಲ್ಲಿ ಅಳವಡಬಾರದು. ರಾಷ್ಟ್ರೀಯತೆ, ರಾಷ್ಟ್ರಪ್ರೇಮದ ಬಗ್ಗೆ ಸದಾ ಮಾತನಾಡುವ ಕೇಂದ್ರ ಸರ್ಕಾರವು ಪುರೋಹಿತಶಾಹಿಯ ಹಿತವನ್ನಷ್ಟೇ ಗುರಿಯಾಗಿಟ್ಟುಕೊಳ್ಳದೆ ಭಾರತ ದೇಶದ ವೈಜ್ಞಾನಿಕ ಪ್ರಗತಿಯ ಕಡೆಗೂ ಗಮನ ಕೊಡಬೇಕು ; ಜ್ಯೋತಿಷ್ಯವನ್ನು ವಿಶ್ವವಿದ್ಯಾಲಯಗಳಲ್ಲಿ ಬೋಧಿಸುವ ಕ್ರಮಕ್ಕೆ ಕೈಹಾಕುವ ಮೂರ್ಖತನ ತೋರಲಾರದೆಂದು ಆಶಿಸುವೆವು.

-ಮಾತಾಜಿ

ಬಸವ ವಚನಾಮೃತ - ಸಂಸ್ಕೃತಿ ಶಿಷ್ಟಾಚಾರ

ಏನಿಬಂದಿರಿ,ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿ ಹೋಹುದೆ?
'ಕುಳ್ಳಿರೆಂ'ದಡೆ ನೆಲಕುಳಿಹೋಹುದೆ ?
ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದಡೊಂದು ಗುಣವಿಲ್ಲದಿದ್ದಡೆ,
ಕಿಡಹಿ ಮೂಗ ಕೊಯ್ಯದೆ ಮಾಣ್ಬನೆ ಲಿಂಗದೇವರು? - ಬ.ವ.ದೀ 243

ಭಾವಾರ್ಥ:

ಯಾರಾದರೂ ಕಾಣಲು ಬಂದರೆ, ಅವರು ಪರಿಚಿತರೇ ಇರಲಿ, ಅಪರಿಚಿತರೇ ಇರಲಿ, ''ಏನು ಬಂದಿರಿ? ಬನ್ನಿ,ಬನ್ನಿ. ಕ್ಷೇಮವಾಗಿ ಇದ್ದೀರಾ?'' ಎಂದು ತಾನೇ ಮುಂದಾಗಿ ಮಾತನಾಡಿದರೆ ಮೈಮೇಲಿನ ಚೆಲುವು ಹಾರಿ ಹೋಗುತ್ತದೆಯೆ? ''ಬನ್ನಿ,ದಯಮಾಡಿ,ಕುಳಿತುಕೊಳ್ಳಿ'' ಎಂದು ಚಾಪೆಯನ್ನೋ,ರತ್ನಗಂಬಳಿನ್ನೋ, ತೋರಿಸಿದರೆ ಮನೆಯ ನೆಲ ತಗ್ಗುಬೀಳುವುದೆ? ಬಂದವರ ಸಂಗಡ ತಕ್ಷಣ ಮಾತನಾಡಿದರೆ, ತಲೆಯಾಗಲೀ ಹೊಟ್ಟೆಯಾಗಲೀ ಒಡೆಯುವುದೇ? ಬಂದವರಿಗೆ ಏನನ್ನಾದರೂ ಕೊಟ್ಟು ಸತ್ಕರಿಸಲು ಸಾಧ್ಯವಾಗದಿದ್ದರೆ, ಅಥವಾ ಮನಸ್ಸಿಲ್ಲದಿದ್ದರೆ ಹೋಗಲಿ, ಒಂದು ಉತ್ತಮಗುಣ ಶಿಷ್ಟಾಚಾರದ ನಡೆಯೂ ಬೇಡವೆ? ಅಂತಹ ಅಹಂಕಾರದ ವರ್ತನೆಗೆ ದೇವರು ಶಿಕ್ಷೆಯನ್ನು ಕೊಡದೇ ಇರುವನೆ? ಆದ್ದರಿಂದ ಸದ್ಭಕ್ತನು ಸೌಜನ್ಯ ಶೀಲನು, ಸದ್ಭಾವಿಯೂ ಆಗಿ ಇರಬೇಕು. ಬಂದವರನ್ನು ಮುಗುಳ್ನಕ್ಕು ಸ್ವಾಗತಿಸಿ, ಯೋಗಕ್ಷೇಮ ವಿಚಾರಿಸಬೇಕು; ಕುಳಿತುಕೊಳ್ಳಲು

ಆಸನ ನೀಡಬೇಕು. ಠೀವಿಯಿಂದ ಕಾಯಿಸದೆ, ತಕ್ಷಣ ಮಾತನಾಡಿಸಬೇಕು.

ಸಾಮಾಜಿಕ ನೀತಿ -ಸದ್ವಿನಯ

ಸಮಚಿತ್ತವೆಂಬ ನೇಮದ ಹಲಗೆಯ ಹಿಡಿದು
ಶಿವಚಿತ್ತವೆಂಬ ಕೂರಲಗಕೊಂಡು
ಶರಣಾರ್ಥಿಯೆಂಬ ಶ್ರವವ ಕಲಿತಡೆ
ಆಳುತನಕ್ಕೆ ದೆಸೆಯಪ್ಪೆ,ನೋಡಾ.
ಮಾರಂಕ ಜಂಗಮ ಮನೆಗೆ ಬಂದಲ್ಲಿ ಇದಿರೆದ್ದು ನಡೆವುದು;
ಲಿಂಗದೇವರನೊಲಿಸುವಡಿದು ಚಿಹ್ನ ! - ಬ.ವ.ದೀ 722

ಭಾವಾರ್ಥ;

ಸುಖ-ದುಃಖ, ನಲಿವು-ನೋವು, ಮಾನ-ಅಪಮಾನಗಳನ್ನು ಒಂದೇ ಮನಸ್ಸಿನಿಂದ ಸ್ವೀಕರಿಸುವ ಸಮಚಿತ್ತ ಎಂಬ ಹಲಗೆಯನ್ನು (ಗುರಾಣಿ)ಯನ್ನು ಹಿಡಿದುಕೊಳ್ಳಬೇಕು. ''ದೇವನ ಸಂಕಲ್ಪ ಹೇಗಿದೆಯೋ ಹಾಗೆ ಆಗುತ್ತದೆ.'' ಎಂಬ ಶರಣಾಗತಿ ಭಾವವನ್ನು ಅಳವಡಿಸಿಕೊಂಡು, ಶಿವನ ಚಿತ್ತ (God's will)ಕ್ಕೆ ಶರಣಾಗಬೇಕು. ಇದು ಕೂರಲಗು. ಶರಣಾರ್ಥಿ ಎಂದು ವಂದಿಸುವದೇ ಗರಡಿಯ ಸಾಧನೆ. ಗುರಾಣಿ ಹಿಡಿದು, ಕತ್ತಿಯನ್ನು ಬೀಸುತ್ತ, ಗರಡಿಯಲ್ಲಿ ಅಭ್ಯಾಸ ಮಾಡಿದರೆ ವ್ಯಕ್ತಿಯು ನಿಜಯೋಧನು ಹೇಗಾಗುವನೋ ಹಾಗೆ ಸಮಚಿತ್ರ ಎಂಬ ಗುರಾಣಿ ಹಿಡಿದು, ಶಿವಚಿತ್ತ ಎಂಬ ಕೂರಲಗು ಝುಳಪಿಸುತ್ತ, ಶರಣಾರ್ಥಿ ಎಂಬ ಗರಡಿ ಅಭ್ಯಾಸ ಮಾಡುವವ ಶಿವಯೋಧ. ಈ ಶಿವಯೋಧನ ಸದ್ಭಕ್ತಿ ಶೌರ್ಯ ಪರೀಕ್ಷೆಗೆ ಬರುವ ಎದುರಾಳಿ ''ಜಂಗಮ''. ಮಹಾತ್ಮನಾದ ಜಂಗಮ ಬಂದಾಗ ವಿನಯದಿಂದ ಎದ್ದು ನಡೆದುಬಂದು ವಂದಿಸಬೇಕು. ದೇವರನ್ನು ಒಲಿಸಲಿಕ್ಕೆ ಇಂತಹ ಸಭ್ಯ ನಡೆ-ನುಡಿಗಳೇ ಸಾಧನ ಸಲಕರಣೆಗಳು.

ಸಂಸ್ಕೃತಿ - ಕಿಂಕರತ್ವ

ಒಡೆಯರಾಡುವ ಮಾತ ಕಡೆ ಪರಿಯಂತರ ಕೇಳಿ
ಇದಿರುಹೋಗಿ ಕಿಂಕರನಾಗಿ ನಡುಗುತ್ತ ಬಿನ್ನಹವ ಮಾಡುವ
ಸದ್ಭಕ್ತರ ತೋರಯ್ಯಾ !
ಒಡೆಯರಾಡುವ ಮಾತ ಕಂಡು ಕರೆದಲ್ಲಿ
ಕಿಡೆಮೆಟ್ಟ ಬಾಯಿ ಘನವೆಂದು ಆಡುವವನ ತೋರದಿರಯ್ಯ !
ಅವನ ಸಂಗದಲ್ಲಿರಿಸದಿರಯ್ಯಾ
ಅವನ ಸಹಪಂಙ್ತಿಯಲ್ಲಿ ಕುಳ್ಳಿರಿಸದಿರಯ್ಯಾ
ಲಿಂಗದೇವಯ್ಯಾ, ನಿಮ್ಮ ಬೇಡುವುದೊಂದೆ ವರವು. -ಬ.ವ.ದೀ 447

ಒಡೆಯರು ಆಡುವ ಮಾತನ್ನು ಕಡೆಯತನಕ ಸಾವಧಾನವಾಗಿ, ಲಕ್ಷ್ಯಗೊಟ್ಟು ಕೇಳಬೇಕು. ಇಲ್ಲಿ ಒಡೆಯ-ಭೃತ್ಯ ಎಂದರೆ, ಗುರು-ಶಿಷ್ಯ, ಮಾಲಿಕ-ಸೇವಕ, ಶಿಕ್ಷಕ-ವಿದ್ಯಾರ್ಥಿ, ಹಿರಿಯರು-ಕಿರಿಯರು, ಪತಿ-ಪತ್ನಿ, ವೈದ್ಯ-ರೋಗಿ, ಜಂಗಮ-ಭಕ್ತ, ಉಪದೇಶಕ-ಶ್ರೋತೃ ಹೀಗೆಲ್ಲ ಇರಬಹುದು. ಒಡೆಯರು ಏನಾದರೂ ಹೇಳುತ್ತಿದ್ದರೆ ಅಥವಾ ಕೆಲಸ ಕುರಿತು ಆಜ್ಞಾಪಿಸುತ್ತಿದ್ದರೆ ಭೃತ್ಯನು ಪೂರ್ತಿಯಾಗಿ ಕೇಳಿಕೊಳ್ಳಬೇಕು. ಅವರು ಹೇಳಿದ್ದು ಸರಿಯಿದ್ದರೆ, ಸಮ್ಮತಾರ್ಹವಿದ್ದರೆ ಒಪ್ಪಿಕೊಂಡು, ವಂದಿಸಿ, ಪಾಲಿಸಲು ಹೊರಡಬೇಕು. ಸರಿಯಿಲ್ಲದಿದ್ದರೆ, ಒಪ್ಪಿಗೆಯಾಗದಿದ್ದರೆ ಇದಿರು ಹೋಗಿ, ಅತ್ಯಂತ ವಿನಯ-ಕೈಂಕರ್ಯಗಳಿಂದ ಬೇರೆ ಆಲೋಚನೆಗಳನ್ನು ಸೂಚಿಸಬೇಕು. ''ನನಗೆ ಹೀಗೆ ಅನ್ನಿಸುತ್ತದೆ.

ಒಪ್ಪುವುದು ಬಿಡುವುದು ತಮಗೆ ಸೇರಿದ್ದು.'' ಎನ್ನಬೇಕು. ಹಾಗಲ್ಲದೆ ಒಡೆಯರು ಏನನ್ನಾದರೂ ಹೇಳುತ್ತಿದ್ದಾಗ, ದೂರದಲ್ಲೇ ನಿಂತು ಕೂಗಿ ಮಾತನಾಡುವುದು, ಅಲ್ಲಿಂದಲೇ ಎದುರು ವಾದಿಸುವುದು ಅಸಭ್ಯತೆ, ಅಸಂಸ್ಕೃತಿ. ತನ್ನದೇ ಬಾಯಿಯನ್ನು ಜೋರುಮಾಡಿ, ದನಿ ಏರಿಸಿ ಕೂಗಾಡುವುದು ಅಸಹ್ಯ. ಅಂತಹ ಉದ್ಧಟನ ಅಸಂಸ್ಕೃತನ ಸಹವಾಸದಲ್ಲಿರಬಾರದು. ಅವನು ಕುಳಿತ ಸಾಲಿನಲ್ಲಿ ಕೂರಬಾರದು. ಏಕೆಂದರೆ ಕುಸಂಸ್ಕಾರಗಳು ಬಲು ಬೇಗ ಕಳೆಯಂತೆ ಬೆಳೆಯುತ್ತವೆ. ಸುಸಂಸ್ಕಾರಗಳನ್ನು ಕಷ್ಟಪಟ್ಟು ರೂಢಿಸಿಕೊಳ್ಳಬೇಕಾಗುತ್ತದೆ. ಅಂತಹವರ ಸಹವಾಸದಿಂದ ಕೆಟ್ಟ ವರ್ತನೆಗಳು ಬೆಳೆಯುವ ಸಾಧ್ಯತೆ ಇರುವುದರಿಂದ, ಉದ್ಧಟರಿಂದ ವಿವೇಕಿಯಾದವನು ದೂರವಿರುವುದು ಒಳ್ಳೆಯದು. ★

ಗುರು ವಂದನಾ

ಶ್ರೀ ಗುರುವೆ ಸದ್ಗುರುವೆ
ಪೂಜ್ಯ ಲಿಂಗಾನಂದ ಗುರುವೆ
ಬಸವ ಧರ್ಮ ಪೀಠದ
ಪ್ರಥಮ ಮಹಾಜಗದ್ಗುರುವೆ
ಶಿರಬಾಗಿ ಶರಣೆಂಬೆ ನಿಮ್ಮಡಿಗೆ

ಕಂಚಿನ ಕಂಠದಿ ಮಿಂಚಿ ಕಣ್ಮರೆಯಾದ
ಬಸವ ಧರ್ಮದ ಕಣ್ಮಣಿಯೆ
ಸತ್ಯ ತತ್ತ್ವಗಳ ಸ್ಪಷ್ಟತೆಯನರುಹಿದ
ನಿರ್ಭೀತ ನಿಲುವಿನ ದಿಟ್ಟ ವಿಚಾರವಾದಿಯೆ

ಮಠ-ಮಾನ್ಯಗಳ ಅಧಿಕಾರದ
ಆಸೆಯ ಸುಳಿಯಲ್ಲಿ ಸಿಲುಕದೆ
ಬಸವ ತತ್ತ್ವವನೆತ್ತಿ ಹಿಡಿದು
ಹಗಲಿರುಳು ದುಡಿದ ಅವಿಶ್ರಾಂತ ಚೇತನವೆ

ಸತ್ತ ಸಂಪ್ರದಾಯಗಳನಲ್ಲಗಳೆದು
ಸತ್ಸಂಪ್ರದಾಯವನ್ನಳವಡಿಸಲು
ಬೋಧೆಯ ಕಾಯಕದಿಂದ
ಸಮಾಜಕ್ಕೆ ಸವೆದ ಚಂದನವೆ

ಸಂಪ್ರದಾಯವಾದಿಗಳನ್ನು ಎದುರಿಸಲು
ಸತ್ಯವೆಂಬ ಕೂರಲಗ ಹಿಡಿದು
ಹೋರಾಡಿ ಜಯಿಸಿ, ಬಸವಾ
ಎಂದುಸುರುತ್ತ ಉಸಿರ ನಿಲಿಸಿದ ಧೀಮಂತರೆ

-ಮಾತೆ ಅಕ್ಕಮಹಾದೇವಿ
ಬಸವ ಧರ್ಮಪೀಠ, ಕೂಡಲಸಂಗಮ

2001ನೆಯ ಸಾಲಿನ ಬಸವ ತತ್ತ್ವ ಪರೀಕ್ಷೆಗಳು

ಬಸವ ಧರ್ಮ ಪೀಠದ ಪರವಾಗಿ ನಡೆಸುವ ಬಸವ ತತ್ತ್ವದ ಪರೀಕ್ಷೆಗಳು ಆಗಸ್ಟ್ ತಿಂಗಳಿನ ಕೊನೆಯ ವಾರದಲ್ಲಿ ನಡೆಯುತ್ತವೆ. ರಾಷ್ಟ್ರೀಯ ಬಸವ ದಳಗಳವರು ತರಬೇತಿ ನೀಡಿ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗೆ ಕಟ್ಟಿಸಿದರೆ, ಉತ್ತಮ ಫಲಿತಾಂಶ ತೆಗೆದವರಿಗೆ ಮತ್ತು ತರಬೇತಿ ನೀಡಿದ ಸಂಸ್ಥೆಗೆ ವಿಶೇಷ ಬಹುಮಾನ ನೀಡಲಾಗುವುದು. ರಾಷ್ಟ್ರೀಯ ಬಸವ ದಳಗಳು ಇಲ್ಲದೆ ಇರುವಲ್ಲಿ ವೈಯಕ್ತಿಕವಾಗಿ ಬಸವ ತತ್ತ್ವದ ಪರೀಕ್ಷೆಗಳಲ್ಲಿ ಭಾಗವಹಿಸಬೇಕೆನ್ನುವವರಿಗೆ ಸಮೀಪದ ಕೇಂದ್ರಗಳನ್ನು ಸೂಚಿಸಲಾಗುವುದು.

ಶರಣ. ಕಲ್ಯಾಣಪ್ಪ ಪರಮಾದಿಯವರು ಒಳ್ಳೆಯ ರೀತಿಯಲ್ಲಿ ಪರೀಕ್ಷೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿರ್ವಹಿಸಿಕೊಂಡು ಹೋಗುತ್ತಿರುವುದರಿಂದ ಪರೀಕ್ಷೆಗೆ ಕಟ್ಟುವವರು, ಕಟ್ಟಿಸುವವರು ಅವರ ವಿಳಾಸಕ್ಕೆ 3ರೂ. ಅಂಚೆ ಚೀಟಿ ಹಚ್ಚಿದ ಸ್ವ-ವಿಳಾಸದ ಲಕೋಟೆ ಇಟ್ಟು ಪತ್ರ ಬರೆದು ವಿವರಗಳನ್ನು ತರಿಸಿಕೊಳ್ಳಬೇಕೆಂದು ಸೂಚಿಸುತ್ತೇವೆ.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ವ್ಯವಹರಿಸುವ ವಿಳಾಸ :

ದೂರವಾಣಿ : 0836-306106
ಶರಣ. ಕಲ್ಯಾಣಪ್ಪ ಪರಮಾದಿ, ಸಂಚಾಲಕರು
ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ
ಬಸವ ನಗರ, ಹೆಗ್ಗೇರಿ ಹತ್ತಿರ, ಹುಬ್ಬಳ್ಳಿ-24

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

86666



ಬೆಂಗಳೂರು ನಗರದ ಸರ್ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ವಿಶ್ವಗುರು ಬಸವಣ್ಣನವರ 806ನೆಯ ಲಿಂಗೈಕ್ಯ ದಿನಾಚರಣೆ

ಬುಧವಾರ ದಿ. 25-7-2001ರಂದು

ಶರಣ ಬಂಧುಗಳಲ್ಲಿ ಹೃತ್ಪೂರ್ವಕ ಬಿನ್ನಹ,

ವಿಶ್ವಗುರು ಬಸವಣ್ಣನವರು ಆನಂದನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಂದು ರೋಹಿಣಿ ನಕ್ಷತ್ರದಲ್ಲಿ ಜನಿಸಿ (ಕ್ರಿ.ಶ. 1134) 62 ವರ್ಷ 3 ತಿಂಗಳು 2 ದಿವಸಗಳ ಕಾಲ ಇಳೆಯ ಮೇಲಿದ್ದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು ದಿ. 30-7-1196ರಂದು ಉರಿಯುಂಡ ಕರ್ಪುರದಂತೆ, ಸಮುದ್ರವನ್ನು ಬೆರೆತ ನದಿಯಂತೆ ಲಿಂಗೈಕ್ಯರಾಗಿ ದೇವನಲ್ಲಿ ಒಂದಾದರು. ಅವರು ಬಯಲಾದಂದಿನಿಂದಲೂ ಆ ದಿನವು **''ಬಸವ ಪಂಚಮಿ''** ಎಂದು ಖ್ಯಾತಿವೆತ್ತಿದೆ. ಈ ವರ್ಷ 806ನೆಯ ಲಿಂಗೈಕ್ಯ ದಿನವು ಬುಧವಾರ ದಿ. 25-7-2001ದಂದು ಒದಗಿ ಬಂದಿದೆ.

ಸಾಮೂಹಿಕ ಇಷ್ಟಲಿಂಗಾರ್ಚನೆ

ಧರ್ಮಪಿತ ಬಸವಣ್ಣನವರು ಕೊಟ್ಟ ಅಮೂಲ್ಯವಾದ ಒಂದು ಧಾರ್ಮಿಕ ಲಾಂಛನ ಇಷ್ಟಲಿಂಗ. ಏಕೇಶ್ವರವಾದವನ್ನು ಪ್ರತಿಪಾದಿಸಿದ ಮಹಾಪುರುಷ ಬಸವಣ್ಣನವರು ಇಷ್ಟಲಿಂಗದ ಮೂಲಕ ಏಕದೇವೋಪಾಸನೆಗೆ ಅನುವು ಮಾಡಿಕೊಟ್ಟರು. ನಿರಾಕಾರನಾದ ದೇವನಿಗೆ ಮನುಷ್ಯರ, ಪಶುಪಕ್ಷಿಗಳ, ಕ್ರಿಮಿ ಕೀಟಗಳ ಆಕಾರ ಕೊಡುವುದು ಸೃಷ್ಟಿಕರ್ತ ಲಿಂಗದೇವನಿಗೆ ಮಾಡುವ ಅಪಚಾರವಾಗುವುದೆಂದು ಸಾರಿ, ವಿಶ್ವದಾಕಾರದಲ್ಲಿ ದೇವನನ್ನು ಪೂಜಿಸಲು ಕಲಿಸಿದರು. ಇಷ್ಟಲಿಂಗವನ್ನು ಗಣಲಾಂಛನವಾಗಿ ಮಾಡಿ, ಜಾತಿ-ವರ್ಣ-ವರ್ಗರಹಿತ ಧರ್ಮ ಸಹಿತ ಸಮಾಜ ರಚನೆಗೆ ಅನುಕೂಲವಾಗುವ ಲಿಂಗಾಯತ ಧರ್ಮವನ್ನು ಕೊಟ್ಟರು.

ಪವಿತ್ರ ಹಬ್ಬ ಬಸವ ಪಂಚಮಿಯಂದು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಶರಣ ಬಂಧುಗಳು ಮಾಡುವುದು ಕಡ್ಡಾಯವಾದ ಕರ್ತವ್ಯವಾಗಿರುವುದು.

ಆದ್ದರಿಂದ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಬುಧವಾರ ದಿ. 25-7-2001 ಬೆಳಿಗ್ಗೆ 10 ಗಂಟೆಗೆ ಬಸವ ಧರ್ಮ ಪೀಠಾಧ್ಯಕ್ಷೆ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಸಾಮೂಹಿಕ ಇಷ್ಟಲಿಂಗಾರ್ಚನೆ, ಉಪನ್ಯಾಸ ಮತ್ತು ನಂತರ ಗಣಪ್ರಸಾದ(ಭೋಜನ)ವನ್ನು ಏರ್ಪಡಿಸಲಾಗಿದೆ. ಆದ್ದರಿಂದ ಎಲ್ಲಾ ಶರಣ ಬಂಧುಗಳು ಕುಟುಂಬ ಪರಿವಾರ ಸಹಿತವಾಗಿ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದೇ ಅಲ್ಲದೆ ತನು-ಮನ-ಧನಗಳಿಂದ ಸಹಕರಿಸಬೇಕು ಮತ್ತು ಸಾಮೂಹಿಕ ಗಣ ಪ್ರಸಾದಕ್ಕಾಗಿ ಉದಾರವಾದ ದೇಣಿಗೆಯನ್ನು ಕೊಡಬೇಕೆಂದು ಸೂಚಿಸುತ್ತೇವೆ.

ಶರಣಾರ ಬರವೆಮಗೆ ಪ್ರಾಣ ಜೀವಾಳ

ಶರಣ ಎನ್. ಪುಟ್ಟರುದ್ರ
ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ

ಪೂಜ್ಯ ಶ್ರೀ ಸದ್ಗುರು
ಅಲ್ಲಮಪ್ರಭು ಸ್ವಾಮಿಗಳು

ಪವಿತ್ರ ಮಾಸ ಆಚರಣೆ ಮತ್ತು ಬಸವ ಪಂಚಮಿ ವ್ರತ

ಬಸವ ಗುರು ಸಂಸ್ಥಾಪಿತ ಲಿಂಗಾಯತ ಧರ್ಮದಲ್ಲಿ ಯಾವ ದಿನವೂ ಶುಭವಲ್ಲ ಅಶುಭವಲ್ಲ; ಪವಿತ್ರವಲ್ಲ ಅಪವಿತ್ರವೂ ಅಲ್ಲ. ವ್ಯಕ್ತಿಯು ಮಾಡುವ ಕ್ರಿಯೆಗಳಿಂದ ಸಮಯವು ಶುಭ-ಅಶುಭ ಎನ್ನಿಸಿಕೊಳ್ಳುವದು. ಒಂದು ನಿಯಮಕ್ಕೆ, ಶಿಸ್ತಿಗೆ ಬದ್ಧರಾಗಲು ಧಾರ್ಮಿಕರಿಗೆ ಕೆಲವೊಂದು ಆಚರಣೆಗಳು ಅಗತ್ಯ. ಆ ದೃಷ್ಟಿಯಿಂದ ಶ್ರಾವಣ ಮಾಸವು ಧಾರ್ಮಿಕವಾಗಿ ಪವಿತ್ರ ಮಾಸ (ಮುಸ್ಲೀಮರಿಗೆ ರಂಜಾನ್ ಇದ್ದಂತೆ) ಎಂಬ ನಂಬಿಕೆ ಲಿಂಗಾಯತ ಸಮಾಜದಲ್ಲಿ ರೂಢಿಗೊಂಡಿದೆ. ಇದಕ್ಕೆ ಇನ್ನೊಂದು ಕಾರಣವೂ-ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯಂದು - ಎಂಬುದು ಇರಬಹುದು. ಆದ್ದರಿಂದ ಬಸವ ಪಥಿಕರು ಶ್ರಾವಣ ಶುದ್ಧ ಪ್ರತಿಪದೆಯಿಂದ ಭಾದ್ರಪದ ಚೌತಿಯವರೆಗೆ 33 ದಿವಸಗಳ ಕಾಲ ನಿತ್ಯವೂ ಬೆಳಿಗ್ಗೆ ಸಂಜೆ ೨ ಸಲ ಇಷ್ಟಲಿಂಗಾರ್ಚನೆ, ಬಸವ ಗುರು ಪೂಜೆ, ವಚನ ಸಾಹಿತ್ಯ ಪಾರಾಯಣ-ಪಠಣ (ಸೂಕ್ತ ಜ್ಞಾನವು ಲಭ್ಯವಾಗುತ್ತಿದ್ದರೆ ಪ್ರವಚನ ಶ್ರವಣ) ಮಾಡಬೇಕು. ಈ ಅವಧಿಯಲ್ಲಿ ಅಧ್ಯಾತ್ಮಿಕ ಸಾಧನೆಗೆ ಹೆಚ್ಚು ಸಮಯ ಕೊಡುವ ಪರಿಪಾಠ ಬೆಳೆಸಿಕೊಳ್ಳಬೇಕು.

ವಚನ ಸಾಹಿತ್ಯದ ಜ್ಞಾನವಿಲ್ಲದೆ ಅಜ್ಞಾನಿಗಳಾಗಿ ವರ್ತಿಸಿ ಹಲವಾರು ದೇವತೆಗಳ ಪೂಜೆ ಮಾಡುವುದನ್ನು ತೊರೆದು ಏಕದೇವೋಪಾಸನೆ, ಏಕಗುರೂಪಾಸನೆ ಅಳವಡಿಸಿಕೊಳ್ಳುವುದು ಅಗತ್ಯವಿದೆ. ಶ್ರಾವಣದಲ್ಲಿ ಮಂಗಳಗೌರಿ ಹಬ್ಬ, ನಾಗಪಂಚಮಿ ಆಚರಿಸಬಾರದು. ನಾಗರ ಕಲ್ಲಿಗಾಗಲೀ, ಹುತ್ತಕ್ಕಾಗಲೀ ಹಾಲೆರೆಯುವ ಮೂಢತನ ಬಿಡಬೇಕು. ಹೊಸದಾಗಿ ವಿವಾಹವಾದವರು ಶುಭಾಕಾಂಕ್ಷಿಗಳಾಗಿ ಮಂಗಳಗೌರಿ ಪೂಜೆಯ ಬದಲು ಸತ್ ಸಂಕಲ್ಪದೊಡನೆ ಧರ್ಮಪಿತ ಬಸವಣ್ಣನವರ ಪೂಜಾವ್ರತವನ್ನೇ ಮಾಡಬೇಕು.

ಬಸವ ಪಂಚಮಿ ವ್ರತ

ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿಯಂದು. (30-7-1196) ಆದ್ದರಿಂದ ಬಸವ ಪಂಚಮಿ ವ್ರತವನ್ನು, ಸದ್ಭಕ್ತರು ಕೈಗೊಳ್ಳುವುದು ಒಳ್ಳೆಯದು. ಶ್ರಾವಣ ಅಮವಾಸ್ಯೆಯ ಮರುದಿವಸ, ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಅದರಲ್ಲಿ ಧರ್ಮಪಿತ ಬಸವಣ್ಣನವರ ಭಾವಚಿತ್ರ ಇಟ್ಟು ಅದನ್ನು ಮತ್ತು ಮಂಟಪವನ್ನು ಸುಂದರವಾಗಿ ಅಲಂಕರಿಸಬೇಕು. ಬೆಳಿಗ್ಗೆ ಮತ್ತು ಸಂಜೆ ಸ್ನಾನ ಮತ್ತು ಇಷ್ಟಲಿಂಗಾರ್ಚನೆ ಮಾಡಿ, ಬಸವ ಗುರುಪೂಜೆಯನ್ನು ಮಾಡಬೇಕು. ಪ್ರತಿಪದೆಯ ದಿನ ಬೆಳಿಗ್ಗೆ ಪೂರ್ತಿ ಪೂಜಾವ್ರತವನ್ನು ಮಾಡಬೇಕು. ಉಳಿದ ದಿನ ಬೆಳಿಗ್ಗೆ-ಸಂಜೆ 108 ಬಸವಲಿಂಗ ಮಂತ್ರ ಪಠಣ ಮಾಡಿ, ಆರು ದಿವಸಗಳ ಅವಧಿಯಲ್ಲಿ ಪ್ರತಿನಿತ್ಯ ಬಸವಣ್ಣನವರ 108 ವಚನಗಳನ್ನು ಪಾರಾಯಣ-ಪಠಣ ಮಾಡಬೇಕು. ಬಸವ ಪಂಚಮಿ ದಿನ ತಮ್ಮ ಮನೆಯಲ್ಲಿ ಮಾತ್ರವಲ್ಲ ಸಾಮೂಹಿಕವಾಗಿ ನಡೆಯುವ ಶರಣ-ಸಮಾಗಮದಲ್ಲಿ ಪಾಲ್ಗೊಂಡು ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗಿಗಳಾಗಬೇಕು.

ಬಸವ ಪಂಚಮಿ ಮರುದಿನ ತಾಯಿ ನೀಲಾಂಬಿಕೆ ಲಿಂಗೈಕ್ಯಳಾದ ನೀಲಮ್ಮ ಷಷ್ಠಿಯ ದಿನ. ಅಂದು ಸಂಜೆಗೆ ೧೨ ಪೂಜೆ-ಪಾರಾಯಣ ಪೂರ್ತಿಯಾಗುತ್ತದೆ. ಶ್ರಾವಣ ಶುದ್ಧ ಷಷ್ಠಿಯಂದು ಸಂಜೆ ತಮ್ಮ ಬಂಧು-ಮಿತ್ರರು, ಓಣಿಯ ಜನರನ್ನು ಆಹ್ವಾನಿಸಿ ಮಹಾಮಂಗಲ ಮಾಡಿ ಎಲ್ಲರಿಗೂ ಪ್ರಸಾದ ವಿತರಣೆ ಮಾಡಬೇಕು. ದೊಡ್ಡ ಪ್ರಮಾಣದಲ್ಲೇ ಪ್ರಸಾದ ವಿತರಣೆ ಮಾಡಬೇಕೆಂದೇನೂ ಇಲ್ಲ. ಅವರವರ ಶಕ್ತ್ಯಾನುಸಾರ ಪ್ರಸಾದ ವಿತರಣೆ, ವಚನ ಸಾಹಿತ್ಯ ವಿತರಣೆ ಮುಂತಾದ್ದನ್ನು ಮಾಡಬೇಕು.

ಶ್ರಾವಣ ಮಾಸ ಪೂರ್ತಿ ವಚನ ಸಾಹಿತ್ಯ ಪಾರಾಯಣ ಇಟ್ಟುಕೊಂಡು ಭಾದ್ರಪದ ಚೌತಿಯ ದಿವಸ ಶ್ರಾವಣ ಮಾಸದ ವ್ರತಾಚರಣೆಯನ್ನು ಮುಕ್ತಾಯ ಮಾಡಬೇಕು.

ಬಸವ ಧರ್ಮ ಪೀಠ
ಕೂಡಲಸಂಗಮ

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ

ಏಪ್ರಿಲ್-ಮೇ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು

(ಹಿಂದಿನ ತಿಂಗಳ ಸಂಚಿಕೆಯಿಂದ ಮುಂದುವರೆದಿದೆ)

ಬಸವ ಧರ್ಮ ಪೀಠ ಕಟ್ಟಡ ನಿಧಿಗೆ

ಶರಣೆ. ಜ್ಯೋತಿ ಚಂದ್ರಸೇನ ಚವ್ಹಾಣ, ಬೆಂಗಳೂರು	ರೂ.51,000=00
ಶರಣೆ. ಯಲ್ಲವ್ವ ಸಣ್ಣಮಲ್ಲಪ್ಪ ದೊಡ್ಡವಾಡ, ಮಾದನಭಾವಿ	ರೂ. 5001-00
ಶರಣ. ಹೆಚ್.ಎಸ್. ನವೀನ್ ಮತ್ತು ಶರಣೆ. ಅನಸೂಯಮ್ಮ, ಮೈಸೂರು	ರೂ. 3001-00

ಗುರುಕಾಣಿಕೆ

ಶರಣ. ಶಿವಮೂರ್ತಿ ಪಟೇಲ್ ವೀರಣ್ಣ, ಚಂದಕವಾಡಿ	ರೂ. 5001-00

ಏಪ್ರಿಲ್-ಮೇ ತಿಂಗಳ ಭಾನುವಾರಗಳಂದು ಬೆಂಗಳೂರಿನ ಬಸವ ಮಂಟಪದಲ್ಲಿ ಶರಣ ಸಂಗಮ-ವಾರದ ಸಾಮೂಹಿಕ ಪ್ರಾರ್ಥನೆಯ ನಂತರ

ಗಣಪ್ರಸಾದ (ಭೋಜನ)ಕ್ಕೆ 1500 ರೂ.ಗಳನ್ನು ಕೊಟ್ಟ ದಾಸೋಹಿಗಳು

1-4-2001	ಶರಣೆ.	ಮಂಗಳಾ ಮತ್ತು ಟಿ.ಎಸ್.ಮಲ್ಲಿಕಾರ್ಜುನಯ್ಯ, ಬೆಂಗಳೂರು.
8-4-2001	ಶರಣೆ.	ಶಕುಂತಲಾ ಮತ್ತು ಶರಣ ಪುಟ್ಟಸಿದ್ದಪ್ಪ, ಬೆಂಗಳೂರು
15-4-2001	ಶರಣ.	ಪರಮೇಶ್ವರ, ಚೋಳರ ಪಾಳ್ಯ
22-4-2001	ಶರಣ.	ಬಾಬೂರಾವ್ ಬೀದರ್, ಹೊಸಕೋಟೆ
29-4-2001	ಶರಣೆ.	ನಿರ್ಮಲಾ ಮತ್ತು ಶರಣ. ಬಿ.ಜಯದೇವ, ಬೆಂಗಳೂರು
6-5-2001	ಶರಣ.	ಚನ್ನಬಸಪ್ಪ ಲಿಂಗಾಯತ್, ಬೆಂಗಳೂರು
13-5-2001	ಶರಣ.	ಪಂಚಾಕ್ಷರಿ, ಬಸವೇಶ್ವರ ನಗರ, ಬೆಂಗಳೂರು
20-5-2001	ಶರಣೆ.	ವಿಮಲಮ್ಮ ವೀರಬಸಪ್ಪ ಮತ್ತು ಶಿವಪುತ್ರ, ಅರುಣ, ಬೆಂಗಳೂರು
27-5-2001	ಶರಣೆ.	ಕಾತ್ಯಾಯಿನಿ ಮತ್ತು ಶರಣ. ನಾಗರಾಜ, ನೆಲಮಂಗಲ

ಬಸವ ಧರ್ಮ ಪೀಠದ ದಾಸೋಹನಿಧಿಗೆ

1111-00 ರೂ. ಕೊಟ್ಟ ಧನ ದಾಸೋಹಿಗಳು

ಶರಣರುಗಳಾದ :

ಶಿವಾನಂದ ಶಿವನಗೌಡ ಹೊಳೆಹಡಗಲಿ, ಮಾದನಭಾವಿ
ಶಂಕರಪ್ಪ ಕಲ್ಲಪ್ಪ ಬಡಿಗೇರ, ಮಾದನಭಾವಿ
ಸರೋಜಮ್ಮ ರಾಮಸಿಂಗಪ್ಪ, ಮೈಸೂರು
ಅನ್ನದಾನೇಶ ಹರದಾರಿ, ಹುಬ್ಬಳ್ಳಿ
ನಾಗಲಾಂಬಿಕೆ ಚಂದ್ರಶೇಖರ್, ತಿಪಟೂರು
ಶಿವಕುಮಾರ ಲಕ್ಷ್ಮಪ್ಪ ಬಣಕಾರ, ಹುಬ್ಬಳ್ಳಿ
ಡಾ॥ ವಿ.ಆರ್. ಕಲಗೊಂಡ, ಬಿಜಾಪುರ
ಎಂ.ಎಸ್.ವಿಲಾಸ್, ಬೆಂಗಳೂರು
ಗೀತಾ, ಬೆಂಗಳೂರು
ಎಂ.ಬಿ. ಪಾರ್ವತಮ್ಮ, ಬೆಂಗಳೂರು
ಎಂ.ಎಲ್. ಮರಿಯಪ್ಪ, ಬೆಂಗಳೂರು
ಎಸ್.ಎಂ. ಮುದಲಪ್ಪ, ಬೆಂಗಳೂರು

ಬಿ. ಬೋರಪ್ಪ, ಬೆಂಗಳೂರು
ಸುಬ್ಬಮ್ಮ, ಬೆಂಗಳೂರು
ಎಂ. ಆರ್. ಬೇಳೂರಯ್ಯ ಸುಬ್ಬಲಕ್ಷ್ಮಮ್ಮ, ಬೆಂಗಳೂರು.
ರಾಮಚಂದ್ರಯ್ಯ, ಬೆಂಗಳೂರು
ಎಸ್. ರಾಜೂ ಮತ್ತು ಮಕ್ಕಳು, ಬೆಂಗಳೂರು
ಎನ್. ಸಂಜೀವರೆಡ್ಡಿ, ಬೆಂಗಳೂರು
ತಿರುಮಲಮ್ಮ ರಾಜಣ್ಣ, ಬೆಂಗಳೂರು
ಅನಸೂಯಾದೇವಿ ಎಲ್. ಸುಬ್ಬರಾಯಪ್ಪ, ಬೆಂಗಳೂರು
ಹೇಮಲತಾ, ಬೆಂಗಳೂರು
ಸಿ. ಶಿವಣ್ಣ, ಬೆಂಗಳೂರು
ಹೆಚ್.ಎಸ್. ಲಕ್ಷ್ಮಿ, ಬೆಂಗಳೂರು
ಲಿಂಗಮ್ಮ, ಬೆಂಗಳೂರು
ಹೆಚ್.ಸಿ. ಬಸವರಾಜು, ಬೆಂಗಳೂರು
ಎ. ವರಲಕ್ಷ್ಮಿ ಶ್ರೀಧರ್, ಬೆಂಗಳೂರು
ಎಂ. ನಾರಾಯಣಮ್ಮ, ಬೆಂಗಳೂರು
ಭಾಗ್ಯಲಕ್ಷ್ಮಿ ಹೆಚ್.ಸಿ. ಶ್ರೀನಿವಾಸಮೂರ್ತಿ, ಬೆಂಗಳೂರು
ಪುರುಷೋತ್ತಮರಾಜು, ಬೆಂಗಳೂರು
ಚನ್ನಬಸಪ್ಪ, ವೀರಾಪುರ
ಗುರುಸಿದ್ದಪ್ಪ, ವೀರಾಪುರ
ವೀರಭದ್ರಯ್ಯ, ವೀರಾಪುರ
ಸಿದ್ಧಲಿಂಗಯ್ಯ, ನೆರಳೆಕೆರೆ
ಜೆ. ಚಿಕ್ಕಣ್ಣ, ಚಿಕ್ಕತಿಮ್ಮನಹಟ್ಟಿ
ಪಾಲಪ್ಪ ಹನುಮಂತನಾಯ್ಕ, ಚಿಕ್ಕತಿಮ್ಮನಹಳ್ಳಿ
ಪುಟ್ಟಣ್ಣ ಚಿಕ್ಕಣ್ಣ, ಚಿಕ್ಕತಿಮ್ಮನಹಳ್ಳಿ
ವೀರಯ್ಯ, ಮೈಸೂರು
ಉಮಾ ಚಂದ್ರನ್, ಮೈಸೂರು

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲೆಂದು ಹಾರೈಸುತ್ತೇವೆ. -ಮಾತಾಜಿ

-ಮುಂದುವರಿಯುವುದು

ಹುಬ್ಬಳ್ಳಿ ನವನಗರದ ಕೆ.ಹೆಚ್.ಬಿ. ಕಾಲನಿಯಲ್ಲಿರುವ
ಶರಣ. ಬಿ.ಜಿ.ಹೊಸಗೌಡರ ಅವರ ನಿವೇಶನದಲ್ಲಿ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ

ಅವರ ದಿವ್ಯ ಸನ್ನಿಧಿಯಲ್ಲಿ, ದಿ. 15-4-2001ರಂದು ಆರಂಭವಾಗಿ ಪ್ರತಿನಿತ್ಯ ಸಂಜೆ 6-30ರಿಂದ 9ರವರೆಗೆ ನಡೆಯುತ್ತಿಲಿರುವ ದ್ವಿತೀಯ ಮಹಿಳಾ ಜಗದ್ಗುರುಗಳಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ವಿಶ್ವಧರ್ಮ ಪ್ರವಚನ ಮುಕ್ತಾಯ ಸಮಾರಂಭದ ನಿಮಿತ್ತ ಭಾನುವಾರ ದಿ.27-5-2001ರಂದು ಬಸವ ತತ್ತ್ವ ಸಮಾವೇಶವನ್ನು ಏರ್ಪಡಿಸಲಾಗಿದೆ. ವಿವರ ಮುಂದಿನ ಸಂಚಿಕೆಯಲ್ಲಿ.

☹ಸಮಸ್ಯೆ ? - ☺ಸಮಾಧಾನ !

ಪ್ರವೀಣಕುಮಾರ, ದಾವಣಗೆರೆ- ಸಮಾಜದ ಅಂತಸ್ಸತ್ವವನ್ನೇ ಅಲ್ಲಾಡಿಸುತ್ತಿರುವ ಲಿಂಗಾಯತ ಧರ್ಮದ ಸ್ಥಾಪಕರ ವಿವಾದಕ್ಕೆ ಕನಿಷ್ಠ ಕಾಲು ಶತಮಾನ ವಿರಾಮಕೊಡೋಣ ಎಂದು ದಾವಣಗೆರೆಯ ಜನತಾವಾಣಿ ಸಂಪಾದಕರಾದ ಹೆಚ್.ಎನ್. ಷಡಕ್ಷರಪ್ಪನವರು ದಾವಣಗೆರೆಯಲ್ಲಿ ದಿನಾಂಕ 05-04-2001ರಂದು ನಡೆದ ಜಂಗಮರ ಸಮಾವೇಶದಲ್ಲಿ ನುಡಿದರು. ಇದು ಒಳ್ಳೆಯ ಸಲಹೆಯಲ್ಲವೆ?

★ ವಿವೇಚನಾ ರಹಿತವಾದ ಸಲಹೆ. ತಮ್ಮ ಪತ್ರಿಕೆಯ ಬೆಳವಣಿಗೆ ದೃಷ್ಟಿಯಿಂದ ಅವರಿಗೆ ಗುರುವರ್ಗದವರೂ ಬೇಕು, ವಿರಕ್ತರೂ ಬೇಕು, ಸಾಧು ಲಿಂಗಾಯತರೂ ಬೇಕು, ಬಸವ ಭಕ್ತರೂ ಬೇಕು. ಹೀಗಾಗಿ ಅವರವರ ವೇದಿಕೆಗೆ ಸೂಕ್ತ ಕಾಣುವ ಮಾತುಗಳನ್ನು ಆಡುತ್ತಾರೆ. ಇಂಥ ವಿಚಾರಧಾರೆಯ ಮೇಲೆ ಸಮಾಜವನ್ನು ಕಟ್ಟಲು ಆಗದು

ಹರಿದ ಸೋಣೆಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನು ಸುಂಕಕಂಜಿ
ಇರುಳೆಲ್ಲ ಕಳೆಯಿತ್ತು ಬರಿಗೋಣಿ ಉಳಿಯಿತ್ತು
ಅಳಿಮನವನ ಭಕ್ತಿ ಇಂತಾಯಿತ್ತು ರಾಮನಾಥಾ.

ಎಂಬಂತೆ ಈ ಸಲಹೆ ಇದೆ. 15-16ನೆಯ ಶತಮಾನದಿಂದೀಚೆಗೆ ಧರ್ಮಗುರು ಬಸವಣ್ಣನವರ ಸ್ಥಾನ ಪಲ್ಲಟಿಸಿ ಲಿಂಗಾಯತ ಸಮಾಜ ತನ್ನ ತಳ ಕಿತ್ತುಕೊಂಡುದರಿಂದಲೇ ಇಂದಿನ ದುಃಸ್ಥಿತಿ ಎದುರಿಸುತ್ತಿದೆ. ಹೆಮ್ (ಕೈ ಹೊಲಿಗೆ) ಹಾಕುವವ ದಾರದ ತುದಿಗೆ ಗಂಟು ಹಾಕದೆ ಹೊಲಿದಂತೆ, ಬಾಬ್ಬಿನ ದಾರ ಇಲ್ಲದೆ ಬರೀ ಮೇಲಿನ ದಾರ ಇಟ್ಟು ಹೊಲಿಗೆ ಯಂತ್ರ ಓಡಿಸಿದಂತೆ ಈ ಸಲಹೆ. ಅನ್ಯ ಧರ್ಮಗಳವರು ಚೀಲ ತುಂಬಿ ಹೊಲಿಗೆ ಹಾಕಿಟ್ಟಿದ್ದಾರೆ. ಈ ಸಮಾಜವಿನ್ನೂ ತಳಕಿತ್ತು ಖಾಲಿ ಚೀಲವಾಗಿಯೇ ಇದೆ. ನಾವು 1988ರಲ್ಲಿ ಶರಣ ಮೇಳದ ಮೂಲಕ ಷಟ್‌ಸೂತ್ರ ಗುರುತಿಸಿದ ಮೇಲೆ ಸಮಾಜದ ಚೀಲ ನಿಧಾನವಾಗಿ ತುಂಬುತ್ತಿದೆ. ಧರ್ಮಗುರುವನ್ನು ಮರೆತರೆ ಮುಂದೇನೂ ಸಾಧನೆ ಸಾಧ್ಯವಾಗದು. ಮೊದಲು ಖಚಿತವಾಗಬೇಕಾದುದೇ ಅದು. ಈಗಿರುವ ಹತ್ತಾರು ಗುಂಪುಗಳಿಗಿಂತಲೂ ಬಸವ ಭಕ್ತರು, ಬಸವ ಭಕ್ತರಲ್ಲದ(ವಿರೋಧಿ)ವರು ಎಂಬ ಎರಡೇ ಗುಂಪಾಗುವುದು ಬಹಳ ಸೂಕ್ತ

ಮಂಜುಳಾ ಪಾಟೀಲ್, ಹುಬ್ಬಳ್ಳಿ- ತಾವು ಸ್ವಯಂ ಘೋಷಿತ ಜಗದ್ಗುರು ಎಂದು ಕೆಲವು ಮಠಾಧೀಶರು ಮತ್ತು ವೀರಶೈವ ಗಣ್ಯರು ವ್ಯಂಗ್ಯವಾಡುವರಲ್ಲ. ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?

★ ಸಂಸ್ಕೃತದಲ್ಲಿ ಒಂಧು ಸುಂದರ ಸುಭಾಷಿತವಿದೆ.

ನಾಭಿಷೇಕೋ ನ ಸಂಸ್ಕಾರಃ ಸಿಂಹಸ್ಯ ಕ್ರೀಯತೆ ವನೇ
ವಿಕ್ರಮಾರ್ಜಿತ ಸತ್ವಸ್ಯ ಸ್ವಯಮೇವ ಮೃಗೇಂದ್ರತಾ

ಕಾಡಿನಲ್ಲಿ ಇರುವ ಸಿಂಹಕ್ಕೆ ಯಾರೂ ಪಟ್ಟಾಭಿಷೇಕ ಸಂಸ್ಕಾರ ನೀಡುವುದಿಲ್ಲ. ಆದರೆ ಅದು ತನ್ನ ಸ್ವಯಾರ್ಜಿತ ಪರಾಕ್ರಮದಿಂದ ಮೃಗರಾಜ, ವನರಾಜ ಎನ್ನಿಸಿಕೊಳ್ಳುತ್ತದೆ. ಅದೇ ರೀತಿ ನಾವು ಮಾಡಲ್ಪಟ್ಟ ಗುರುಗಳಲ್ಲ ; ಆದ (self made) ಗುರುಗಳು. ಆದ್ದರಿಂದ ಸ್ವಯಂ ಘೋಷಿತ ಜಗದ್ಗುರು ಎಂದು ಯಾರಾದರೂ ವ್ಯಂಗ್ಯವಾಡಿದರೆ ಅದನ್ನು ಗುಣಗ್ರಾಹಕ ಅಭಿನಂದನೆ ಎಂದು ತಿಳಿಯಬೇಕು. ಏಕೆಂದರೆ ಮತ್ಸರವು ಮೆಚ್ಚುಗೆಯ ಇನ್ನೊಂದು ಮುಖ. ವೀರಶೈವರಿಗೆ ನೇರವಾಗಿ ಹೊಗಳಲು ಆಗದೆ ಈ ರೀತಿ ಹೊಗಳುವರು. ಅದನ್ನು ಅರ್ಥ ಮಾಡಿಕೊಳ್ಳುವ ಬುದ್ಧಿವಂತಿಕೆ ನಿಮಗೆ ಇರಬೇಕು ಅಷ್ಟೆ !

ಆನಂದ ಗುಡುಸ, ರಾಷ್ಟ್ರೀಯ ಬಸವ ದಳ, ಬೆಳಗಾಂವ. -ಬೈಲಹೊಂಗಲದ ಮೂರು ಸಾವಿರ

ಮಠಾಧೀಶರು ಎಂದೆಂದೂ ತುಟಿ ಪಿಟಕ್ ಎಂದು ಬಾಯಿ ತೆರೆಯದವರು ಬೆಳಗಾವಿಯಲ್ಲಿ ಒಂದು ದಿನ ಹೀಗೆ ಪತ್ರಿಕಾ ಹೇಳಿಕೆ ಕೊಟ್ಟರು. ಮಾತೆ ಮಹಾದೇವಿಯವರು ಸ್ವಯಂ ಘೋಷಿತ ಜಗದ್ಗುರುಗಳು. ಅವರಿಗೆ ಯಾರೂ ಬೆಲೆ ಕೊಡಬಾರದು. ವಚನಾಂಕಿತ ವಾಪಸ್ಸು ಪಡೆಯುವವರೆಗೆ ಅವರ ವಿರುದ್ಧ ಹೋರಾಟ ಮಾಡಬೇಕು ಎಂದು ಕೇಳಿ ಆಶ್ಚರ್ಯವಾಯಿತು. ವಚನ ಸಾಹಿತ್ಯದ ಬಗ್ಗೆ ಎಂಥಾ ಕಳಕಳಿ ಅವರಲ್ಲಿ ಇದ್ದಕ್ಕಿದ್ದಂತೆಯೇ ಬಂದಿದೆ ಎಂದು.

★ ವಿಧಾಯಕ ಕೆಲಸ ಮಾಡಲು ಪ್ರತಿಭೆ ಬೇಕು, ಟೀಕೆ ಮಾಡಲು ಬಾಯಿ ಚಪಲವೇ ಸಾಕು. ಸ್ವಯಂ ಘೋಷಿತರೇ ಜಗತ್ತಿನಲ್ಲಿ ಅತ್ಯಂತ ಕೀರ್ತಿಶಾಲಿಗಳು. ಅವರ ಸಾಧನೆ ಬಿಸಿ ಅನ್ನದಂತೆ ಸ್ವಯಂ ಗಳಿಸಿದ್ದು, ಉತ್ತಮ. ಬೇರೊಬ್ಬರು ಕಟ್ಟಿದ ಮಠಕ್ಕೆ ಗುರುವಾದುದು ತಂಗಳ ಅನ್ನದಂತೆ, ಮಧ್ಯಮ. ನೆಪೋಲಿಯನ್ ರಾಜನಾದುದು, ಶಂಕರಾಚಾರ್ಯರು ಪೀಠ ಸ್ಥಾಪಕರಾದುದು, ಬುದ್ಧ, ಏಸು, ಮೊಹಮ್ಮದ್, ಬಸವಣ್ಣನವರು ಪ್ರವಾದಿಗಳಾದುದು ಎಲ್ಲ ಅಪ್ರತಿಮ ಸಾಧನೆ. ನಮ್ಮನ್ನು ಟೀಕೆ ಮಾಡಿದರೆ ಪತ್ರಿಕೆಗಳಲ್ಲಿ ತಮ್ಮ ಹೆಸರು ಬರುತ್ತದೆ ಎಂಬ ಏಕೈಕ ಆಸೆಯಿಂದಲೂ ಬೈಲಹೊಂಗಲದ ಶ್ರೀಗಳು ಟೀಕೆ ಮಾಡಿರಬಹುದು ಬಿಡಿ, ಇದೊಂದು ಗಂಭೀರ ವಿಷಯವಲ್ಲ.

ಪಾರ್ವತಿ ಹುಡುಗಿ, ಗುಲಬರ್ಗಾ- ನೀವು ಶರಣ ತತ್ವಕ್ಕೆ ಅಪಚಾರವೆಸಗುತ್ತಿದ್ದೀರಿ ಎಂದು ಬಸವ ಕೇಂದ್ರದವರು ಅಪಪ್ರಚಾರ ಮಾಡುತ್ತಿದ್ದಾರಲ್ಲ ?!

★ ಅಹುದು ; ನಮಗೂ ಇದು ಆಶ್ಚರ್ಯ ಹುಟ್ಟಿಸುತ್ತಿದೆ. ಮುರುಘೇಶಾಯ ನಮಃ ಎಂದು ಜಪಿಸುತ್ತಿದ್ದವರಿಗೆ ಬಸವಲಿಂಗಾಯ ನಮಃ ಎನ್ನುವಂತೆ ಮಾಡಿದವರೇ ನಾವು. ಹೊಸ ದಿಗಂತ ಎಂಬ ಒಂದು ಭಾ.ಜ.ಪ ಪತ್ರಿಕೆ ಬರುತ್ತದೆ. ಬೇರೆ ಕೆಲವು ಪತ್ರಿಕೆಗಳಲ್ಲಿ ಸಿಗದ ಅಮೂಲ್ಯ ಲೇಖನ ಬರುತ್ತವೆ ಎಂದು ಅದನ್ನು ಓದುತ್ತಿರುತ್ತೇನೆ. ಒಂದು ದಿನ 26-3-2001 ಹೊಸ ದಿಗಂತ ಬಂದಿತು. ಹಿಂದಿನ ದಿನ ಯುಗಾದಿಯ ನಿಮಿತ್ತ ಬೇರೆ ಎಲ್ಲ ಪತ್ರಿಕೆಗಳೂ ರಜೆ ಮಾಡಿದ್ದವು. ಹೀಗಾಗಿ ಅವು ಬರಲಿಲ್ಲ, ಆಗ ಯಾರಾದರೂ, ''ಹಿಂದುಗಳ ಪವಿತ್ರ ಹಬ್ಬ ಯುಗಾದಿ. ಯುಗಾದಿ ದಿನ ರಜೆ ಮಾಡಲಿಲ್ಲ. ಇವರಿಗೆ ಹಿಂದುತ್ವದ ಅಭಿಮಾನವಿಲ್ಲ'' ಎಂದು, ಕಾಶ್ಮೀರಿ ಬ್ರಾಹ್ಮಣ ರಾಜೀವರ ಸಂತತಿಯಾದ ತನ್ನ ಮಕ್ಕಳನ್ನು ಕ್ಯಾಥೋಲಿಕ್ ಕ್ರಿಶ್ಚಿಯನ್ ಎಂದು ಬರೆಸಿರುವ ಸೋನಿಯಾಜಿಯವರ ಅನುಯಾಯಿಗಳು ಹೇಳಿದರೆ ನಂಬಲು ಸಾಧ್ಯವಾದೀತೆ ? ಬೇರೆ ಪತ್ರಿಕೆ ಪ್ರಕಟವಾಗದ ದಿನ ತಮ್ಮದನ್ನು ಪ್ರಕಟಿಸಿ, ಜನಪ್ರಿಯತೆ ಹೆಚ್ಚಿಸಿಕೊಂಡು ಹಿಂದು ಧರ್ಮವನ್ನು ಬಲಗೊಳಿಸಬೇಕು ಎಂದೇ ಅವರು ಯುಗಾದಿ ದಿನ ರಜೆ ಮಾಡಿರಲಿಕ್ಕಿಲ್ಲ. ಹಾಗೆ ನಾವು ಮಾಡುವ ಪ್ರತಿ ಕಾರ್ಯ, ಇಡುವ ಪ್ರತಿ ಹೆಜ್ಜೆ ಶರಣ ತತ್ವವನ್ನು ಬಲಪಡಿಸಲೇ ವಿನಾ ಅಪಚಾರ ಮಾಡಲು ಅಲ್ಲ.

ಹೆಸರು ಬೇಡ, ಬೆಂಗಳೂರು ವಾಸಿ.- ನಾನೊಬ್ಬ ಲಿಂಗಾಯತ, ಕಲ್ಯಾಣ ಕಿರಣದ ಅಭಿಮಾನಿ ಓದುಗ. ನಾನು ಮತ್ತು ನನ್ನ ಪತ್ನಿ, ಒಂದು ವಿಲಕ್ಷಣ ಸಮಸ್ಯೆ ಎದುರಿಸುತ್ತಿದ್ದೇವೆ. ಮದುವೆಯಾಗಿ ಹಲವಾರು ವರ್ಷಗಳಾದರೂ ಮಕ್ಕಳಾಗಲಿಲ್ಲ. ವೈದ್ಯರಲ್ಲಿ ತೋರಿಸಿಕೊಂಡಾಗ ಆಘಾತಕರ ಸುದ್ದಿ ಕಾದಿತ್ತು. ನನ್ನಲ್ಲಿ ದೋಷವಿದೆ. ಪತ್ನಿಗೆ ಮಕ್ಕಳಾಗಲು ತೊಂದರೆಯಿಲ್ಲ. ವೈದ್ಯರು ಕೃತಕ ಗರ್ಭಧಾರಣೆಯಿಂದ ಮಕ್ಕಳನ್ನು ಪಡೆಯಲು ಸಾಧ್ಯ ಎಂದು ಹೇಳಿದ್ದಾರೆ. ಆದರೆ ನಾವಿಬ್ಬರೂ ದ್ವಂದ್ವದಲ್ಲಿ ಬಳಲುತ್ತಿದ್ದೇವೆ. ನೀವು ಬರೆದ ಕೆಳದಿ ಚೆನ್ನಮ್ಮ ಕಾದಂಬರಿಯಲ್ಲಿ ಇಂಥದೊಂದು ಸಂದರ್ಭ ಉಲ್ಲೇಖಿಸಿ ತಾವು ಚಿತ್ರಿಸಿದ್ದೀರಿ. ಚೆನ್ನಮ್ಮಾಜಿ ಮಕ್ಕಳಾಗದಿದ್ದರಷ್ಟೇ ಅಂಥ ಸಂದರ್ಭ ಬೇಡ ಎಂದುದು ನನಗೆ ಮೆಚ್ಚುಗೆಯಾಗಿತ್ತು. ವೈದಿಕ ಧರ್ಮದ ನಿಯೋಗ ಪದ್ಧತಿ ನಮಗೆ ಜಿಗುಪ್ಸೆ ಹುಟ್ಟಿಸಿತ್ತು.

ನನ್ನ ಪತ್ನಿಗೂ ಇದು ಸಂದಿಗ್ಧತೆ ಉಂಟು ಮಾಡಿದೆ. ಪರಪುರುಷನ ಪಿಂಡವನ್ನು ಧರಿಸಲು ಇಷ್ಟವಿಲ್ಲ, ಇದು ಹಾದರವಾದೀತು ಎನ್ನುತ್ತಾಳೆ. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಧರ್ಮಪೀಠದ ಮುಂದಾಳುಗಳಾಗಿ ನಮಗೆ ಏನು ಸಲಹೆ ಕೊಡುವಿರಿ ?

★ ಇದೊಂದು ಸಾಮಾಜಿಕ-ಧಾರ್ಮಿಕ ಸಮಸ್ಯೆಯೇ ಸರಿ. ಇಂಥ ಕ್ಲಿಷ್ಟ ಸನ್ನಿವೇಶಗಳು ಬಂದಾಗ ಧಾರ್ಮಿಕ-ಸಾಮಾಜಿಕ ನೇತಾರರು ಒಟ್ಟುಗೂಡಿ ಚರ್ಚಿಸಬೇಕಾದುದು ಅತ್ಯವಶ್ಯವಿದೆ. ಆದರೇನು ಮಾಡುವುದು ಲಿಂಗಾಯತ ಸಮಾಜದ ಧಾರ್ಮಿಕ ಮುಂದಾಳುಗಳು ನವಗ್ರಹಗಳಂತೆ, ಒಬ್ಬೊಬ್ಬರ ಮುಖ ಒಂದೊಂದು ದಿಕ್ಕಿಗೆ ! ಸಮಸ್ಯೆಯನ್ನು ಈಗ ವಿಶ್ಲೇಷಿಸೋಣ.

1. ಲಿಂಗಾಯತ ಧರ್ಮ ದೇವ ಆಧಾರಿತ ಅಧ್ಯಾತ್ಮಿಕ ಒಲವುಳ್ಳ ಧರ್ಮ. ಅದರ ಉನ್ನತ ಧ್ಯೇಯದ ಪ್ರಕಾರ ಮಕ್ಕಳನ್ನು ಹೊಂದುವುದೇ ಪರಮೋನ್ನತ ಗುರಿಯಲ್ಲ ; ತನ್ನನ್ನು ತಾನು ದೇವನಿಗೆ ಅರ್ಪಿಸಿಕೊಳ್ಳುವುದು, ಶರಣತ್ವ ಗಳಿಸುವುದು ನಿಜವಾದ ಗುರಿ. ಜಗತ್ತಿನ ಜನರೆಲ್ಲ ತನ್ನವರೇ ಎಂದು ಭಾವಿಸಿ ವಿಶ್ವಕುಟುಂಬಿಯಾಗುವುದು ಬಲು ಶ್ರೇಷ್ಠ.

2. ಅಂಥ ಮಾನಸಿಕ ಸ್ಥಿತಿ ಸಾಧ್ಯವಿಲ್ಲದಿದ್ದರೆ ವಾತ್ಸಲ್ಯ ತೃಪ್ತಿಗಾಗಿ, ಮುಪ್ಪಿನ ಕಾಲದ ಆಸರೆಗಾಗಿ ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡು ಸಾಕುವುದು ಎರಡನೆಯ ದಾರಿ.

3. ತಮ್ಮದೇ ಮಗುವು ಬೇಕೆಂದರೆ ಯಾರೋ ಅಪರಿಚಿತ ದಾನಿಯ ಕೊಡುಗೆಯಿಂದ, ಪತ್ನಿಯು ಆರೋಗ್ಯಕರವಾಗಿರುವುದರಿಂದ ಮಗುವನ್ನು ಪಡೆಯುವುದು ಮೂರನೆಯ ದಾರಿ. ನೀವು ದಂಪತಿಗಳು ಮೂರನೆಯ ದಾರಿ ಆಯ್ದುಕೊಳ್ಳಲು ನಿರ್ಧರಿಸಿದರೆ ಆಗ ಮೊದಲೇ ಇದು ಹಾದರ ಎಂಬ ಪಾಪ ಪ್ರಜ್ಞೆಯನ್ನು ಉಭಯತರೂ ಮನಸ್ಸಿನ ಆಳದಿಂದ ತೆಗೆದುಹಾಕಬೇಕು. ಏಕೆಂದರೆ ಇಲ್ಲಿ ಆ ಅಪರಿಚಿತ ವ್ಯಕ್ತಿಯ ನೇರ ಸಂಪರ್ಕ ಬರುವುದಿಲ್ಲ. ಮಹಾಭಾರತದ ನಿಯೋಗಕ್ಕೂ , ಅದನ್ನು ಚೆನ್ನಮ್ಮಾಜಿ ತಿರಸ್ಕರಿಸುವುದಕ್ಕೂ ಇಲ್ಲಿಯ ಸಂದರ್ಭಕ್ಕೂ ಹೋಲಿಕೆ ಇಲ್ಲ. ನಿಯೋಗದಲ್ಲಿ ಆ ಕಾಲದಲ್ಲಿ ಪರಪುರುಷನ ನೇರ ಸಂಪರ್ಕ ಇರುತ್ತಿತ್ತು. ಪತಿಯನ್ನು ವಂಚಿಸಿ, ದೈಹಿಕ ಕಾಮನೆಗಾಗಿ ಸ್ತ್ರೀಯು ಪರಪುರುಷನ ಸ್ನೇಹ ಮಾಡಿದರೆ ಆಗ ಅದು ವ್ಯಭಿಚಾರವಾಗುತ್ತದೆ. ನೀವು ಸ್ವತಃ ಇಲ್ಲಿ ತಿಳಿದೇ ಕ್ಷೇತ್ರಜವಾಗಿ ಗರ್ಭಧಾರಣೆ ಮಾಡಿಸುವುದರಿಂದ ಹಾದರವಾಗದು. ಆದ್ದರಿಂದ ಮಾನಸಿಕ ಪಾಪ ಪ್ರಜ್ಞೆ ಬೇಡ. ಅನವಶ್ಯಕವಾಗಿ ಹೊಯ್ದಾಡದೆ ಸೂಚಿಸಿದ 3 ಪರಿಹಾರಗಳಲ್ಲಿ ಒಂದನ್ನು ಆಯ್ದುಕೊಳ್ಳಿರಿ.

ಓರ್ವ ಶರಣ ಮಾರ್ಗಿ, ತುಮಕೂರು- ಹಲವಾರು ಭಕ್ತರು ಪೂಜ್ಯ ಶ್ರೀ ಸಿದ್ಧಗಂಗಾ ಶ್ರೀಗಳನ್ನು ಆಧುನಿಕ ಬಸವಣ್ಣ ಎಂದು ಸ್ತುತಿಸುವರಲ್ಲ. ಇದು ಸರಿಯೆ ?

★ ಪೂಜ್ಯ ಸಿದ್ಧಗಂಗಾ ಶ್ರೀಗಳನ್ನು ಅವರ ಭಕ್ತರು ಸ್ತುತಿಸಿದಂತೆ ಇನ್ನಿತರ ಸ್ವಾಮಿಗಳ ಹಿಂಬಾಲಕರು ಅವರವರ ಸ್ವಾಮಿಗಳನ್ನು ವಿಶ್ವಗುರು ಬಸವಣ್ಣನವರಿಗೆ ಹೋಲಿಸಿ, ಸ್ತುತಿ ಮಾಡುವ ಅಪಚಾರ ಮಾಡುತ್ತಾರೆ. ಇದು ಬಹಳ ದೊಡ್ಡ ತಪ್ಪು, ವಚನಾಂಕಿತವನ್ನು ನಾನು ಬದಲಾಯಿಸಿದ್ದಕ್ಕಿಂತ ಘೋರ ಅಪಚಾರ. ನಿಜವಾದ ಬಸವ ನಿಷ್ಠರಾದರೆ ಹಾಗೆ ಹೇಳಿಸಿಕೊಂಡವರು ತಕ್ಷಣವೇ ಪ್ರತಿಕ್ರಿಯೆ ನೀಡಿ, ''ಧರ್ಮಗುರು ಬಸವಣ್ಣನವರ ಸ್ಥಾನ ಪರಮೋನ್ನತ. ಅವರಿಗೆ ಸಮಗೊಳಿಸಿ ಬೇರಾರನ್ನೂ ಹೊಗಳುವ ಕೆಲಸ ಅಪಚಾರಾತ್ಮಕ. ನೀವು ನಮ್ಮ ನಿಜವಾದ ಭಕ್ತರಾದರೆ ಹಾಗೆ ಹೊಗಳಬಾರದು,'' ಎಂದು ತಾಕೀತು ಮಾಡಬೇಕು. ಪೂಜ್ಯ ಸಿದ್ಧಗಂಗಾ ಶ್ರೀಗಳನ್ನು ಆಧುನಿಕ ಬಸವಣ್ಣ ಎಂದು ಕರೆದರೆ 12ನೆಯ ಶತಮಾನದಲ್ಲಿ ಜನಿಸಿ ಏಕದೇವೋಪಾಸನೆ ಬೋಧೆ ಮಾಡಿದ ಲಿಂಗನಿಷ್ಠ ಬಸವಣ್ಣನವರು 20ನೆಯ ಶತಮಾನದಲ್ಲಿ ಅವತರಿಸಿ ಗಂಗೆ-ಗಣಪತಿ-ಆಯುಧ ಪೂಜೆ ಮಾಡಲು ಹೇಳಿದರು, ಮಾಡಿದರು ಎಂದು ಮೂಢ ಭಕ್ತರು ಊಹಿಸಲು ಅವಕಾಶ ನೀಡಿದಂತಾಗುವುದಿಲ್ಲವೆ ? ಇತಿಹಾಸದಲ್ಲಿ

ಏಸುವಿಗೆ, ಮೊಹಮ್ಮದರಿಗೆ, ಬುದ್ಧನಿಗೆ ಸಮಗಟ್ಟಿ ಆ ಧರ್ಮೀಯರು ಯಾರನ್ನೂ ಸ್ತುತಿಸರು. ಸಾಕ್ಷಾತ್ ಪ್ರಭುದೇವರೇ ಹೇಳಿಲ್ಲವೆ ?'' ಶಿವನಾಗಲುಬಹುದು ಬಸವನಾಗಲು ಬಾರದು'' ಎಂದು.

ಸಿದ್ದರಾಮಪ್ಪ ಮಾಲಿ ಪಾಟೀಲ್, ಯರಮರಸ್,' ರಾಯಚೂರು- ಶ್ರೀ ಸಿದ್ಧರಾಮ ಶಿವಾಚಾರ್ಯರು, ಕೌಳೂರು ಇವರು ಬಾಯಿಗೆ ಬಂದಂತೆ ಬಸವ ಗುರು ನಿಂದನೆಯನ್ನು ಮಸ್ಕಿ ಎಂಬ ಒಂದು ಊರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾಡಿದರು. ಪ್ರಜಾವಾಣಿಯಲ್ಲಿ ಬಹುದೊಡ್ಡ ಅಕ್ಷರಗಳಲ್ಲಿ ಮುದ್ರಣಗೊಂಡಿತು. ಪತ್ರಿಕೆಯವರು ಬಸವ ನಿಂದೆ ಮಾಡಿದುದನ್ನು ಅಷ್ಟು ದೊಡ್ಡದಾಗಿ ಏಕೆ ಪ್ರಕಟಿಸುವರೋ ?

★ ಪತ್ರಿಕೆಯವರಲ್ಲಿ ಸದುದ್ದೇಶವಿದೆ. ಸೂರ್ಯನು ನಡು ನೆತ್ತಿಯಲ್ಲಿದ್ದರೆ ಮುಖವೆತ್ತಿ ಸೂರ್ಯನಿಗೆ ಉಗುಳುವ ಮೂರ್ಖತನವನ್ನು ಕೌಳೂರು ಸ್ವಾಮಿಗಳು ಮಾಡಿರುವುದರಿಂದ ಅವರ ಮೂರ್ಖತನವನ್ನು ಜಗತ್ತಿಗೆ ತೋರಿಸಲೆಂದೇ ಪತ್ರಿಕೆಯವರು ಪ್ರಕಟಿಸಿದಂತೆ ಕಾಣುತ್ತದೆ. ಪಾಪ ಪಂಚಾಚಾರ್ಯ ಸ್ವಾಮಿಗಳು ದಿನ ದಿನಕ್ಕೂ ಪಸರಿಸುತ್ತಿರುವ ಬಸವ ಭಾಸ್ಕರನ ಕೀರ್ತಿ ಪ್ರಭೆ ನೋಡಲಾರದೆ ಮೈ ಎಲ್ಲ ಪರಚಿಕೊಳ್ಳುತ್ತಿದ್ದಾರೆ.

ಪುಷ್ಪಾವತಿ, ಚಾಮರಾಜಪೇಟೆ, ಬೆಂಗಳೂರು.- ಜಯನಗರ ವೀರಶೈವ ಮಹಾಸಭಾ ಘಟಕವು ವೇದ ತರಗತಿಗಳನ್ನು ತೆರೆದು ವೀರಶೈವರಿಗೆ ವೇದಮಂತ್ರಗಳ ಮೂಲಕ ಇಷ್ಟಲಿಂಗ ಪೂಜೆ ಮಾಡುವುದನ್ನು ಕಲಿಸುವರಂತೆ. ಇದೆಂಥಾ ವಿಪರ್ಯಾಸ ?

★ ಕುರಾನ್ ಮೂಲಕ ಕ್ರೈಸ್ತ ಧರ್ಮ ಕಲಿಸುತ್ತೇವೆ ಎಂಬಷ್ಟು ತಾತ್ವಿಕವಾಗಿ ವೈರುಧ್ಯತೆಯಿಂದ ಕೂಡಿವೆ. ಈ ಮಾತುಗಳು. ವೇದಗಳು ಹೇಳುವ ರುದ್ರಾಭಿಷೇಕ ಕುರಿತು ಒಂದು ವಿಮರ್ಶಾತ್ಮಕ ಪುಸ್ತಕವನ್ನು ಬರೆದಿದ್ದೇನೆ. ಅಚ್ಚಿನಲ್ಲಿದೆ. ಇಷ್ಟಲಿಂಗ ಪೂಜೆ ಸೃಷ್ಟಿಕರ್ತನ ಪೂಜೆ, ಶಿವನ ಪೂಜೆಯಲ್ಲ. ಅದರ ಪೂಜಾ ವಿಧಾನ ಇರುವುದು ವಚನ ಸಾಹಿತ್ಯದಲ್ಲಿ. ವೇದ ಮಂತ್ರಗಳನ್ನು ಹೇಳುತ್ತ ಇಷ್ಟಲಿಂಗ ಪೂಜೆಯನ್ನು ಮಾಡುವುದೆಂದರೆ- ಪೂಜ್ಯ ಲಿಂಗಾನಂದ ಅಪ್ಪಾಜಿಯವರು ಹೇಳುತ್ತಿದ್ದರು "**ತಾಯಿಯ ಪಾದವನ್ನು ಹಿಡಿದು ಹೆಂಡತಿಯ ಮಂತ್ರ ಹೇಳಿದಂತೆ.**'' ವೀರಶೈವರು ಏನಾದರೂ ಮಾಡಿಕೊಳ್ಳಲಿ ಪರಮತೀಯರ ಬಗ್ಗೆ ಏಕೆ ಚಿಂತಿಸುತ್ತೀರಿ ? ಲಿಂಗಾಯತರಿಗೆ ಸ್ವಧರ್ಮವನ್ನು ಬೋಧಿಸುವಲ್ಲಿ ಹೆಚ್ಚಿಗೆ ಆಸಕ್ತಿ ವಹಿಸಿರಿ.

ಶರಣ. ಸದಾಶಿವಪ್ಪ, ಚಾಮರಾಜನಗರ.- ಓರ್ವ ಮಹಿಳೆ ಕೂಡಲ ಸಂಗಮಕ್ಕೆ ಬಂದು ನಿಮ್ಮಲ್ಲಿದ್ದು, ನೀವು ಬೇಗನೆ ಜಂಗಮ (ಕಾವಿ) ದೀಕ್ಷೆ ಕೊಡಲಿಲ್ಲ ಎಂದು ಬೇಸರಗೊಂಡು ಬೇರೊಂದು ಮಠಕ್ಕೆ ಹೋಗಿ ಎರಡೇ ದಿವಸಗಳಲ್ಲಿ ಕಾವಿ ತೊಟ್ಟು ಬಂದಿದ್ದಾರೆ. ನೀವೇಕೆ ಕೊಡಲಿಲ್ಲ ?

★ ನಾವು ಅಷ್ಟು ಬೇಗನೆ ಕಾವಿಯನ್ನು ಕೊಡುವುದಿಲ್ಲ. ನಮಗೆ ಸಂಖ್ಯೆ ಬೆಳೆಸುವುದು ಬೇಕಾಗಿಲ್ಲ. ಸತ್ವ ಬೆಳೆಸುವುದು ಬೇಕಾಗಿದೆ. ನಾವು ಮೊದಲು ಪೂಜೆ, ವಿಧಿ-ವಿಧಾನ, ಪ್ರವಚನ ಎಲ್ಲದರಲ್ಲೂ ತರಬೇತಿ ಕೊಡುತ್ತೇವೆ. ಗುರುವಿನಿಂದ ತಯಾರಾದ ಶಿಷ್ಯನು ಗುರುವನ್ನು ಹೋಲುವಂತೆ, ಒಂದು ವಿಶಿಷ್ಟ ವಿಚಾರಧಾರೆಯಲ್ಲಿ ಸಾಧಕರು ಪಳಗಬೇಕು. ಇವರು ಸ್ವತಂತ್ರವಾಗಿ ನಿರ್ವಹಿಸಬಲ್ಲರು ಎಂಬ ವಿಶ್ವಾಸ ಬಂದಾಗ ಮಾತ್ರ ಜಂಗಮದೀಕ್ಷೆ ಕೊಡುತ್ತೇವೆ. ಶಿಷ್ಯರಾಗಿ ಸೇವೆ ಮಾಡದೆ ಒಮ್ಮೆಲೇ ಗುರುವಾಗಬೇಕೆನ್ನುವವರು ಆದರ್ಶ ತ್ಯಾಗಿಗಳು ಎಂದೂ ಆಗುವುದಿಲ್ಲ.

ಬಸವಶ್ರೀ ಬಾಣೂರು, ಶಿವಮೊಗ್ಗ- ನಾನು ಪ್ರತಿನಿತ್ಯ ಇಷ್ಟಲಿಂಗಾರ್ಚನೆ ಮಾಡುತ್ತೇನೆ, ತಾವು ಬರೆದ ''ಈ ಮಹತ್ ಸೃಷ್ಟಿಯನು'' ಎಂಬ ಗೀತೆಗಳನ್ನು ಹೇಳುತ್ತ. ಮೊದಲು ವಿಭೂತಿಧಾರಣೆ ನಂತರ ರುದ್ರಾಕ್ಷಿಧಾರಣೆ ಮಾಡಿಕೊಂಡು ಮುಕ್ತಿದಾಯಕ ಹೇಳಿ ಬಸವ ಗುರು ಪೂಜೆಯನ್ನು ಮಾಡುತ್ತೇನೆ.

ನಂತರ ಇಷ್ಟಲಿಂಗಾರ್ಚನೆ ಮಾಡುತ್ತೇನೆ. ಇದು ನನಗೆ ತೃಪ್ತಿ ತಂದಿದೆ. ಈ ವಿಧಾನ ಸರಿಯೋ ತಪ್ಪೋ ತಿಳಿಸಿರಿ.

★ ಬಸವಣ್ಣನ ನೆನೆದು ಮಾಡುವ ಭಕ್ತಿ ನಡೆವುದಯ್ಯ, ನೆನೆಯದೆ ಮಾಡುವ ಭಕ್ತಿ ಎಳತಟವಯ್ಯ ಎಂಬ ಶ್ರೀ ಸಿದ್ಧರಾಮೇಶ್ವರರ ವಾಣಿಯಂತೆ ಧರ್ಮಪಿತರು, ಲಿಂಗಾಯತ ಧರ್ಮದ ಗಣ (ಸಮುದಾಯ) ಪತಿ (ಒಡೆಯ) ಯೂ ಆಗಿರುವ ಬಸವಣ್ಣನವರನ್ನು ಮೊದಲು ಪೂಜಿಸಿ, ನಂತರ ಇಷ್ಟಲಿಂಗ ಪೂಜೆ ಮಾಡುವುದು ಸೂಕ್ತ. ಲಿಂಗಧಾರಣೆ ಇರದ ಚಿಕ್ಕಮಕ್ಕಳು ಧರ್ಮಗುರುವಿನ ಆರಾಧನೆ ಮಾಡಿ ಶಾಲೆಗೆ ಹೋಗಬೇಕು.

ಧರ್ಮಗುರುವಿನ ಸಂಕ್ಷಿಪ್ತ ಪೂಜೆ ಮಾಡುವಾಗ ನೀನು ಮಾಡುತ್ತಿರುವಂತೆ ವಿಭೂತಿ, ರುದ್ರಾಕ್ಷಿ ಧಾರಣೆ ಆದ ಮೇಲೆ ಗುರುಪೂಜೆ ಮಾಡಬೇಕು. ಬಸವೇಶ್ವರರ ಪೂಜಾವ್ರತವನ್ನು ಪೂರ್ತಿಯಾಗಿ ಮಾಡುವುದೇ ಇದ್ದರೆ ಆಗ ದಿನ ನಿತ್ಯದಂತೆ ಮೊದಲು ಸಂಕ್ಷಿಪ್ತ ಗುರುಪೂಜೆ ಮಾಡಿ, ಇಷ್ಟಲಿಂಗಾರ್ಚನೆ ಮಾಡಿ ಕರುಣೋದಕ-ಕರುಣಪ್ರಸಾದ ಸ್ವೀಕರಿಸಿ ನಂತರ ಪೂರ್ತಿ ಪೂಜಾವ್ರತ ಮಾಡಬೇಕು. ಇಷ್ಟಲಿಂಗಾರ್ಚನೆ ಇಲ್ಲದೆ ಪೂಜಾವ್ರತ ಮಾಡಬಾರದು. ಲಿಂಗಾಯತೇತರರು ಮಾಡುವಾಗ ಅವರು ಕೇವಲ ಬಸವೇಶ್ವರ ಪೂಜಾವ್ರತ ಮಾಡುವರು.

ಚಂದ್ರಶೇಖರ್ ಅಕ್ಕಲಕೋಟೆ, ಗದಗ- ನೀವು ಬಸವ ಮೂರ್ತಿ ಸ್ಥಾಪಿಸಿ, ಬಸವೇಶ್ವರ ಪೂಜಾವ್ರತ ಅಳವಡಿಸಿ ಬಸವ ತತ್ತ್ವ ವಿರೋಧಿ ಕೆಲಸ ಮಾಡಿದ್ದೀರೆಂದು ಕೆಲವು ಬಸವಾಭಿಮಾನಿ ಸ್ವಾಮಿಗಳು ಹೇಳುವರಲ್ಲ. ನಿಮ್ಮ ಪ್ರತಿಕ್ರಿಯೆ ಏನು ?

★ ನಾವು ಬಸವ ಮೂರ್ತಿ ಸ್ಥಾಪನೆ, ಭಾವಚಿತ್ರ ಪೂಜೆ, ಪೂಜಾವ್ರತ ಶುರು ಮಾಡಲು ಶ್ರೀ ಸಿದ್ಧರಾಮೇಶ್ವರರ ವಚನವೇ ಪ್ರೇರಣೆ.

ಬಸವನ ಮೂರ್ತಿಯೇ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೇ ಜ್ಞಾನಕ್ಕೆ ಮೂಲ
ಬಸವಾ ಬಸವಾ ಎಂಬುದೇ ಭಕ್ತಿಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ.

ನನ್ನನ್ನು ಟೀಕಿಸುವ ಮುನ್ನ ಕೆಳಕಂಡ ಮಾತುಗಳನ್ನು ಹೇಳಿದ್ದಕ್ಕಾಗಿ ವೀರ ಗಣಾಚಾರಿ ಮಡಿವಾಳ ಮಾಚಿದೇವರ ಈ ವಚನ ಗಮನಿಸಿರಿ.

ನೆನೆವೆನಯ್ಯ ಬಸವಣ್ಣ
ನಿಮ್ಮ ಚರಣ ಕಮಲವೆನ್ನ ಮನದಲ್ಲಿ ಸಾಹಿತ್ಯವಹನ್ನಕ್ಕ....
ಪೂಜಿಸುವೆನಯ್ಯ ಬಸವಣ್ಣ
ನಿಮ್ಮ ಪ್ರಸಾದವೆನ್ನ ತನುವಹನ್ನಕ್ಕ
<u>ನಿಮ್ಮ ಮೂರ್ತಿಗೊಳಿಸುವೆನಯ್ಯಾ ಬಸವಣ್ಣ</u>
ಅಹಂ ಸೊಹಂ ಎಂಬ ಶಬ್ದವುಳ್ಳನ್ನಕ್ಕ.

ಮಲ್ಲೇಶಪ್ಪ ಬೆಲ್ಲದ, ರಾಣೆಬೆನ್ನೂರು.- ಪಂಚಾಚಾರ್ಯರು ಬಸವ ಪೂರ್ವದವರು ಎಂದು ಪಂಚಪೀಠದವರು ವಾದಿಸುತ್ತಾರಲ್ಲ. ಇದಕ್ಕೆ ಐತಿಹಾಸಿಕ ದಾಖಲೆಗಳಿವೆಯೆ?

★ ಪಂಚಾಚಾರ್ಯರ ಹೆಸರಿನಲ್ಲಿ ಈಗ ಕಟ್ಟುತ್ತಿರುವ ಮದುವೆ ಮಂಟಪಗಳು, ಕಾಲೇಜುಗಳೇ ಸದ್ಯಕ್ಕೆ ದೊರೆಯುವ ಐತಿಹಾಸಿಕ(?) ದಾಖಲೆಗಳು.

-ಅಮರೇಶ ಗಡಾದ, ಧಾರವಾಡ.- ಧರ್ಮಪಿತ ಬಸವಣ್ಣನವರು ಅತ್ತಲಿತ್ತ ಹೋಗದಂತೆ ಹೆಳವನ ಮಾಡು, ಅಂಧಕನ ಮಾಡು, ಕಿವುಡನ ಮಾಡು ಎನ್ನುವರಲ್ಲ. ಇದು

ಪ್ರಾಯೋಗಿಕವಾಗದಲ್ಲವೆ? ನೋಡದೆ, ನಡೆಯದೆ, ಕೇಳದೆ ಇರಲು ಹೇಗೆ ಸಾಧ್ಯ?

★ ವಚನವನ್ನು ಸರಿಯಾಗಿ ಅರ್ಥಮಾಡಿರಿ. ನಡೆಯದಂತೆ ಹೆಳವನ ಮಾಡು, ನೋಡದಂತೆ ಅಂಧಕನ ಮಾಡು, ಕೇಳದಂತೆ ಕಿವುಡನ ಮಾಡು ಎಂದೇನೂ ಧರ್ಮಗುರುವು ಹೇಳಿಲ್ಲ. ಧರ್ಮ ಮತ್ತು ನೀತಿಗಳು ಮನುಷ್ಯನಿಗೆ ಒಂದು ವಿಶಿಷ್ಟ ದಾರಿಯನ್ನು ಹಾಕಿಕೊಟ್ಟಿವೆ. ಆ ದಾರಿಯಲ್ಲಿ ಸಾಗಬೇಕು. ಅದನ್ನು ಬಿಟ್ಟು ಅತ್ತ-ಇತ್ತ ಹೋಗಬಾರದು. ನೋಡದಂತೆ ಕುರುಡನಾಗಬೇಕಿಲ್ಲ. ನೀತಿಗೆ ಹೊರತಾಗಿ ಏನೇನೋ ನೋಡಿ ಮನಸ್ಸನ್ನು ಕೆಡಿಸಿಕೊಳ್ಳಬಾರದು. ಮತ್ತೊಂದ ಕೇಳದಂತೆ ಕಿವುಡನಾಗಬೇಕು ಅಂದರೆ ಜೀವನಕ್ಕೆ, ತನ್ನ ವ್ಯವಹಾರಕ್ಕೆ ಅಗತ್ಯವಿದ್ದುದನ್ನು ಹೇಳಬೇಕು, ಕೇಳಬೇಕು. ಅನಗತ್ಯವಾದುದನ್ನು ಕೇಳಿಸಿಕೊಳ್ಳದೆ ಕಿವುಡುತನ ತೋರಬೇಕು. ಹೀಗೆ ಅಗತ್ಯ ಚಟುವಟಿಕೆಗೆ ಇಂದ್ರಿಯಗಳನ್ನು ಬಳಸಿಕೊಳ್ಳಬೇಕು. ಅನಗತ್ಯ ಮತ್ತು ಅಪಾಯಕಾರಿ ಚಟುವಟಿಕೆಗೆ ಬಳಸಿಕೊಳ್ಳಬಾರದು ಎಂಬುದೇ ಈ ವಚನದ ಮರ್ಮ.

ಜಿ.ರಾಜಶೇಖರ್, ಚಿತ್ರದುರ್ಗ.- ಚಿತ್ರದುರ್ಗ ಬೃಹನ್ಮಠದ ವಿದ್ಯಾಸಂಸ್ಥೆಗೆ ಮೆಡಿಕಲ್ ಕಾಲೇಜ್ ಮಂಜೂರಾದುದು ನಿಮಗೆ ಸಂತೋಷವನ್ನುಂಟು ಮಾಡಿದೆಯೋ, ದುಃಖವನ್ನೋ, ಮತ್ಸರವನ್ನೋ ಬೇಗ ಹೇಳಿ?

★ ಭಯವನ್ನು ಉಂಟುಮಾಡಿದೆ! ಇನ್ನಷ್ಟು ದುಡ್ಡು ಸೇರಿ ಗೂಂಡಾಗಿರಿ, ಭಯೋತ್ಪಾದಕತೆ ಮತ್ತಷ್ಟು ಹೆಚ್ಚಾದೀತೆ? ಎಂಬ ಆತಂಕ ಉಂಟು ಮಾಡಿದೆ. ಹಾಗಾಗದೆ ಬಸವ ಕೃಪೆಯಿಂದ ಮಾನವೀಯತೆ, ದಯೆ ಬೆಳೆದರೆ ಸಮಾಜಕ್ಕೆ ಉಪಕಾರವಾದೀತು.

ಪೂಜ್ಯ ಮಾತೆ ಕಸ್ತೂರಿ, ಬಸವ ಗಂಗೋತ್ರಿ.- ಪ್ರಾರಂಭಾವಸ್ಥೆಯಲ್ಲಿ ಸರ್ವವಿಧದಲ್ಲೂ ಪರಿಶುದ್ಧವಾಗಿದ್ದ ವಚನ ವಾಹಿನಿ ಕಾಲಾನಂತರದಲ್ಲಿ, ಹಂತ ಹಂತವಾಗಿ, ವ್ಯವಸ್ಥಿತವಾಗಿ ಕಲುಷಿತಗೊಳ್ಳುತ್ತಾ ಬಂದಿತಲ್ಲ?! ಇದರ ಹಿಂದೆ, ತನ್ನನ್ನು ತಾನೇ ಸಂಪೂರ್ಣವಾಗಿ ತೊಡಗಿಸಿಕೊಂಡು ಕೆಲಸ ಮಾಡಿದ ಸಂಘ-ಸಂಸ್ಥೆ ಯಾವುದಾದರೂ ಇದೆಯೆ? ಇದ್ದರೆ ಅದು ಯಾವುದು?

★ ಅಂಥ ಯಾವುದೇ ಒಂದು ವಿಶಿಷ್ಟ ಸಂಸ್ಥೆಯಿಲ್ಲ. ಆದರೆ ವೈದಿಕ ಮತ್ತು ಶೈವ ಮೂಲದಿಂದ ಬಂದು ಇಷ್ಟಲಿಂಗಧಾರಣೆ ಮಾಡಿಕೊಂಡ ಆರಾಧ್ಯರು, ಕಾಳಾಮುಖರು, ಪಾಶುಪತರು, ವೀರಶೈವರು ಮುಂತಾದವರು ಲಿಂಗಾಯತ ಧರ್ಮದ ಪರಿಶುದ್ಧತೆ ಕೆಡಿಸಲು, ಸಾಹಿತ್ಯದ ಶುದ್ಧಿ ಕೆಡಲು ಕಾರಣರು. ಶೈವದ ಪ್ರಭೇದವಾದ ವೀರಶೈವವು ಆಂಧ್ರ, ತಮಿಳುನಾಡುಗಳಿಂದ ಬಂದು ಒಳಸೇರಿ ಅಪಾರ ವಿಕೃತಿ ಉಂಟು ಮಾಡಿತು. ಈ ಹೊತ್ತು ಸಹ ವೀರಶೈವ ವಾದಿಗಳಿಂದ ಬಸವ ಧರ್ಮಕ್ಕೆ ಅನ್ಯಾಯವಾಗುತ್ತಿರುವುದನ್ನು ಕಾಣಬಹುದು.

ಪ್ರಶ್ನೆ- ವಚನ ಸಾಹಿತ್ಯದಲ್ಲಿ ಅಕ್ಷಯ ಪಾತ್ರೆಯಂತೆ ಮೊಗೆದಷ್ಟು ಉಕ್ಕಿ ಬರುವ ಭಕ್ತಿ, ಜ್ಞಾನ ವೈರಾಗ್ಯ ಅನುಭಾವದ ಸಂಪತ್ತಿದೆ. ಲಿಂಗಾಯತರು ವಚನಾಧ್ಯಯನ ಮಾಡಿ ತಮ್ಮನ್ನು ತಾವು ಸರಿಪಡಿಸಿಕೊಂಡರೆ ಸಾಲದೆ? ಅನ್ಯರೊಂದಿಗೆ ವಾದ ಮಾಡಲು ವೇದಾಗಮ, ಉಪನಿಷತ್ತುಗಳನ್ನು ಅಧ್ಯಯನ ಮಾಡಲೇಬೇಕೆ? ಏಕೆಂದರೆ ಲೆಕ್ಕವಿಲ್ಲದಷ್ಟು ಇರುವ ಶಾಸ್ತ್ರ-ಪುರಾಣಗಳನ್ನು ಅಧ್ಯಯನ ಮಾಡಲು ನಮ್ಮ ಆಯುಷ್ಯ ಬಹಳ ಅಲ್ಪವಿದೆ.

★ ಅನ್ಯರೊಡನೆ ವಾದ ಮಾಡಲು ವೇದಾಗಮಗಳ ಅಗತ್ಯವಿಲ್ಲ. ವಚನ ವಾಙ್ಮಯ ಕಲಿಸುವಷ್ಟು ತಾರ್ಕಿಕ ಚಿಂತನ ಶೈಲಿಯನ್ನು ವೇದಾಗಮಪುರಾಣಗಳು ಕಲಿಸವು. ಲಿಂಗಾಯತ ಧರ್ಮದ ಸಂವಿಧಾನ ವಚನ ಸಾಹಿತ್ಯ ; ಅದನ್ನು ಓದುವುದರಿಂದಲೇ ಲಿಂಗಾಯತರಿಗೆ ಸ್ವಧರ್ಮದ ಜ್ಞಾನ ಉಂಟಾಗುತ್ತದೆ. ಅನ್ಯ ಶಾಸ್ತ್ರವನ್ನು ಓದಿ ಸಮಯವನ್ನು ಅಪವ್ಯಯ ಮಾಡಿಕೊಂಡು ಬುದ್ಧಿಯನ್ನು ಕೆಡಿಸಿಕೊಳ್ಳುವುದಕ್ಕಿಂತಲೂ ಲಿಂಗಾಯತರು ವಚನ ಸಾಹಿತ್ಯದ ಮೇಲೆ ತಮ್ಮ ಅಧ್ಯಯನವನ್ನು ಕೇಂದ್ರೀಕರಿಸುವುದು ಒಳಿತು. ಅನ್ಯಧರ್ಮಗಳ ತೌಲನಿಕ ಅಧ್ಯಯನವನ್ನು ನಮ್ಮಂತಹವರಿಗೆ ಬಿಟ್ಟುಬಿಟ್ಟರೆ ಸಾಕು.

ಗುರು ಸ್ತುತಿ

★ ಸಂಗಮವೆಂಬ ಪ್ರಣತೆಯಲ್ಲಿ ನಿಷ್ಠೆಯೆಂಬ ತೈಲವನೆರೆದು
ವಚನಗಳೆಂಬ ಬತ್ತಿಗುಂಟ ಗುರು ಲಿಂಗಾನಂದರು ಮತ್ತು
ಮಾತೆ ಮಹಾದೇವಿಯರೆಂಬ ಜ್ಯೋತಿಯ ಮುಟ್ಟಿಸಲು
ಬೆಳಗಿ ಪ್ರಜ್ವಲಿಸಿತ್ತಯ್ಯಾ ಬಸವ ಪ್ರಕಾಶ,
ಆ ಬೆಳಗಿನೊಳು ಒಪ್ಪುತ್ತಿರ್ದಿತಯ್ಯಾ ಶರಣಮೇಳ
ಆ ಶರಣ ಮೇಳದಲ್ಲಿ ಬೆಳಗುತ್ತಿರ್ದರಯ್ಯಾ
ಅಸಂಖ್ಯಾತ ರಾಷ್ಟ್ರೀಯ ಬಸವ ದಳದ ಶರಣ ಶರಣೆಯರು
ಹಾಗೂ ಬಸವಾಭಿಮಾನಿಗಳು
ಶರಣ ಶರಣೆಯರಿರ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ?
ಶರಣ ಶರಣೆಯರಿರ್ದ ದೇಶ ಪಾವನವೆಂಬುದು ಹುಸಿಯೆ?
ನಮ್ಮ ನಿಶೂನ್ಯ ನಿರಾಳ ಬಸವ ಪ್ರಿಯ ಲಿಂಗದೇವನಲ್ಲಿ
ಎನ್ನ ಪರಮಾರಾಧ್ಯಗುರು ಲಿಂಗಾನಂದರ ಶ್ರೀಪಾದಕ್ಕೆ
ನಮೋ ನಮೋ ಎನುತ್ತಿರ್ದೆನು.

★ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳು
ಪೂರ್ಣತ್ವವನು ಹೊಂದಿ ಜಂಗಮ ಸ್ವರೂಪರಾಗಿ
ಲಿಂಗಾಂಗ ಸಾಮರಸ್ಯದಲ್ಲಿ ಗಾನಯೋಗಿಗಳಾಗಿ
ಜಗತ್ತೆಂಬ ನಂದನವನದಲ್ಲಿ ಅರಿಷಡ್‌ವರ್ಗಗಳನ್ನು
ದಹಿಸಿ, ಉದಾತ್ತೀಕರಿಸಿ ಮಹಾಲಿಂಗವನ್ನು ಹಾಡಿ ಹೊಗಳಿ ಸಾನುರಾಗದಿ
ವಂಚನೆಯಿಲ್ಲದೆ ಹೃದಯಾಕಾಶದಲ್ಲಿ ವಿಹರಿಸಿ
ಜ್ಞಾನಗಂಗೆಯಲ್ಲಿ ಮಿಂದು ಗರ್ವರಹಿತರಾಗಿ
ನಮ್ಮ ನಿಶೂನ್ಯ ನಿರಾಳ ಬಸವ ಪ್ರಿಯ
ಲಿಂಗದೇವನೆಂಬ ಪರಮಾನಂದ ಮಹಾಸಾಗರದಲ್ಲಿ
ಮುಳುಗಿ ಐಕ್ಯರಾದರು ನೋಡಾ.

_ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳು
ಬಸವ ಮಂಟಪ, ಗೋಕಾಕ.

'ಮಾತಾಜಿ' ಎಂಬ ಮೂರಕ್ಷರ

★ 'ಮಾ' ಎಂಬಲ್ಲಿ ಭಕ್ತಿ ಹುಟ್ಟತ್ತು.
'ತಾ' ಎಂಬಲ್ಲಿ ತಾಪ ಕಳೆಯಿತ್ತು.
'ಜಿ' ಎಂಬಲ್ಲಿ ಜೀವನ ಧನ್ಯವಾಯಿತ್ತು.
ಇಂತೀ ಮಾತಾಜಿ ತ್ರಯವೆಂಬಕ್ಷರ
ಮನದಲ್ಲಿ ನೆಲೆಸಿದೊಡೆ ಸದ್ಭಾವ
ನೆಲೆಗೊಂಡಿತ್ತು ನೋಡಾ, ಲೀಲಾವಿನೋದಿ
ಲಿಂಗದೇವ ಮಾತಾಜಿಗೆ ನೀನೊಲಿದ ಕಾರಣ.

-ಬಿ. ಮಹಾದೇವಿ, ಧಾರವಾಡ

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"** ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು


   ವರ್ಗ 'ಬಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 1000/- (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100/-(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080-3325335 / 3322790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ ನಗರ ಯೋಜನೆ
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010



ರಾಷ್ಟ್ರೀಯ ಬಸವ ದಳ, ಧಾರವಾಡ-ಹುಬ್ಬಳ್ಳಿಯ ಶರಣ-ಶರಣೆಯರಿಂದ
ಬಸವ ಜಯಂತಿ ದಿನದಂದು ಪಥ ಸಂಚಲನ



ಕಲ್ಯಾಣ ಕಿರಣ CPMG/KA/BGW-50 ಜೂನ್ -2001
R.NO. 19980/70 WPP (W) - 17



ದಿ.26-4-2001ರಂದು ಧಾರವಾಡದಲ್ಲಿ ಬಸವ ಜಯಂತಿ ಮೆರವಣಿಗೆ ಧಾರವಾಡ-ಹುಬ್ಬಳ್ಳಿ ರಾಷ್ಟ್ರೀಯ ಬಸವ ದಳದ ಪ್ರಮುಖ ಪದಾಧಿಕಾರಿಗಳು